ಬೆಂಗಳೂರು
ಮಂಗಳವಾರ, 16 ಜೂನ್ 2026
ಸಂಪುಟ 33, ಸಂಚಿಕೆ 226, ಪುಟಗಳು 12+4
■ ಬೆಂಗಳೂರು ■ ಮಂಗಳೂರು
■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ
ಹೊಸ ದಿಗಂತ
ಲೋಕಹಿತಂ ಮಮ ಕರಣೀಯಂ

ಅಮೆರಿಕ-ಇರಾನ್ ಶಾಂತಿ ಒಪ್ಪಂದ ಅಂತಿಮ | ೦೫

ಒಪ್ಪಂದ ಸ್ವಾಗತಿಸಿದ ಮೋದಿ | ೦೫

ಕೇರಳ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ | ೦೫

ಕೃಷಿ ಕಾರ್ಯಕ್ಕೆ ಪ್ರಕೃತಿ ವಿಕೋಪ ಅಡ್ಡಿ ಆಗದಂತೆ ನಿಗಾ ವಹಿಸಿ

ಡ್ರೋನ್, ಎಐ ತಂತ್ರಜ್ಞಾನ ತಲುಪಿಸಿ: ಸಿಎಂ ಡಿಕೆಶಿ ಸೂಚನೆ

ಬರ ಎದುರಿಸಲು ಸಜ್ಜಾಗಿ

• ಬೆಂಗಳೂರು: ಬಿತ್ತನೆ ಬೀಜ, ರಸಗೊಬ್ಬರ ಸಮರ್ಪಕ ಪೂರೈಕೆ ಖಾತರಿಗೆ ಸಿಎಂ ಡಿ.ಕೆ. ಶಿವಕುಮಾರ್ ಸೂಚನೆ ನೀಡಿದ್ದು, ಅಧಿಕಾರಿಗಳು ಬರ ಪರಿಸ್ಥಿತಿ ಎದುರಿಸಲು ತುರ್ತು ಕ್ರಮಗಳ ಪೂರ್ವ ಸಿದ್ಧತೆ ಕೈಗೊಳ್ಳಬೇಕು. ಡ್ರೋನ್, ಎಐ ಮತ್ತಿತರ ಆಧುನಿಕ ತಂತ್ರಜ್ಞಾನವನ್ನು ರೈತರಿಗೆ ತಲುಪಿಸುವ ವ್ಯವಸ್ಥೆ ಮಾಡಿ ಎಂದಿದ್ದಾರೆ.

ವಿಧಾನಸೌಧದಲ್ಲಿ ಸೋಮವಾರ ಕೃಷಿ, ರೇಷ್ಮೆ, ತೋಟಗಾರಿಕೆ ಹಾಗೂ ಮೀನುಗಾರಿಕೆ ಸಹಕಾರ ಮತ್ತು ಕೃಷಿ ಮಾರುಕಟ್ಟೆ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ಮುಖ್ಯಮಂತ್ರಿಗಳು, ಪ್ರಕೃತಿವಿಕೋಪಗಳಿಂದ ರೈತರ ಕೃಷಿ ಚಟುವಟಿಕೆಗೆ ತೊಂದರೆ ಆಗಬಾರದು. ಕ್ರಿಮಿನಾಶಕ ಮತ್ತಿತರ ಔಷಧ ಸಿಂಪರಣೆ ಸಲಕರಣೆಗಳ ನೆರವನ್ನು ರೈತರಿಗೆ ಒದಗಿಸಬೇಕು ಎಂದು ಸೂಚನೆ ನೀಡಿದರು.

ಅಧ್ಯಯನ ವರದಿ ನೀಡಿ: ರೈತರ ಆದಾಯ ಹೆಚ್ಚಿಸಲು ಈಗಾಗಲೇ ಸೂಚಿಸಿರುವ ಕ್ರಮಗಳನ್ನು ಸಮರ್ಪಕವಾಗಿ ಜಾರಿ ಮಾಡಬೇಕಿದ್ದು, ಕೃಷಿ ಇಲಾಖೆ ಅಧೀನದಲ್ಲಿರುವ ಐದು ನಿಗಮ ಮತ್ತು ಮಂಡಳಿಗಳ ಸ್ಥಿತಿಗತಿಯ ಅಧ್ಯಯನ ನಡೆಸಿ ವರದಿ ನೀಡಿ. ರೈತರಿಗೆ ನೀಡಬೇಕಾದ ಪೂರಕ ಮಾಹಿತಿಗಳನ್ನು ವರದಿಯಲ್ಲಿ ಉಲ್ಲೇಖಿಸಿ ಎಂದು ಸೂಚಿಸಿದ್ದು, ಕೃಷಿ ಹೊಂಡಗಳಿಗೆ ಬಿದ್ದು ಸಾವನ್ನಪ್ಪುವ ಘಟನೆಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೊಂಡಗಳಿಗೆ ಬೇಲಿ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಇದಕ್ಕೆ ಹಣಕಾಸಿನ ನೆರವು ಸಂಬಂಧ ಅಗತ್ಯ ಯೋಜನೆ ರೂಪಿಸಲು ತಿಳಿಸಿದರು.

ಖಾಲಿ ಹುದ್ದೆ ಭರ್ತಿಗೆ ಕ್ರಮ: ಇತರ ರಾಜ್ಯಗಳಲ್ಲಿರುವ ಮಾದರಿ ಯೋಜನೆ, ಮಾರ್ಗಗಳನ್ನು ಅಧ್ಯಯನ ಮಾಡಿ ರಾಜ್ಯದ ಕೃಷಿ ಸಂಸ್ಕೃತಿ ಮತ್ತು ಬೆಳೆ ಮಾದರಿಗಳಿಗೆ ಅನುಗುಣವಾಗಿ ಕಾರ್ಯರೂಪಕ್ಕೆ ತರಬೇಕು.

➡ ಪುಟ 9

> **ರೈತರಿಗೆ ಸಬ್ಸಿಡಿ ದರದಲ್ಲಿ ಕೊಟ್ಟಿರುವ ಸವಲತ್ತುಗಳು ಎಷ್ಟು ಪ್ರಯೋಜನಕಾರಿಯಾಗಿವೆ ಎನ್ನುವ ಬಗ್ಗೆ ಪರಿಶೀಲನೆ ನಡೆಸಿ. ಸಬ್ಸಿಡಿ ನೀಡಿರುವ ಉದ್ದೇಶ ಜಾರಿ ಆಗುತ್ತಿದೆಯೇ ಎಂಬುದರ ಬಗ್ಗೆ ಅಧಿಕಾರಿಗಳು ವರದಿ ನೀಡಿ.**
> ■ **ಡಿ.ಕೆ. ಶಿವಕುಮಾರ್**, ಸಿಎಂ

ಮಾವು ಬೆಳೆಗಾರರಿಗೆ ನಷ್ಟ ಪರಿಹಾರ

ಈ ವರ್ಷ 1,068 ಕೋಟಿ ರೂ. ಮೌಲ್ಯದ ಮಾವು ಬೆಳೆ ನಾಶ ಆಗಿದ್ದು, ಈ ಪೈಕಿ ಶೇ.25 ರಷ್ಟು ಅಂದರೆ 229 ಕೋಟಿ ರೂ. ಪರಿಹಾರ ಕೊಡಬೇಕಿದೆ. ಕರ್ನಾಟಕ ಸರಕಾರ 114 ಕೋಟಿ ಹಾಗೂ ಕೇಂದ್ರ ಸರಕಾರ 115 ಕೋಟಿ ನಷ್ಟ ಪರಿಹಾರ ಭರಿಸಬೇಕಿದೆ. ಕಾನೂನು ಪ್ರಕಾರ ಮಾವು ಬೆಳೆಗಾರರಿಗೆ ನಷ್ಟ ಪರಿಹಾರ ಸಿಗುವಂತೆ ಗಮನ ಹರಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

ರಫ್ತು ಉತ್ತೇಜಿಸಿ

ಕೆಪೆಕ್ ಮೂಲಕ ರಫ್ತು ಎಷ್ಟು ಹೆಚ್ಚಾಗಿದೆ. ರಫ್ತು ಉತ್ತೇಜಿಸಲು ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಪ್ರಶ್ನಿಸಿದ ಸಿಎಂ, ರಫ್ತು ಉತ್ತೇಜನಕ್ಕೆ ಯೋಜನೆ ರೂಪಿಸಲು ಆರ್ಥಿಕ ಸಲಹೆಗಾರ ಎಲ್.ಕೆ.ಅತೀಕ್, ಎಸಿಎಸ್ ತುಷಾರ ಗಿರಿನಾಥ್‌ಗೆ ಸೂಚಿಸಿದರು.

ಬಡ್ಡಿರಹಿತ ಸಾಲ ದುರ್ಬಳಕೆಗೆ ಬ್ರೇಕ್

ಸಹಕಾರ ಇಲಾಖೆ ಅಡಿಯಲ್ಲಿ ಯಾವ್ಯಾವ ಸಂಸ್ಥೆಗಳಿಗೆ ಚುನಾವಣೆ ಆಗಬೇಕಿದೆಯೋ ಎಲ್ಲದಕ್ಕೂ ಚುನಾವಣೆ ನಡೆಸಬೇಕಿದೆ.

ಕಾರ್ಪೊರೇಟ್ ಬ್ಯಾಂಕ್‌ಗಳು ಕೊಡುವ ಬಡ್ಡಿರಹಿತ ಸಾಲದ ಸೌಲಭ್ಯ ಅಗತ್ಯವಿರುವವರಿಗೆ ತಲುಪುತ್ತಿಲ್ಲ, ಬ್ಯಾಂಕ್‌ನವರೇ ತಮಗೆ ಬೇಕಾದವರ ಹೆಸರಲ್ಲಿ ಸಾಲ ಪಡೆಯುತ್ತಿದ್ದಾರೆ. ರೈತರಿಗೆ ವಂಚನೆ ಆಗಲು ಬಿಡಬಾರದು. 5 ಲಕ್ಷದವರೆಗೂ ಬಡ್ಡಿರಹಿತ ಸಾಲ ಸೌಲಭ್ಯ ದುರುಪಯೋಗ ಆಗುತ್ತಿರುವ ಬಗ್ಗೆ ರೈತರು ನನ್ನ ಬಳಿ ಬಂದು ದೂರುತ್ತಿದ್ದಾರೆ. ಇದಕ್ಕೆ ಕಟ್ಟುನಿಟ್ಟಿನ ಬ್ರೇಕ್ ಹಾಕಬೇಕೆಂದು ಆದೇಶ ನೀಡಿದ ಮುಖ್ಯಮಂತ್ರಿಗಳು, ಅಗತ್ಯ ಇರುವ ಫಲಾನುಭವಿಗಳಿಗೆ ಸಾಲ ಸವಲತ್ತು ತಲುಪುವಂತೆ ನೋಡಿಕೊಳ್ಳಿ ಎಂದರು.

ಎಪಿಎಂಸಿ ಜಾಗಗಳ ಸಂರಕ್ಷಣೆ • ಪುಟ 9

ಧರ್ಮಸ್ಥಳ ವಿರುದ್ಧ ಷಡ್ಯಂತ್ರ | ಸಿಎಂ ಡಿ.ಕೆ.ಶಿವಕುಮಾರ್‌ಗೆ ಸಿ.ಟಿ.ರವಿ ಪತ್ರ

ಸಿಬಿಐನಿಂದ ತನಿಖೆ ನಡೆಸಲು ಒತ್ತಾಯ

• ಬೆಂಗಳೂರು: ಶ್ರೀ ಕ್ಷೇತ್ರ ಧರ್ಮಸ್ಥಳ ಮತ್ತು ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ನಡೆದಿರುವ ಷಡ್ಯಂತ್ರದ ಸಮಗ್ರ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಒತ್ತಾಯಿಸಿ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದಾರೆ.

ಧರ್ಮಸ್ಥಳದ ವಿಚಾರದಲ್ಲಿ ಇತ್ತೀಚೆಗೆ ಹೊರಬರುತ್ತಿರುವ ಬೆಳವಣಿಗೆಗಳು ನನ್ನನ್ನಷ್ಟೇ ಅಲ್ಲದೆ, ಕೋಟ್ಯಂತರ ಭಕ್ತರ ಮನಸ್ಸನ್ನೂ ಆತಂಕ ಮತ್ತು ಅನುಮಾನಗಳನ್ನು ಹುಟ್ಟುಹಾಕಿವೆ. ಈ ಕಾರಣದಿಂದಲೇ ಈ ಪತ್ರ ಬರೆಯುತ್ತಿದ್ದೇನೆ. ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಕಳೆದ ಕೆಲವು ವರ್ಷಗಳಿಂದ ನಿರಂತರವಾಗಿ ಆರೋಪಗಳು, ಅಪಪ್ರಚಾರಗಳು ಮತ್ತು ಅನುಮಾನಗಳ ವಾತಾವರಣ ಸೃಷ್ಟಿ ಮಾಡುತ್ತಿರುವುದನ್ನು ರಾಜ್ಯದ ಜನ ಗಮನಿಸುತ್ತಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈಗ ಉಚ್ಚ ನ್ಯಾಯಾಲಯದ ಮುಂದೆ ಸಲ್ಲಿಕೆಯಾಗಿರುವ ಅರ್ಜಿಯು ಈ ಪ್ರಕರಣಕ್ಕೆ ಮತ್ತೊಂದು ಗಂಭೀರ ಆಯಾಮ ನೀಡಿದೆ. ಮಾಧ್ಯಮ ವರದಿಗಳ ಪ್ರಕಾರ, ಆ ಅರ್ಜಿಯಲ್ಲಿ ನಟ ಪ್ರಕಾಶ್ ರಾಜ್, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣವರ್, ವಿಠಲ್ ಗೌಡ, ಜಯಂತ್ ಹಾಗೂ ಯುಟ್ಯೂಬರ್‌ಗಳಾದ ಸಮೀರ್ ಎಂ.ಡಿ., ಅಜಯ್, ದಿನೇಶ್ ಸೇರಿದಂತೆ ಹಲವರ ಹೆಸರುಗಳನ್ನು ಉಲ್ಲೇಖಿಸಲಾಗಿದೆ.

➡ ಪುಟ 9

> **ಧರ್ಮಸ್ಥಳದ ವಿರುದ್ಧ ನಡೆದಿರುವ ಹುನ್ನಾರವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಪ್ರಕರಣವನ್ನು ರಾಜ್ಯ ಪೊಲೀಸ್ ಇಲಾಖೆಯಿಂದ ತನಿಖೆ ನಡೆಸಿದರೆ ಸಾಕಾಗುವುದಿಲ್ಲ. ಆದ್ದರಿಂದ, ಕೇಂದ್ರ ಮಟ್ಟದ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಮಾತ್ರವೇ ಷಡ್ಯಂತ್ರದ ಹಿಂದಿರುವವರು ಯಾರು ಎನ್ನುವುದು ಬೆಳಕಿಗೆ ಬರಲು ಸಾಧ್ಯ.**
> ■ **ಸಿ.ಟಿ. ರವಿ**, ವಿಧಾನಪರಿಷತ್ ಸದಸ್ಯ

ಹಿಂದು ಶ್ರದ್ಧಾ ಕೇಂದ್ರಗಳ ವಿರುದ್ಧ ಷಡ್ಯಂತ್ರವೇ?

ಇತ್ತೀಚಿನ ದಿನಗಳಲ್ಲಿ ಹಿಂದು ಶ್ರದ್ಧಾಕೇಂದ್ರಗಳು, ಪುರಾತನ ದೇವಾಲಯಗಳು ಮತ್ತು ಸಮಾಜದಲ್ಲಿ ಅಪಾರ ಗೌರವ ಹೊಂದಿರುವ ಧಾರ್ಮಿಕ ಸಂಸ್ಥೆಗಳನ್ನು ಗುರಿಯಾಗಿಸಿಕೊಂಡು ಅಪನಂಬಿಕೆ ಸೃಷ್ಟಿಸುವ ಯಾವುದೇ ದೊಡ್ಡ ಕಾರ್ಯತಂತ್ರದ ಭಾಗ ಇದಾಗಿದೆಯೇ? ಈ ಪ್ರಕ್ರಿಯೆಗೆ ಹೊರಗಿನಿಂದ ಹಣ ಹೂಡಿಕೆಯಾಗಿದೆಯೇ? ರಾಜ್ಯದ ಹೊರಗಿನ ಅಥವಾ ದೇಶದ ಹೊರಗಿನ ಯಾವುದೇ ಸಂಘಟಿತ ಶಕ್ತಿಗಳು ಇದರಲ್ಲಿ ಭಾಗಿಯಾಗಿವೆಯೇ ಎಂಬ ಅನುಮಾನ ಮೂಡುತ್ತಿದೆ.

➡ ಪುಟ 9

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಆರ್ದ್ರ

ದಿನದ ಮಾತು

ಅನುಭವ ಒಳ್ಳೆಯ ಉಪಾಧ್ಯಾಯನಂತೆ. ಅದು ಮೊದಲು ಪರೀಕ್ಷೆ ಮಾಡಿ ನಂತರ ಪಾಠ ಕಲಿಸುತ್ತದೆ.
▲ ನಾಣ್ನುಡಿ

ಕಂಪನಿ ದೊಡ್ಡದಾಗಲಿಕ್ಕೆ, ದೊಡ್ಡ ಸದ್ದು ಮಾಡಲೇಬೇಕಿಲ್ಲ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ

• ಪುಟ ೬

ಕಿರುಸುದ್ದಿ

ಯಾವ ಗ್ಯಾರಂಟಿಯೂ ನಿಲ್ಲೋದಿಲ್ಲ: ಸಿಎಂ ಡಿಕೆಶಿ

• ಬೆಂಗಳೂರು: ಮಹಿಳೆಯರಿಗೆ ಆರ್ಥಿಕ ಶಕ್ತಿ ತುಂಬಲು, ನಮ್ಮ ಸರ್ಕಾರ ಪ್ರೀತಿಯಿಂದ ಕೊಟ್ಟಿರುವ ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು. ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲಾಗುತ್ತಿದೆ ಎಂದು ವಿರೋಧ ಪಕ್ಷಗಳ ಪ್ರಚಾರಕ್ಕೆ ತಿರುಗೇಟು ನೀಡಿದ ಅವರು, ವಿಪಕ್ಷಗಳಿರುವುದೇ ಟೀಕೆ ಮಾಡಲು. ನಾವು ಏನೇ ಒಳ್ಳೆಯದು ಮಾಡಲು ಮುಂದಾದರೂ ಅದಕ್ಕೆ ಅಡ್ಡಗಾಲು ಹಾಕುವುದಕ್ಕೆ ವಿರೋಧ ಪಕ್ಷಗಳಿರುವುದು ಎಂದರು.

➡ ಪುಟ 9

ಹಾರ್ಮುಜ್ ದಾಟಿದ ಭಾರತ ಹಡಗು ದಿಶಾ

• ಪುಟ ೫

ಲಾಂಗ್ ರೇಂಜ್ ಲ್ಯಾಂಡ್ ಅಟ್ಯಾಕ್ ಕ್ರೂಸ್ ಮಿಸೈಲ್ ಪರೀಕ್ಷೆ ಯಶ

• ಪುಟ ೫

ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆ

• ಪುಟ ೩

ರಾಮನಗರ ಶಾಸಕ ಇಕ್ಬಾಲ್ ಹುಸೇನ್‌ಗೆ ಹೃದಯಾಘಾತ

• ಪುಟ ೩

ಮೋದಿ ಕರೆಯ ಪ್ರೇರಣೆ ಚಿನ್ನ ಖರೀದಿಸದ ಕುಟುಂಬ

• ಪುಟ ೫



ಸಿಂಧೂ ಬಳಿಕ ಚೆನಾಬ್ ಅಭಿವೃದ್ಧಿಗೆ ಉತ್ತೇಜನ

• ಪುಟ ೫

ಸುದ್ದಿ ಸಮಗ್ರ

ಭಾರತ ಜತೆಗಿನ ಬಾಂಧವ್ಯ ಉನ್ನತೀಕರಣ | 11 ಒಪ್ಪಂದಕ್ಕೆ ಸಹಿ

ಸ್ಲೊವಾಕಿಯಾ ಸಂಬಂಧ ಸುಮಧುರ

• ಬ್ರಾಟಿಸ್ಲಾವಾ: ಭಾರತ ಮತ್ತು ಸ್ಲೊವಾಕಿಯಾ ಸೋಮವಾರ ತಮ್ಮ ದ್ವಿಪಕ್ಷೀಯ ಬಾಂಧವ್ಯವನ್ನು ಸಮಗ್ರ ಪಾಲುದಾರಿಕೆಯ ಮಟ್ಟಕ್ಕೆ ಉನ್ನತೀಕರಿಸಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಸ್ಲೊವಾಕಿಯಾ ಪ್ರಧಾನಿ ರಾಬರ್ಟ್ ಫಿಕೊ ನಡುವಿನ ಮಾತುಕತೆಯ ನಂತರ ವಲಸೆ, ಡಿಜಿಟಲ್ ತಂತ್ರಜ್ಞಾನ ಮತ್ತು ರಕ್ಷಣೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರವನ್ನು ವಿಸ್ತರಿಸಲು ಉಭಯ ದೇಶಗಳು 11 ಒಪ್ಪಂದಗಳನ್ನು ಅಂತಿಮಗೊಳಿಸಿವೆ.

ಈ ಒಪ್ಪಂದಗಳಲ್ಲಿ, ಕಾರ್ಮಿಕ ವಲಸೆ, ರಕ್ಷಣೆ, ಡಿಜಿಟಲ್ ತಂತ್ರಜ್ಞಾನಗಳು, ಉನ್ನತ ಶಿಕ್ಷಣ, ಕ್ವಾಂಟಮ್ ಸಂವಹನ ಕ್ಷೇತ್ರಗಳಲ್ಲಿ ಆಳವಾದ ಸಹಕಾರ ಒದಗಿಸಲಿವೆ. ಈ ಪಾಲುದಾರಿಕೆ, ಇರುವ ಸಂಬಂಧವನ್ನು ಬಲಪಡಿಸುವ ಮತ್ತು ಆಳವಾದ ಸಹಕಾರಕ್ಕೆ ಹೊಸ ಮಾರ್ಗಗಳನ್ನು ಅನ್ವೇಷಿಸುವ ಉದ್ದೇಶ ಹೊಂದಿದೆ. ಪ್ರಧಾನಿ ಮೋದಿ ತಮ್ಮ ಒಂದು ವಾರದ ಯುರೋಪ್ ಪ್ರವಾಸದ ಭಾಗವಾಗಿ ಬ್ರಾಟಿಸ್ಲಾವಾಕ್ಕೆ ಭೇಟಿ ನೀಡಿದ್ದಾರೆ.

➡ ಪುಟ 9

ತ್ರಿಶೂರ್‌ನಲ್ಲಿ ಸರಸಂಘಚಾಲಕ ಡಾ.ಭಾಗವತ್ ಅಭಿಪ್ರಾಯ

ಆರೆಸ್ಸೆಸ್‌ಗೆ ನೋಂದಣಿ ಅಗತ್ಯವಿಲ್ಲ

- ನಾವು ಬ್ರಿಟಿಷರ ಕಾಲದಿಂದಲೇ ಸಂಘದ ಕೆಲಸ ಆರಂಭಿಸಿದ್ದೇವೆ
- ಇತಿಹಾಸದಿಂದಲೂ ಸಂಘಕ್ಕೆ ಅಡ್ಡಿ ಮಾಡುವ ಕೆಲಸ ನಿರಂತರ
- ಸರ್ಕಾರವೇ ನಿಷೇಧಿಸಿತ್ತು ಎಂದ ಭಾಗವತ್
- ಭಾನುವಾರ ಸಭಿಕರೊಬ್ಬರ ಪ್ರಶ್ನೆಯೊಂದಕ್ಕೆ ಭಾಗವತ್ ಉತ್ತರ

• ತ್ರಿಶೂರ್: ಆರ್‌ಎಸ್‌ಎಸ್ ನೋಂದಣಿ ಬಗ್ಗೆ ಕರ್ನಾಟಕದಲ್ಲಿ ಸುದ್ದಿಯಾಗುತ್ತಿರುವ ನಡುವೆಯೇ, ಆರ್‌ಎಸ್‌ಎಸ್ ಸರಸಂಘಚಾಲಕ ಡಾ. ಮೋಹನ್ ಭಾಗವತ್ ಅವರು ಪ್ರತಿಕ್ರಿಯೆ ನೀಡಿದ್ದು, ಸಂಘಕ್ಕೆ ಯಾವುದೇ ನೋಂದಣಿ ಅಗತ್ಯವಿಲ್ಲ, ಹಾಗೆಯೇ ಇಂಥ ಸಂಗತಿಗಳಿಗೆ ಉತ್ತರಿಸುವುದು ಅಗತ್ಯವಿಲ್ಲ ಎಂದಿದ್ದಾರೆ.

ಕೇರಳದ ತ್ರಿಶೂರ್‌ನಲ್ಲಿ ನಡೆದ ಸಂಘದ 100 ವರ್ಷಗಳ ಪಯಣ ಸಂವಾದ ಕಾರ್ಯಕ್ರಮದಲ್ಲಿ ಸಭಿಕರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಇದಕ್ಕೆ ನಾನು ಪ್ರತಿಕ್ರಿಯಿಸುವ ಅಗತ್ಯವಿಲ್ಲ. ನೋಂದಣಿಯಾಗದ ಅನೇಕ ವಿಷಯಗಳು ನಡೆಯುತ್ತಿವೆ. ನಾವು ಯಾವುದೇ ರಹಸ್ಯವನ್ನು ಕಾಯ್ದುಕೊಂಡಿಲ್ಲ, ನಾವು ತೆರೆದ ಮೈದಾನದಲ್ಲಿ ಕೆಲಸ ಮಾಡುತ್ತಿದ್ದೇವೆ. ಜನರನ್ನು ಕರೆಯುತ್ತಿದ್ದೇವೆ ಮತ್ತು ಅವರಿಗೆ ಸಂಘದ ಬಗ್ಗೆ ಹೇಳುತ್ತಿದ್ದೇವೆ ಎಂದು ಹೇಳಿದರು.

ರಾಜಕೀಯ ಗಿಮಿಕ್: ಇಂಥ ಸಂಗತಿಗಳು ಕೇವಲ ರಾಜಕೀಯದ ಗಿಮಿಕ್‌ಗಳಷ್ಟೇ. ಅದನ್ನು ಮಾಡಲು ಹೋಗಬೇಡಿ. ನಮಗೆ ಇದೆಲ್ಲವೂ ಅಭ್ಯಾಸವಾಗಿದೆ.

➡ ಪುಟ 9

ಗೃಹ ಸಚಿವ ಖರ್ಗೆಯಿಂದ ಆರೆಸ್ಸೆಸ್‌ಗೆ ಸುದೀರ್ಘ ಪತ್ರ

• ಬೆಂಗಳೂರು: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಅವರಿಗೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸುದೀರ್ಘ ಪತ್ರವೊಂದನ್ನು ಬರೆದಿದ್ದಾರೆ. 100 ವರ್ಷಗಳನ್ನು ಪೂರೈಸಿದ್ದಕ್ಕಾಗಿ ಆರ್‌ಎಸ್‌ಎಸ್‌ಗೆ ಅಭಿನಂದನೆ ಸಲ್ಲಿಸಿರುವ ಅವರು, ಸಾಂಸ್ಥಿಕ ಸ್ಥಿತಿಯ ಕುರಿತು ಕಾನೂನು ಸ್ಪಷ್ಟೀಕರಣಕ್ಕಾಗಿ ವಿನಂತಿಸಿಕೊಂಡಿದ್ದಾರೆ. ಅಲ್ಲದೆ, 8 ಪ್ರಶ್ನೆಗಳಿಗೆ ಉತ್ತರಿಸುವಂತೆ ಮನವಿ ಮಾಡಿದ್ದಾರೆ. 100 ವರ್ಷ ಪೂರೈಸಿದ ರಾಷ್ಟ್ರೀಯ ಸ್ವಯಂಸೇವಕ ಸಂಘಕ್ಕೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಭಾರತ, ವಿದೇಶಗಳಲ್ಲಿ 60,000ಕ್ಕೂ ಹೆಚ್ಚು ಶಾಖೆಗಳು, ಕೋಟಿ ಸ್ವಯಂಸೇವಕರನ್ನು ಹೊಂದಿದೆ ಎಂದು ಹೇಳಿಕೊಳ್ಳುವ ಈ ಸಂಸ್ಥೆ ನಿಸ್ಸಂದೇಹವಾಗಿ ಸಾರ್ವಜನಿಕ ಜೀವನ, ಸಮಾಜದಲ್ಲಿ ಗಮನಾರ್ಹ ಪ್ರಭಾವ ಹೊಂದಿದೆ.

➡ ಪುಟ 9

ಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ಹಿನ್ನೆಲೆ

ಇಂದು ರೆಸಾರ್ಟ್‌ನಲ್ಲೇ ಕೈ ಶಾಸಕಾಂಗ ಪಕ್ಷದ ಸಭೆ

• ಬೆಂಗಳೂರು: ವಿಧಾನಪರಿಷತ್ತಿನ 7 ಸ್ಥಾನಗಳಿಗೆ ಜೂ.18 (ಗುರುವಾರ) ರಂದು ನಡೆಯುವ ಚುನಾವಣೆಯಲ್ಲಿ ಅಡ್ಡ ಮತದಾನಕ್ಕೆ ಅವಕಾಶ ಇಲ್ಲದಂತೆ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವು ಸುಗಮವಾಗುವಂತೆ ನೋಡಿಕೊಳ್ಳಲು ಎಲ್ಲ ಕಾಂಗ್ರೆಸ್ ಶಾಸಕರನ್ನು ಮಂಗಳವಾರ (ಜೂ.16)ದಂದು ರೆಸಾರ್ಟ್‌ಗೆ ಕರೆದೊಯ್ಯಲಾಗುತ್ತಿದ್ದು, ಅಲ್ಲಿಯೇ ಶಾಸಕಾಂಗ ಸಭೆ ನಡೆಯಲಿದೆ.

ವಿಧಾನಪರಿಷತ್ತಿನ ಚುನಾವಣೆ ಹಿನ್ನೆಲೆಯಲ್ಲಿ ಮಂಗಳವಾರ(ಜೂ.16) ಸಂಜೆ 6 ಗಂಟೆಗೆ ಬಿಡದಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಈ ಸಭೆಯಲ್ಲಿ ಪಾಲ್ಗೊಳ್ಳುವ ಕಾಂಗ್ರೆಸ್ ಶಾಸಕರು ಮಂಗಳವಾರ ಮತ್ತು ಬುಧವಾರ ಎರಡು ದಿನ ರೆಸಾರ್ಟ್‌ನಲ್ಲೇ ವಾಸ್ತವ್ಯ ಹೂಡಿ ಗುರುವಾರ ಅಲ್ಲಿಂದಲೇ ನೇರವಾಗಿ ವಿಧಾನಸೌಧಕ್ಕೆ ಮತದಾನಕ್ಕೆ ಬರಲಿದ್ದಾರೆ.

➡ ಪುಟ 9

> **ಮಂಗಳವಾರ ನಡೆಯುವ ಶಾಸಕಾಂಗ ಪಕ್ಷದ ಸಭೆಯಲ್ಲಿ ಸುರ್ಜೇವಾಲ ಸೇರಿ ನಮ್ಮ ನಾಯಕರೆಲ್ಲ ಭಾಗಿಯಾಗಲಿದ್ದಾರೆ. ದೂರವಾಣಿ, ಪತ್ರದ ಮೂಲಕ ಎಲ್ಲ ಶಾಸಕರನ್ನು ಆಹ್ವಾನಿಸಲಾಗಿದೆ. ಸದಸ್ಯರು ಬರದಿದ್ದರೆ ವಿಪ್ ಜಾರಿ ಮಾಡುತ್ತೇವೆ. ನಾಲ್ಕೈದು ಶಾಸಕರು ಅನಾರೋಗ್ಯ, ಇತರೆ ಕಾರಣಕ್ಕಾಗಿ ಗೈರಾಗಲಿದ್ದಾರೆ.**
> ■ **ಅಲ್ಲಮಪ್ರಭು ಪಾಟೀಲ್**, ಶಾಸಕಾಂಗ ಪಕ್ಷದ ಕಾರ್ಯದರ್ಶಿ

ವಿಮೆ ಹಣಕ್ಕಾಗಿ ಮಾಜಿ ಸೈನಿಕನ ಹತ್ಯೆಗೈದ ಪತ್ನಿ

ಕೊಲೆ ಕೇಸ್: ಎಫ್‌ಎಸ್ಎಲ್ ಅಧಿಕಾರಿಗಳೂ ಶಾಮೀಲು

ಅಧಿಕಾರಿಗಳು ಸೇರಿ ಐವರ ಬಂಧನ

• ಬೆಳಗಾವಿ: ಎರಡು ಕೋಟಿ ರೂಪಾಯಿ ವಿಮೆ ಹಣ ಪಡೆಯುವ ಉದ್ದೇಶದಿಂದ ಪತ್ನಿಯೇ ತನ್ನ ಪ್ರಿಯಕರನೊಂದಿಗೆ ಸೇರಿ ಪತಿಯ ಹತ್ಯೆ ಮಾಡಿರುವ ಪ್ರಕರಣದಲ್ಲಿ ಇದೀಗ ಮತ್ತೊಂದು ಮಹತ್ವದ ಬೆಳವಣಿಗೆ ನಡೆದಿದ್ದು, ಪ್ರಕರಣದ ತನಿಖೆಯ ವೇಳೆ ಎಫ್‌ಎಸ್‌ಎಲ್ (ಫೊರೆನ್ಸಿಕ್ ಸೈನ್ಸ್ ಲ್ಯಾಬೋರೇಟರಿ) ಅಧಿಕಾರಿಗಳ ಪಾತ್ರವೂ ಬೆಳಕಿಗೆ ಬಂದಿದೆ.

ರಾಜ್ಯದಲ್ಲೇ ಮೊದಲ ಬಾರಿಗೆ ಕೊಲೆ ಪ್ರಕರಣವೊಂದರಲ್ಲಿ ಎಫ್‌ಎಸ್‌ಎಲ್ ಅಧಿಕಾರಿಗಳು ನೇರವಾಗಿ ಭಾಗಿಯಾಗಿರುವ ಆರೋಪ ಕೇಳಿಬಂದಿರುವುದು ವ್ಯಾಪಕ ಚರ್ಚೆಗೆ ಕಾರಣವಾಗಿದೆ. ಯಮಕನಮರಡಿ ಪೊಲೀಸ್ ಠಾಣಾ ವ್ಯಾಪ್ತಿಯ ಘಟಗೋಳಿ ಗ್ರಾಮದ ಮಾಜಿ ಸೈನಿಕ ಸಂದೀಪ್ ಮಂಜರಗಿ ಅವರ ಸಾವನ್ನು ಆರಂಭಿಕ ಹಂತದಲ್ಲಿ ರಸ್ತೆ ಅಪಘಾತ ಎಂದು ಬಿಂಬಿಸಲಾಗಿತ್ತು.

ಆದರೆ, ಪ್ರಕರಣದ ತನಿಖೆಯನ್ನು ಆಳವಾಗಿ ನಡೆಸಿದಾಗ ಇದು ಪೂರ್ವನಿಯೋಜಿತವಾಗಿ ರೂಪಿಸಲಾದ ಕೊಲೆ ಎಂಬುದು ಬಹಿರಂಗವಾಗಿದೆ. ತನಿಖೆಯ ವೇಳೆ ಮರಣೋತ್ತರ ಪರೀಕ್ಷೆ ಹಾಗೂ ಎಫ್‌ಎಸ್‌ಎಲ್ ವರದಿಗಳನ್ನು ತಿರುಚಿ ಪ್ರಕರಣದ ದಿಕ್ಕು ತಪ್ಪಿಸಲು ಯತ್ನ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಈ ಹಿನ್ನೆಲೆಯಲ್ಲಿ ಹಲವು ಅಧಿಕಾರಿಗಳನ್ನು ಪೊಲೀಸರು ಬಂಧಿಸಿದ್ದಾರೆ.

➡ ಪುಟ 9

SHAKTHI PU COLLEGE
Shakthinagar, Mangalore
ADMISSIONS OPEN FOR PU COLLEGE
AY 2026-27
Enroll now and provide them with the tools they need to succeed in a supportive learning environment.
✓ NEET • JEE • KCET Integrated Coaching
✓ Well-equipped library for excellent learning
✓ Regular Tests, Revision & Doubt-Clearing Sessions
✓ Industrial Visits & Practical Exposure
ENROLL NOW
CONTACT US ☎ 9686000046, 9108043552 shakthi.edu.in

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,65,000(2,60,000) ಅಪರಂಜಿ ಚಿನ್ನ 1,51,530(1,49,090) ಆಭರಣ ಚಿನ್ನ 1,38,900(1,36,650) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ., ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 76,264(73↑) ಎನ್‌ಎಸ್‌ಇ 23,853(23↑)

$1 = ₹95.12

ಆರೆಸ್ಸೆಸ್‌ಗೆ ನೋಂದಣಿ ಅಗತ್ಯವಿಲ್ಲ

ಪುಟ ೧➜ ಸಂಘ ಪ್ರಾರಂಭವಾದ 10–15 ವರ್ಷಗಳ ನಂತರವೂ ನಾವು ಈ ಎಲ್ಲಾ ವಿಷಯಗಳನ್ನು ಎದುರಿಸಬೇಕಾಯಿತು. ನಮಗೆ ಇದು ಒಗ್ಗಿಹೋಗಿದೆ. ಒಂದು ವೇಳೆ ಇಂತಹ ಟೀಕೆಗಳು ಬರದಿದ್ದರೆ ಏನೋ ತಪ್ಪಿಹೋಗಿದೆ, ಏನೋ ಕಡಿಮೆಯಾಗಿದೆ ಎಂದು ನಮಗೆ ಅನಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಹಾಗಾಗಿ ನಾವು ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಸಂಘವು ಬ್ರಿಟಿಷರ ಕಾಲದಲ್ಲೇ ಪ್ರಾರಂಭವಾಯಿತು. ಸಂಘವು ಜನರ ಇಚ್ಛೆಯಾಗಿ ಪ್ರಾರಂಭವಾಯಿತು. ಜನರಲ್ಲಿ ವಿಚಾರ ಮಂಥನ ಹೇಗೆ ನಡೆಯಿತು. ಬಳಿಕ ಎಲ್ಲರೂ ಒಟ್ಟಿಗೊಂಡ ತೀರ್ಮಾನವನ್ನು ಹೇಗೆ ತೆಗೆದುಕೊಳ್ಳಲಾಯಿತು. ಅದರ ಮೇಲೆ ಹೇಗೆ ಕೆಲಸ ಮಾಡಲಾಯಿತು ಎಂದು ನಾನು ಆಗಲೇ ನಿಮಗೆ ವಿವರಿಸಿದ್ದೇನೆ. ಅದೇ ಈ ಸಂಘ. ಹಾಗಾಗಿ ಇದಕ್ಕೆ ಯಾವುದೇ ನಿರ್ಬಂಧಗಳ ಅಗತ್ಯವಿಲ್ಲ ಎಂದರು.

ಹಿಂದಿನ ಸರ್ಕಾರಗಳಿಂದಲೇ ಗುರುತು: ಹಿಂದು ಧರ್ಮ ನೋಂದಣಿಯಾಗಿಲ್ಲ, ಅದೇ ರೀತಿ ಅನೇಕ ವಿಷಯಗಳು ನೋಂದಣಿಯಾಗಿಲ್ಲ. ಆದರೆ ಸಂಘ ಇದೆ ಎಂಬುದು ಸರ್ಕಾರಕ್ಕೂ ತಿಳಿದಿದೆ. ಸರ್ಕಾರವೇ ನಮ್ಮನ್ನು ನಿಷೇಧಿಸಿತ್ತು. ಆ ನಿಷೇಧವನ್ನು ನ್ಯಾಯಾಲಯದ ಆದೇಶದಿಂದ, ಸತ್ಯಾಗ್ರಹದಿಂದ ಹಿಂಪಡೆಯಲಾಯಿತು. ಸರ್ಕಾರ ಆರ್‌ಎಸ್‌ಎಸ್‌ನ್ನು ನಿಷೇಧಿಸಿತ್ತು ಎಂದರೆ, ಅವರಿಗೆ ಆರ್‌ಎಸ್‌ಎಸ್ ಅಸ್ತಿತ್ವದಲ್ಲಿದೆ ಎಂಬುದು ಗೊತ್ತಿತ್ತು ಎಂದರ್ಥ. ಆರ್‌ಎಸ್‌ಎಸ್‌ನ್ನು ಗುರುತಿಸಲಾಗಿದೆ. ಕಳೆದ 100 ವರ್ಷಗಳಲ್ಲಿ ಇದೆಲ್ಲವೂ ನಡೆದಿದೆ. ಆದರೆ ನೀವು ನೋಂದಾಯಿಸಿಕೊಳ್ಳಲೇಬೇಕು ಎಂದು ಯಾರೂ ನಮಗೆ ಹೇಳಿರಲಿಲ್ಲ ಎಂದೂ ಪ್ರತಿಪಾದಿಸಿದರು.

ಹಿಂದೆ ಹೇಳಿರಲಿಲ್ಲ: ನಮ್ಮ ಸಂವಿಧಾನ, ಅಂದರೆ ಲಿಖಿತ ಸಂವಿಧಾನವು ಸರ್ಕಾರದ ಬಳಿಯೇ ಇದೆ. ನಾವು ಅದನ್ನು 1950ರ ದಶಕದಲ್ಲಿಯೇ ಸಲ್ಲಿಸಿದ್ದೇವೆ. ಆಗ ಸರ್ಕಾರವು 'ಸರಿ, ಎಲ್ಲವೂ ಚೆನ್ನಾಗಿದೆ, ಆದರೆ ನೀವು ನೋಂದಾಯಿಸಿಕೊಂಡಿಲ್ಲ, ಮೊದಲು ನೋಂದಾಯಿಸಿ, ನಂತರ ನಾವು ಸ್ವೀಕರಿಸುತ್ತೇವೆ' ಎಂದು ಹೇಳಬಹುದಿತ್ತು. ಆದರೆ ಅವರು ಹಾಗೆ ಹೇಳಲಿಲ್ಲ ಎಂದು ಭಾಗವತ್ ಅವರು ಹೇಳಿದರು.

ಸಂಘದ ಕೆಲಸಗಳಿಗೆ ಅಡ್ಡಿ: ನೋಂದಣಿ ಸೇರಿದಂತೆ ಎಲ್ಲ ವಿಚಾರಗಳು ರಾಜಕೀಯ ವಿಚಾರಗಳಷ್ಟೇ. ಇದರಲ್ಲಿ ಗಂಭೀರವಾದದ್ದೇನೂ ಇಲ್ಲ. ಅವರು ಹೇಗಾದರೂ ಮಾಡಿ ಒಂದು ಕಡೆ ಸಂಘದ ಕೆಲಸಕ್ಕೆ ಅಡ್ಡಿಪಡಿಸಲು ಬಯಸುತ್ತಾರೆ. ಮತ್ತೊಂದು ಕಡೆ ಜನರ ಮನಸ್ಸಿನಲ್ಲಿ ಅನುಮಾನಗಳನ್ನು ಸೃಷ್ಟಿಸಲು ಯತ್ನಿಸುತ್ತಾರೆ. ಆದರೆ ಅದು ಇನ್ನು ಮುಂದೆ ಸಾಧ್ಯವಿಲ್ಲ, ಏಕೆಂದರೆ ಜನರಿಗೆ ನಮ್ಮ ಬಗ್ಗೆ ಚೆನ್ನಾಗಿ ತಿಳಿದಿದೆ. ಅವರು ನಮ್ಮನ್ನು ರಹಸ್ಯ ಸಂಸ್ಥೆ ಎನ್ನುತ್ತಾರೆ. ಆದರೆ ನಮ್ಮ ಕಾರ್ಯಕರ್ತರು ಎಲ್ಲಾ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಜನರು ಅವರನ್ನು ಪ್ರತಿನಿತ್ಯ ನೋಡುತ್ತಿದ್ದಾರೆ. ನಮ್ಮ ಶಾಖೆಗಳು ತೆರೆದ ಮೈದಾನಗಳಲ್ಲಿ ನಡೆಯುತ್ತವೆ. ನಾವು ಸಾರ್ವಜನಿಕ ಕಾರ್ಯಕ್ರಮಗಳನ್ನು ಮಾಡುತ್ತೇವೆ. ನಾವು ಜನರನ್ನು ತಲುಪುವ ಅಂತಹ ಅಗಾಧವಾದ ವ್ಯಾಪ್ತಿ ಹೊಂದಿದ್ದೇವೆ. ಈ ವರ್ಷ ಪ್ರತಿ ವಿಭಾಗದಲ್ಲೂ ನಾವು ಕಾರ್ಯಕ್ರಮಗಳನ್ನು ಮಾಡಿದ್ದೇವೆ. ಒಂದು ವೇಳೆ ನಾವು ರಹಸ್ಯವಾಗಿ ಕಾರ್ಯನಿರ್ವಹಿಸುವವರಾಗಿದ್ದರೆ ಇದೆಲ್ಲವೂ ಸಾಧ್ಯವಾಗುತ್ತಿತ್ತೇ ಎಂದು ಮರು ಪ್ರಶ್ನಿಸಿದರು.

ಯೋಗ ದಿನ ನಿಮಿತ್ತ ಕಾರ್ಯಕ್ರಮ | ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಧ್ಯೇಯವಾಕ್ಯ

ಕೋಲ್ಕತ್ತಾ ಯೋಗ ದಿನದಲ್ಲಿ ಮೋದಿ ಭಾಗಿ

ಹೊಸದಿಲ್ಲಿ: ಜೂನ್ 21ರಂದು ಆಚರಿಸಲಾಗುವ ಅಂತಾರಾಷ್ಟ್ರೀಯ ಯೋಗ ದಿನದ ಮುಖ್ಯ ಕಾರ್ಯಕ್ರಮವು ಪಶ್ಚಿಮ ಬಂಗಾಳದ ರಾಜಧಾನಿ ಕೋಲ್ಕತ್ತಾದ ಐತಿಹಾಸಿಕ ರೆಡ್ ರೋಡ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ನಡೆಯಲಿದೆ ಎಂದು ಕೇಂದ್ರ ಆಯುಷ್ ಖಾತೆ ರಾಜ್ಯ ಸಚಿವ ಪ್ರತಾಪರಾವ್ ಜಾಧವ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ಯೋಗ ದಿನದ ಧ್ಯೇಯವಾಕ್ಯ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಆಗಿದ್ದು, ದೈಹಿಕ ಆರೋಗ್ಯ, ಮಾನಸಿಕ ನೆಮ್ಮದಿ ಹಾಗೂ ಆರೋಗ್ಯಯುತ ವೃದ್ಧಾಪ್ಯಕ್ಕೆ ಯೋಗದ ಮಹತ್ವವನ್ನು ಇದು ಪ್ರತಿಪಾದಿಸುತ್ತದೆ ಎಂದು ಹೇಳಿದರು.

ಈ ಬಾರಿ ಅಂತಾರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿಶ್ವದ ಸುಮಾರು 2,500 ಸ್ಥಳಗಳಲ್ಲಿ ಯೋಗ ಕಾರ್ಯಕ್ರಮಗಳು ನಡೆಯಲಿವೆ. ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಮಂಡಳಿಯ ಸಹಯೋಗದಲ್ಲಿ ವಿದೇಶಗಳಲ್ಲಿರುವ 210ಕ್ಕೂ ಹೆಚ್ಚು ಭಾರತೀಯ ರಾಯಭಾರಿ ಕಚೇರಿಗಳು ಮತ್ತು ಮಿಷನ್‌ಗಳು ಯೋಗ ಕಾರ್ಯಕ್ರಮಗಳನ್ನು ಆಯೋಜಿಸಲಿವೆ ಎಂದು ಅವರು ತಿಳಿಸಿದರು. ಯೋಗ ದಿನದ ಪೂರ್ವಭಾವಿಯಾಗಿ ಜೂನ್ 14ರಂದು ದೇಶವ್ಯಾಪಿ ನೀರ ಯೋಗಾಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ನಾಲ್ಕು ಲಕ್ಷಕ್ಕೂ ಹೆಚ್ಚು ಜನರು ಏಕಕಾಲದಲ್ಲಿ ಭಾಗವಹಿಸುವ ಮೂಲಕ ಹೊಸ ವಿಶ್ವದಾಖಲೆ ನಿರ್ಮಿಸಲಾಗಿದೆ ಎಂದು ಅವರು ತಿಳಿಸಿದರು.

ಇದಲ್ಲದೆ, ಕೇಂದ್ರ ಸಂಸ್ಕೃತಿ ಸಚಿವಾಲಯವು ದೇಶದ 100 ಸ್ಥಳಗಳಲ್ಲಿ ವಿಶೇಷ ಯೋಗ ದಿನ ಕಾರ್ಯಕ್ರಮಗಳನ್ನು ಆಯೋಜಿಸಲಿದ್ದು, ಭಾರತದ ಸಾಂಸ್ಕೃತಿಕ ಪರಂಪರೆ ಮತ್ತು ಯೋಗ ಸಂಪ್ರದಾಯಗಳ ಸಮನ್ವಯವನ್ನು ಪ್ರದರ್ಶಿಸಲಿದೆ ಎಂದರು.

ಕಳೆದ ಕೆಲವು ತಿಂಗಳುಗಳಲ್ಲಿ ದೆಹಲಿಯಲ್ಲಿ 100 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮ, ಮಹಾರಾಷ್ಟ್ರದ ಲೋನಾರ್‌ನಲ್ಲಿ 75 ದಿನಗಳ ಕಾರ್ಯಕ್ರಮ, ಹೈದರಾಬಾದ್‌ನ ಕನ್ಹಾ ಶಾಂತಿ ವನದಲ್ಲಿ 50 ದಿನಗಳ ಕಾರ್ಯಕ್ರಮ ಹಾಗೂ ಮಧ್ಯಪ್ರದೇಶದ ಖಜುರಾಹೋದಲ್ಲಿ 25 ದಿನಗಳ ಕೌಂಟ್‌ಡೌನ್ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿರುವುದನ್ನೂ ಅವರು ಉಲ್ಲೇಖಿಸಿದರು.

ಜೂ.13ರಿಂದ 20ರವರೆಗೆ ನಡೆಯುತ್ತಿರುವ ಗಂಗೋತ್ರಿಯಿಂದ ಗಂಗಾಸಾಗರದವರೆಗೆ: ಗಂಗಾ ತಟ ಯೋಗ ಯಾತ್ರೆ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದ ಜಾಧವ್, ಗಂಗೋತ್ರಿ, ಹರಿದ್ವಾರ, ವಾರಾಣಸಿ, ಪಾಟ್ನಾ, ಹುಗ್ಲಿ ಹಾಗೂ ಗಂಗಾಸಾಗರ ಸೇರಿದಂತೆ ಹಲವು ಪ್ರದೇಶಗಳನ್ನು ಒಳಗೊಂಡಿರುವ ಈ ಯಾತ್ರೆಯು ಯೋಗ, ಪರಿಸರ ಸಂರಕ್ಷಣೆ, ನದಿ ಸಂಸ್ಕೃತಿ ಹಾಗೂ ಜನಸಹಭಾಗಿತ್ವವನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ ಎಂದು ಹೇಳಿದರು.

ಮುಖ್ಯ ಕಾರ್ಯಕ್ರಮಕ್ಕೂ ಮುನ್ನ ಕೋಲ್ಕತ್ತಾದಲ್ಲಿ ವಿಶೇಷ ಕಾರ್ಯಕ್ರಮಗಳ ಸರಣಿ ನಡೆಯಲಿದೆ. ಜೂ.19ರಂದು ಓಟದಿಂದ ಧ್ಯಾನದತ್ತ ಕಾರ್ಯಕ್ರಮದ ಮೂಲಕ ದೈಹಿಕ ಸಾಮರ್ಥ್ಯ ಮತ್ತು ಮಾನಸಿಕ ಆರೋಗ್ಯದ ನಡುವಿನ ಸಂಬಂಧವನ್ನು ಬಿಂಬಿಸಲಾಗುವುದು. ಜೂನ್ 20ರಂದು ವಂದೇ ಯೋಗಂ ಹಾಗೂ ಪಶ್ಚಿಮ ಬಂಗಾಳ ದಿನಾಚರಣೆ ಕಾರ್ಯಕ್ರಮಗಳ ಮೂಲಕ ಯೋಗ, ದೇಶಭಕ್ತಿ ಮತ್ತು ಸಾಂಸ್ಕೃತಿಕ ಪರಂಪರೆಯ ಸಮನ್ವಯವನ್ನು ಪ್ರದರ್ಶಿಸಲಾಗುವುದು ಎಂದು ಅವರು ತಿಳಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆಣೇಜೆ

◆ ನಾನೊಬ್ಬ ಹಿಂದೂ, ಹಿಂದುವಾಗಿಯೇ ಸಾಯುತ್ತೇನೆ, ಆದರೆ ನನ್ನದು ಎಲ್ಲರನ್ನೂ ಒಳಗೊಂಡ ಹಿಂದುತ್ವ

– ಡಿಕೆಶಿ

-ಅಂದರೆ ನಿಮ್ಮ ಹಿಂದುತ್ವದಲ್ಲಿ ದೇಶವನ್ನು ವಿರೋಧಿಸುವವರೂ ಸೇರುತ್ತಾರಾ? ನಮ್ಮ ಹಿಂದುತ್ವದಲ್ಲಿ ದೇಶ ಪ್ರೇಮಿಗಳು ಮಾತ್ರ ಇರುತ್ತಾರೆ, ಅವರು ಯಾವುದೇ ಜಾತಿ, ಮತ, ಧರ್ಮಕ್ಕೆ ಸೇರಿದವರಾಗಿದ್ದರೂ!

ದಿನ ಭವಿಷ್ಯ

ಮೇಷ
ಕಚೇರಿ ಕೆಲಸದಲ್ಲಿ ಹೆಚ್ಚು ಎಚ್ಚರ ವಹಿಸಿ. ಲೋಪ ಆಗದಿರಲಿ. ಸಂಜೆ ವೇಳೆಗೆ ತೃಪ್ತಿಯ ಭಾವ. ತಾಳ್ಮೆಯ ನಡೆ ನಿಮ್ಮನ್ನು ಮುನ್ನಡೆಸುವುದು.

ವೃಷಭ
ನಿಮ್ಮ ನಿರ್ವಹಣೆ ಇತರರಿಗೆ ಅಸೂಯೆ ತರಬಹುದು. ವೃತ್ತಿ ಸಂಬಂಧ ಪ್ರಯಾಣ. ಬೆನ್ನು ನೋವಿದ್ದವರಿಗೆ ಉಪಶಮನ ಸಿಗಲಿದೆ.

ಮಿಥುನ
ನಿಮ್ಮ ಯೋಜನೆ ಸಫಲ. ಆರ್ಥಿಕ ಲಾಭ. ಪ್ರಮುಖ ವ್ಯಕ್ತಿಯನ್ನು ಭೇಟಿಯಾಗುವ ಅವಕಾಶ. ಭಾವನಾತ್ಮಕ ಏರುಪೇರು. ದೃಢ ಮನಸ್ಸಿರಲಿ.

ಕಟಕ
ವೃತ್ತಿಯಲ್ಲಿ ಮತ್ತು ಪ್ರೀತಿಯ ವಿಷಯದಲ್ಲಿ ಮಹತ್ವದ ಬೆಳವಣಿಗೆ. ಹಳೆಯ ಮಿತ್ರರ ಭೇಟಿ. ಬಾಕಿಯಾದ ಕೆಲಸ ಬಳಲಿಕೆ ತರಲಿದೆ. ಖರ್ಚು ಅಧಿಕ.

ಸಿಂಹ
ಆಶಾವಾದದಿಂದ ದಿನ ಆರಂಭಿಸಿ. ಸಣ್ಣ ಹಿನ್ನಡೆಗಳಿಗೆ ಅಂಜದಿರಿ. ಕ್ರೀಡಾಳುಗಳಿಗೆ ಶುಭದಿನ. ಕೌಟುಂಬಿಕ ವ್ಯಾಜ್ಯ ಪರಿಹಾರದ ಸಂಕೇತ.

ಕನ್ಯಾ
ಜನರ ಜತೆ ಸಂವಹನ ಸಾಧಿಸಲು ಹಿಂಜರಿಕೆ ಬೇಡ. ನಿಮ್ಮ ವೃತ್ತಿ ಉನ್ನತಿಗೆ ಅದು ಅಗತ್ಯ. ಆತ್ಮೀಯರು ಮನಸ್ಸಿಗೆ ಬೇಸರ ತರುವರು.

ತುಲಾ
ವೃತ್ತಿ ಕಾರ್ಯದಲ್ಲೇ ಇಂದು ದಿನ ಕಳೆಯಲಿದೆ. ಉಳಿದ ವಿಚಾರಗಳಿಗೆ ವೇಳೆ ಸಾಲದು. ಶಾಪಿಂಗ್ ಹೊರಟರೆ ಜೇಬು ಖಾಲಿಯಾದೀತು.

ವೃಶ್ಚಿಕ
ಸ್ನೇಹವೊಂದು ಪ್ರೀತಿಗೆ ತಿರುಗಬಹುದು. ವೃತ್ತಿಪರರು ಹೊಸ ವ್ಯವಹಾರ ಆರಂಭಿಸಲು ಸಕಾಲ. ಕೌಟುಂಬಿಕ ಭಿನ್ನಮತ ನಿವಾರಣೆ.

ಧನು
ಕೆಲಸದಲ್ಲಿ ನಿರಾಸಕ್ತಿ. ವಿರಾಮ ಬಯಸುವಿರಿ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಂಸಾರಿಕ ಸಮಸ್ಯೆಗೆ ಪರಿಹಾರ ತುಸು ಕಷ್ಟ. ತಾಳ್ಮೆ ವಹಿಸಿ.

ಮಕರ
ನಿಮ್ಮ ಸುತ್ತ ಒಂದು ಬಗೆಯ ಅಸಹನೆ, ಉದ್ವಿಗ್ನತೆ ಆವರಿಸುವುದು. ಅನ್ಯರ ಜತೆ ವಿನಯದಿಂದ ವ್ಯವಹರಿಸಿ. ನಿಮ್ಮ ಕೋಪ ನಿಯಂತ್ರಿಸಬೇಕು.

ಕುಂಭ
ಪ್ರತಿಯೊಂದು ವಿಷಯವನ್ನು ಗುಣಾತ್ಮಕ ದೃಷ್ಟಿಯಿಂದ ನೋಡಿ. ನೆಗೆಟಿವ್ ಚಿಂತನೆ ಬಿಡಿ. ಹಳೆಯ ಹೂಡಿಕೆ ಲಾಭ ತರಲಿದೆ.

ಮೀನ
ಖಾಸಗಿ ಸಮಸ್ಯೆ ಕಿರಿಕಿರಿ ತರುವುದು. ಸಣ್ಣ ವಿಷಯದಲ್ಲೂ ತಪ್ಪು ಹುಡುಕುವಿರಿ. ಅತಿಥಿ ಆಗಮನದಿಂದ ಮನೆಯ ವಾತಾವರಣ ಬದಲು.

ರಾಹುಕಾಲ: 3.00- 4.30
ಗುಳಿಕಕಾಲ: 12.00-1.30

ಅದೃಷ್ಟ ಸಂಖ್ಯೆ: 5,9,2,7

ಚಂದ್ರಶೇಖರ ಶ್ರೀಗಳು ಕಲಿತ ಶಾಲೆ ಅಭಿವೃದ್ಧಿಗೆ ಮುಂದಾದ ಮಠ

ಮಠದಿಂದ ಶಾಲೆ ದತ್ತು

▸ ರಮೇಶ್, ಕರುವಾನೆ

ಶೃಂಗೇರಿ: ಶ್ರೀ ಶಾರದಾ ಪೀಠದ 34ನೇ ಜಗದ್ಗುರು ಶ್ರೀ ಚಂದ್ರಶೇಖರ ಭಾರತಿ ಸ್ವಾಮೀಜಿಗಳು ಕಲಿತ ಶಾಲೆಯನ್ನು ಉಳಿಸಿಕೊಳ್ಳಲು ಪಟ್ಟಣದ ಮಲ್ಲಿಕಾರ್ಜುನ ಬೀದಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಶ್ರೀಮಠ ದತ್ತು ಪಡೆದುಕೊಂಡು ಅಭಿವೃದ್ಧಿಗೆ ಮುಂದಾಗಿದೆ.

ತಾಲೂಕಿನ ಪ್ರಥಮ ಸರ್ಕಾರಿ ಪ್ರಾಥಮಿಕ ಶಾಲೆ ಎಂಬ ಹೆಗ್ಗಳಿಕೆಗೆ ಪಾತ್ರವಾದ ಪಟ್ಟಣದ ಸರ್ಕಾರಿ ಹಿರಿಯ ಪ್ರಾಥಮಿಕ ಬಾಲಕರ ಶಾಲೆಗೆ 173 ವರ್ಷಗಳ ಇತಿಹಾಸವಿದೆ. ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿಯ ಎದುರು ಇರುವ ಈ ಶಾಲೆ ಬ್ರಿಟಿಷರ ಆಳ್ವಿಕೆಯಲ್ಲಿ 1853ರಲ್ಲಿ ಆರಂಭಗೊಂಡಿತು ಎಂಬುದು ದಾಖಲೆಯಿಂದ ತಿಳಿದುಬಂದಿದೆ.

ಶಾಲೆಯಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಈವರೆಗೆ ವ್ಯಾಸಂಗ ಮಾಡಿದ್ದು 1980–90 ರ ದಶಕದಲ್ಲಿ 800ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದರು. ತಾಲೂಕಿನಲ್ಲಿ ಖಾಸಗಿ ಶಾಲೆಗಳು ಪ್ರಾರಂಭಗೊಂಡ ಕಾರಣ ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಕಳೆದ ವರ್ಷ 10 ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡಿದ್ದರು. ಈ ಹಿಂದೆ ಶ್ರೀ ಶಾರದಾ ಪೀಠದ 34ನೇ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮೀಜಿಗಳು ಈ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ ಪೂರೈಸಿದ್ದು ಅಪೂರ್ವ ದಾಖಲೆಯಾಗಿದೆ. ಜಗದ್ಗುರುಗಳು ಕಲಿತ ಶಾಲೆ ಎಂಬ ಕಾಳಜಿಯಿಂದ ಶಾಲೆ ಉಳಿಸಲು ಶ್ರೀ ಮಠವು ಇದೀಗ ದತ್ತು ಪಡೆದಿದೆ.

ವಿಶೇಷವೆಂದರೆ ಸರ್ಕಾರಿ ಶಾಲೆಯಲ್ಲಿ ಸೌಕರ್ಯವಿದ್ದರೂ ಶಾಲೆಗೆ ಮಾತ್ರ ಮಕ್ಕಳು ಬರುತ್ತಿಲ್ಲ, ವಿದ್ಯಾಧಿ ದೇವತೆಯ ನಾಡಿನಲ್ಲಿರುವ ಸರ್ಕಾರಿ ಶಾಲೆಯನ್ನು ಮುಚ್ಚುವ ಸ್ಥಿತಿಗೆ ಬಂದಿರುವುದು ಸೋಜಿಗದ ಸಂಗತಿ. ಆಧುನಿಕ ಕಾಲದ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯಲು ನಿರಾಸಕ್ತಿ ತೋರಿಸುತ್ತಿರುವುದರಿಂದ ಮಕ್ಕಳ ಕೊರತೆ ಕಾಡುತ್ತಿದ್ದು ಶಾಲೆಯನ್ನು ಮುಚ್ಚುವ ಪರಿಸ್ಥಿತಿ ಬಂದಿದೆ. ಸ್ಥಳೀಯರು ಹಳೆ ವಿದ್ಯಾರ್ಥಿಗಳು ಹಾಗೂ ಶಿಕ್ಷಣ ಇಲಾಖೆ ಅವಿರತವಾಗಿ ಶ್ರಮಿಸಿದ್ದಾರೆ. ಇದೀಗ ಶ್ರೀಮಠದ ಆಡಳಿತ ಅಧಿಕಾರಿಗಳು ಹಾಗೂ ಸಿಬ್ಬಂದಿ ಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಸರ್ಕಾರದಿಂದ ನೇಮಕವಾಗುವ ಶಿಕ್ಷಕರೊಂದಿಗೆ ಅಗತ್ಯವಿದ್ದಲ್ಲಿ ಅತಿಥಿ ಶಿಕ್ಷಕರ ಸೇವೆಯನ್ನು ಪಡೆಯಲು ಅನುಮತಿ ನೀಡಿದ್ದಾರೆ.

ಆಧುನೀಕರಣಗೊಳಿಸಲು ಸಜ್ಜು: ಶಾಲೆಯನ್ನು ದತ್ತು ಪಡೆದಿರುವ ಶ್ರೀ ಮಠವು ಶಾಲೆಯ ಗೋಡೆ ಕಾಂಪೌಂಡ್ ಸಹಿತ ಎಲ್ಲಾ ಕಡೆ ಸುಣ್ಣಬಣ್ಣ ಮಾಡಿಸಿದೆ. ಕಿಟಕಿ, ಬಾಗಿಲು, ಉಪಕರಣಗಳನ್ನು ಆಧುನೀಕರಿಸಿದೆ. ಶಿಕ್ಷಕರು ಹಾಗೂ ಸಮಿತಿಯ ಸದಸ್ಯರ ಪ್ರಯತ್ನದಿಂದ ಕುಸಿದಿದ್ದ ಮಕ್ಕಳ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡಿದೆ. ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆ 40 ದಾಟಿದ್ದು, ಇನ್ನಷ್ಟು ಮಕ್ಕಳು ಸೇರ್ಪಡೆಯಾಗಲಿದ್ದಾರೆ. ಆಂಗ್ಲ ಮಾಧ್ಯಮ ಎಲ್‌ಕೆಜಿ, ಯುಕೆಜಿ ಸಹಿತ ಆಧುನಿಕ ಶಿಕ್ಷಣ ಪದ್ಧತಿ ಆರಂಭಕ್ಕೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದೆ.

ಬಸ್ ವ್ಯವಸ್ಥೆ: ಶ್ರೀ ಮಠವು ಶಾಲೆಗೆ ಮೂಲ ಸೌಕರ್ಯ ಒದಗಿಸಲು ಆದ್ಯತೆ ನೀಡಿದೆ. ಮಕ್ಕಳನ್ನು ಕರೆತರಲು ವಾಹನ ವ್ಯವಸ್ಥೆ ಮಾಡಿದ್ದು ಪೋಷಕರಿಗೆ ಹೊರೆಯಾಗದಂತೆ ಸಂಪೂರ್ಣ ಉಚಿತ ಸಾರಿಗೆಯ ಅನುಕೂಲ ಕಲ್ಪಿಸಿದೆ.

ಅಭಿವೃದ್ಧಿ ಸಮಿತಿ ರಚನೆ: ಶಾಲೆಯ ಹಳೆ ವಿದ್ಯಾರ್ಥಿಗಳನ್ನು ಒಳಗೊಂಡ ಸಮಿತಿ ರಚಿಸಲಾಗಿದ್ದು ಶ್ರೀಮಠದ ಆಡಳಿತಾಧಿಕಾರಿ ಪಿ.ಎ. ಮುರಳಿ ಅಧ್ಯಕ್ಷರಾಗಿದ್ದಾರೆ. ಟಿ. ನಾಗೇಶ ಕಾರ್ಯದರ್ಶಿಯಾಗಿದ್ದು, ನಿರಂಜನ್ ಕುಮಾರ್, ಲಕ್ಷ್ಮಿ ವೆಂಕಟರಮಣ, ವೇಣು, ಮಾಧವ ನಾಯಕ್, ಮಂಜುನಾಥ್, ಸುವರ್ಣ, ವಿಜಯಕುಮಾರ್, ಬೇಗಾನೆ ಮಂಜುನಾಥ್ ಸಮಿತಿಯ ಸದಸ್ಯರಾಗಿದ್ದಾರೆ.

> **ತಾಲೂಕಿನ ಮೊದಲ ಶಾಲೆ ಹಾಗೂ ಜಗದ್ಗುರುಗಳು ಶಿಕ್ಷಣ ಪಡೆದ ಶಾಲೆ ಮುಚ್ಚಬಾರದು ಎಂಬ ನಿರ್ಧಾರದಿಂದ ಶಾಲೆಯನ್ನು ಉಳಿಸಿಕೊಳ್ಳಲು ಶ್ರಮಿಸಲಾಗುತ್ತಿದೆ. ಈ ಹಿಂದೆ ರಾಜ್ಯ ಸಚಿವರಾಗಿದ್ದ ಬೇಗಾನೆ ರಾಮಯ್ಯ ಈ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದವರಾಗಿದ್ದರು.**
> ■ **ಡಾ. ನಿರಂಜನ್‌ಕುಮಾರ್, ಶಾಲಾ ಅಭಿವೃದ್ಧಿ ಸಮಿತಿ ಸದಸ್ಯ.**

> **ಶ್ರೀಮಠವು ಶಾಲೆಯನ್ನು ದತ್ತು ಪಡೆಯುವುದರೊಂದಿಗೆ ಮಕ್ಕಳನ್ನು ಕರೆ ತರಲು ಉಚಿತವಾಗಿ ವಾಹನ ವ್ಯವಸ್ಥೆ ಕಲ್ಪಿಸಿದೆ. ಜಗದ್ಗುರುಗಳ ಮಾರ್ಗದರ್ಶನದಂತೆ ಶ್ರೀಮಠದ ಆಡಳಿತ ಅಧಿಕಾರಿಗಳು ಶಾಲೆಗೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.**
> ■ **ವರಲಕ್ಷ್ಮೀ, ಕ್ಷೇತ್ರ ಶಿಕ್ಷಣಾಧಿಕಾರಿ, ಶೃಂಗೇರಿ.**

ಗೃಹ ಸಚಿವ ಖರ್ಗೆಯಿಂದ ಆರೆಸ್ಸೆಸ್‌ಗೆ ಸುದೀರ್ಘ ಪತ್ರ

ಪುಟ ೧➜ ಈ ಪ್ರಮಾಣ, ಪ್ರಭಾವ ಮತ್ತು ವ್ಯಾಪ್ತಿಯ ಕಾರಣದಿಂದಾಗಿ ಆರ್‌ಎಸ್‌ಎಸ್‌ನ್ನು ಪಾರದರ್ಶಕತೆ, ಹೊಣೆಗಾರಿಕೆ ಮತ್ತು ಸಾಂವಿಧಾನಿಕ ಅನುಸರಣೆಯ ಅತ್ಯುನ್ನತ ಮಾನದಂಡಗಳಿಗೆ ಬದ್ಧಗೊಳಿಸಬೇಕು ಎಂದು ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ಮನವಿ ಮಾಡಿಕೊಂಡಿದ್ದಾರೆ.

8 ಅಂಶಗಳ ಬಗ್ಗೆ ಮಾಹಿತಿ ಕೇಳಿದ ಸಚಿವ ಖರ್ಗೆ:

1. ಆರ್‌ಎಸ್‌ಎಸ್‌ನ ಕಾನೂನಾತ್ಮಕ ಸ್ಥಾನಮಾನ ಮತ್ತು ಸಂಘಟಿತ ರಚನೆ ವಿವರ
2. ಪದಾಧಿಕಾರಿಗಳು ಮತ್ತು ಅಧಿಕೃತ ಪ್ರತಿನಿಧಿಗಳ ವಿವರಗಳು
3. ದೇಣಿಗೆ, ಕೊಡುಗೆ ಮತ್ತು ಆದಾಯದ ಮೂಲಗಳು
4. ವೆಚ್ಚ ಮತ್ತು ಆಸ್ತಿಪಾಸ್ತಿಗಳ ವಿವರಗಳು
5. ಕಾನೂನಿನ ಪ್ರಕಾರ ಅನ್ವಯವಾಗುವ ತೆರಿಗೆಗಳನ್ನು ಸಕ್ರಮವಾಗಿ ಪಾವತಿಸಲಾಗುತ್ತಿದೆಯೇ ಎಂಬ ವಿಷಯ
6. ಔಪಚಾರಿಕ ನೋಂದಣಿಯಿಲ್ಲದೆ ತನ್ನ ಚಟುವಟಿಕೆಗಳನ್ನು ನಡೆಸಲು ಯಾವ ಕಾನೂನಾತ್ಮಕ ಆಧಾರವನ್ನು ಅವಲಂಬಿಸಲಾಗಿದೆ ಎನ್ನುವ ಕುರಿತು
7. ಯಾವುದೇ ಸಾರ್ವಜನಿಕ ಜವಾಬ್ದಾರಿಯಿಲ್ಲದೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಕಾರ್ಯನಿರ್ವಹಿಸುವ ಹಕ್ಕನ್ನು ಯಾವ ಸಾಂವಿಧಾನಿಕ ಮತ್ತು ಶಾಸನಾತ್ಮಕ ಚೌಕಟ್ಟಿನ ಅಡಿಯಲ್ಲಿ ಪಡೆದುಕೊಳ್ಳಲಾಗಿದೆ?
8. ಸಾರ್ವಜನಿಕ ಕಾರ್ಯಕ್ರಮಗಳು, ಮಾರ್ಗ ಮೆರವಣಿಗೆಗಳು, ಸಾಮೂಹಿಕ ಸಭೆಗಳು ಮತ್ತು ಇತರ ಸಂಘಟಿತ ಚಟುವಟಿಕೆಗಳಿಗೆ ಅನುಮತಿಗಳು, ಅಧಿಕಾರಗಳು ಮತ್ತು ಅನುಸರಣಾ ಕಾರ್ಯವಿಧಾನಗಳ ವಿವರ

ಈ ಸಂಬಂಧ ಅಧಿಕೃತ ಚರ್ಚೆಗೆ ಸಿದ್ಧರಿದ್ದೇವೆ. ನಿಮ್ಮ ಅಧಿಕೃತ ಪ್ರತಿನಿಧಿಗಳನ್ನು ಕಳುಹಿಸುವ ಬಗ್ಗೆ ಪ್ರತಿಕ್ರಿಯೆ ನಿರೀಕ್ಷಿಸುತ್ತೇವೆ ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಪತ್ರದಲ್ಲಿ ಬರೆದಿದ್ದಾರೆ.

ಬರ ಎದುರಿಸಲು ಸಜ್ಜಾಗಿ

ಪುಟ ೧➜ ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಗಳು ಎಷ್ಟರಮಟ್ಟಿಗೆ ಜಾರಿ ಆಗುತ್ತಿದೆ ಎನ್ನುವ ಬಗ್ಗೆ ವರದಿ ನೀಡಬೇಕಿದ್ದು, ಇದರ ಆಧಾರದ ಮೇಲೆ ಕೇಂದ್ರದ ಸಹಕಾರ, ಅನುದಾನಕ್ಕೆ ಬರುವಂತೆ ಒತ್ತಡ ಹೇರೋಣ ಎಂದರು.

ಎಪಿಎಂಸಿ ಜಾಗಗಳ ಸಂರಕ್ಷಣೆ

ರಾಜ್ಯದಲ್ಲಿರುವ ಶೀತಲಗೃಹ ಮತ್ತು ಗೋದಾಮುಗಳ ಬಗ್ಗೆ ಪಟ್ಟಿ ನೀಡಬೇಕು. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಗೆ ಸೇರಿದ ಜಾಗಗಳು ಸುರಕ್ಷಿತವಾಗಿರಬೇಕು. ಕಾಂಪೌಂಡ್ ಹಾಕಿಸಿ ಈ ಬಗ್ಗೆ ಕ್ರಮ ಕೈಗೊಳ್ಳಬೇಕು. ಎಪಿಎಂಸಿಗಳು ಸರಿಯಾಗಿ ರೈತರಿಗೆ ಬಳಕೆ ಆಗುತ್ತಿವೆಯೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು. ಎಪಿಎಂಸಿ ಆವರ್ತ ನಿಧಿ ಸದ್ಬಳಕೆ ಆಗುವಂತೆ ನೋಡಿಕೊಳ್ಳಿ ಎಂದು ಸೂಚಿಸಿದರು.

ಯಾವ ಗ್ಯಾರಂಟಿಯೂ ನಿಲ್ಲೋದಿಲ್ಲ: ಸಿಎಂ ಡಿಕೆಶಿ

ಪುಟ ೧➜ ಸರ್ಕಾರವು ಕರ್ನಾಟಕದವರಿಗೆ ಈ ಯೋಜನೆ ನೀಡುತ್ತಿದ್ದು, ಅನ್ಯ ರಾಜ್ಯದವರಿಗೆ ಈ ಯೋಜನೆ ನೀಡುವುದಿಲ್ಲ. ಉಚಿತ ವಿದ್ಯುತ್‌ನ್ನು ನಮ್ಮ ರಾಜ್ಯದ ಮತದಾರರಿಗೆ ನೀಡಬೇಕೇ ಹೊರತು, ಬೇರೆ ರಾಜ್ಯದವರಿಗೆ ಯಾಕೆ ಕೊಡಬೇಕು? ಹೀಗಾಗಿ ಫಲಾನುಭವಿಗಳಿಗೆ ಗುರುತಿನ ಚೀಟಿ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಿದ್ದೇವೆ. ಆ ಪ್ರಕ್ರಿಯೆ ನಡೆಯುತ್ತಿದೆ. ಯೋಜನೆ ನಿಲ್ಲಿಸುವುದು ನಮ್ಮ ಉದ್ದೇಶವಲ್ಲ, ನಮ್ಮ ಗ್ಯಾರಂಟಿ ದೇಶಕ್ಕೆ ಮಾದರಿ. ಮಹಾರಾಷ್ಟ್ರ, ಮಧ್ಯಪ್ರದೇಶ, ಆಂಧ್ರಪ್ರದೇಶ ಸೇರಿದಂತೆ ಬೇರೆ ರಾಜ್ಯಗಳು ನಮ್ಮ ಮಾದರಿ ಅನುಸರಿಸಿವೆ ಎಂದು ತಿಳಿಸಿದರು. ಕೆಲವರು ಗೃಹಲಕ್ಷ್ಮಿ ಹಣವನ್ನು ನಕಲಿ ಫೈನಾನ್ಸ್ ವ್ಯವಹಾರಕ್ಕೆ ಬಳಸುತ್ತಿದ್ದಾರೆ. ಬೆಳಗಾವಿಯ ಪ್ರಕರಣವನ್ನು ನೋಡಿದ್ದೇವಲ್ಲ, ಇದಕ್ಕಾಗಿ ಗ್ರಾಮ ಪಂಚಾಯ್ತಿಯಿಂದ ತಾಲ್ಲೂಕು ಪಂಚಾಯ್ತಿವರೆಗೆ ಎಲ್ಲೆಲ್ಲಿ ಇಂತಹ ಸ್ಕೀಂಗಳಿವೆ, ಅವುಗಳಿಗೆ ಕಡಿವಾಣ ಹಾಕಲು ನಾವು ನಿರ್ದೇಶನ ನೀಡಿದ್ದೇವೆ. ನಮ್ಮ ಹೃದಯದಿಂದ ಕೊಟ್ಟ ಯೋಜನೆಗಳಿವು. ಹೆಣ್ಣು ಕುಟುಂಬದ ಕಣ್ಣು, ಅವರ ಮನೆಗಳು ಬೆಳಗಬೇಕು ಎಂದು ನೀಡಲಾಗಿದೆ. ವಿರೋಧ ಪಕ್ಷಗಳು ಹೀಗೆ ಮಾತನಾಡುತ್ತಿರಲಿ ಎಂದು ಕಿಡಿಕಾರಿದರು.

ಸಿಬಿಐನಿಂದ ತನಿಖೆ ನಡೆಸಲು ಒತ್ತಾಯ

ಪುಟ ೧➜ ಇದರ ಜತೆಗೆ, ಧರ್ಮಸ್ಥಳ ಹಾಗೂ ಡಾ. ಡಿ. ವೀರೇಂದ್ರ ಹೆಗ್ಗಡೆ ಅವರ ವಿರುದ್ಧ ಸುಮಾರು 200 ಕೋಟಿ ರೂ. ವೆಚ್ಚದಲ್ಲಿ ಸಂಘಟಿತ ಮತ್ತು ವ್ಯವಸ್ಥಿತ ಷಡ್ಯಂತ್ರ ರೂಪಿಸಲಾಗಿತ್ತು ಎಂಬ ಅತ್ಯಂತ ಗಂಭೀರ ಆರೋಪವೂ ನ್ಯಾಯಾಲಯದ ಮುಂದೆ ಬಂದಿದೆ ಎಂದಿದ್ದಾರೆ.

ಈ ಆರೋಪಗಳು ಸತ್ಯವೋ ಸುಳ್ಳೋ ಎಂಬುದನ್ನು ತನಿಖೆಯೇ ನಿರ್ಧರಿಸಬೇಕು. ಧರ್ಮಸ್ಥಳದಂತಹ ಪ್ರತಿಷ್ಠಿತ ಸಂಸ್ಥೆಯ ವಿರುದ್ಧ ಇಷ್ಟೊಂದು ದೊಡ್ಡ ಮಟ್ಟದ ಅಭಿಯಾನ ನಡೆಸಲು ಹಣ ಎಲ್ಲಿಂದ ಬಂತು? ಇದರ ಹಿಂದೆ ಯಾರು ಇದ್ದರು? ಇದು ಕೇವಲ ವೈಯಕ್ತಿಕ ಕೃತ್ಯವೋ ಅಥವಾ ಇದರ ಹಿಂದೆ ದೊಡ್ಡ ಜಾಲವೇ ಕಾರ್ಯನಿರ್ವಹಿಸುತ್ತಿದೆಯೋ ಎಂಬ ಸತ್ಯ ಹೊರಬರಬೇಕಾಗಿದೆ. ಧರ್ಮಸ್ಥಳದ ವಿರುದ್ಧದ ಆರೋಪಗಳ ತನಿಖೆ ನಡೆದಂತೆಯೇ, ಧರ್ಮಸ್ಥಳದ ವಿರುದ್ಧವೇ ಯಾವುದೇ ಸಂಚು ನಡೆದಿದೆಯೇ ಎಂಬುದರ ಬಗ್ಗೆಯೂ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಸ್ತುತ ಪ್ರಕರಣದಲ್ಲಿ ಕರ್ನಾಟಕ ಮಾತ್ರವಲ್ಲದೆ ವಿವಿಧ ರಾಜ್ಯಗಳ ಜನರೂ ಸಂಚಿನ ಭಾಗವಾಗಿದ್ದಾರೆನ್ನುವ ಆರೋಪ ಕೇಳಿಬಂದಿದೆ. ಕೋಟ್ಯಂತರ ಭಕ್ತರ ಶ್ರದ್ಧಾಕೇಂದ್ರವಾದ ಧರ್ಮಸ್ಥಳದ ವಿರುದ್ಧ ನಡೆದಿರುವ ಹುನ್ನಾರವನ್ನು ಲಘುವಾಗಿ ಪರಿಗಣಿಸಲು ಸಾಧ್ಯವಿಲ್ಲ. ಪ್ರಕರಣವನ್ನು ರಾಜ್ಯ ಪೊಲೀಸ್ ಇಲಾಖೆಯಿಂದ ತನಿಖೆ ನಡೆಸಿದರೆ ಸಾಕಾಗುವುದಿಲ್ಲ, ಆದ್ದರಿಂದ, ಕೇಂದ್ರ ಮಟ್ಟದ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಿದರೆ ಮಾತ್ರವೇ ವಿಸ್ತೃತ ವಿಚಾರಣೆ ನಡೆದು, ಷಡ್ಯಂತ್ರದ ಹಿಂದಿರುವವರು ಯಾರು, ಅವರ ಉದ್ದೇಶವೇನು ಎನ್ನುವುದು ಬೆಳಕಿಗೆ ಬರಲು ಸಾಧ್ಯ.

ಹೀಗಾಗಿ, ಈ ಪ್ರಕರಣವನ್ನು ಕೇಂದ್ರ ತನಿಖಾ ದಳ (ಸಿಬಿಐ)ಕ್ಕೆ ವಹಿಸಿ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ನಾನು ಆಗ್ರಹಿಸುತ್ತೇನೆ. ಸತ್ಯ ಏನೇ ಇರಲಿ ಅದು ಹೊರಬರಬೇಕು. ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆದಿದ್ದರೆ ಅದರ ಹಿಂದಿರುವವರು ಬಯಲಾಗಬೇಕು. ಆರೋಪಗಳಲ್ಲಿ ಸತ್ಯವಿದ್ದರೆ ಅದೂ ಕಾನೂನಿನ ಮುಂದೆ ಸಾಬೀತಾಗಬೇಕು. ಸರ್ಕಾರ ಈ ವಿಚಾರವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ ತಕ್ಷಣವೇ ಸಿಬಿಐ ತನಿಖೆಗೆ ಶಿಫಾರಸು ಮಾಡಬೇಕೆಂದು ಸಿ.ಟಿ. ರವಿ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಹಿಂದು ಶ್ರದ್ಧಾ ಕೇಂದ್ರಗಳ ವಿರುದ್ಧ ಷಡ್ಯಂತ್ರವೇ?

ಪುಟ ೧➜ ಹಣದ ಮೂಲ, ಹಣದ ಹರಿವು, ಈ ಪ್ರಕರಣದಲ್ಲಿ ಹೆಸರು ಕೇಳಿಬರುತ್ತಿರುವ ವ್ಯಕ್ತಿಗಳ ಪಾತ್ರ, ಡಿಜಿಟಲ್ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ನಡೆದಿರುವ ಪ್ರಚಾರ ಹಾಗೂ ಇದರ ಹಿಂದಿರುವ ಸಂಪೂರ್ಣ ಜಾಲ ಪತ್ತೆ ಹಚ್ಚಬೇಕಾಗಿದೆ ಎಂದು ಸಿ.ಟಿ. ರವಿ ಆಗ್ರಹಿಸಿದ್ದಾರೆ.

ಇಕ್ಬಾಲ್ ಹುಸೇನ್‌ಗೆ ಅನಾರೋಗ್ಯ

ಬೆಂಗಳೂರು: ಹೃದಯ ಸಂಬಂಧಿತ ಅನಾರೋಗ್ಯದಿಂದ ರಾಮನಗರ ಕ್ಷೇತ್ರದ ಶಾಸಕ ಇಕ್ಬಾಲ್ ಹುಸೇನ್ ಅವರನ್ನು ಬೆಂಗಳೂರಿನ ವೈದೇಹಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆರೋಗ್ಯ ಸ್ಥಿರವಾಗಿದೆ ಎಂದು ಇಕ್ಬಾಲ್ ಹುಸೇನ್ ಅವರಿಗೆ ಚಿಕಿತ್ಸೆ ನೀಡಿರುವ ವೈದೇಹಿ ಆಸ್ಪತ್ರೆಯ ಹೃದ್ರೋಗ ತಜ್ಞ ಡಾ. ವಿ.ಕೆ. ಶ್ರೀನಿವಾಸ್ ಹೇಳಿದರು.



ಆಸ್ಪತ್ರೆಯಲ್ಲಿ ಇಕ್ಬಾಲ್ ಹುಸೇನ್ ಅವರ ಆರೋಗ್ಯ ವಿಚಾರಿಸಿ ಮಾತನಾಡಿದ ಸಿಎಂ ಡಿ.ಕೆ. ಶಿವಕುಮಾರ್, ಶನಿವಾರ ಎದೆ ನೋವು ಕಾಣಿಸಿಕೊಂಡಿದೆ. ಎಡಗೈ ನೋವು ಬಂದಿದ್ದರಿಂದ ಮುನ್ನೆಚ್ಚರಿಕಾ ಕ್ರಮವಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ ಎಂದರು.

ಕೊಲೆ ಕೇಸ್: ಎಫ್‌ಎಸ್ಸೆಲ್ ಅಧಿಕಾರಿಗಳೂ ಶಾಮೀಲು

ಪುಟ ೧➜ ಪೊಲೀಸ್ ತನಿಖೆಯ ಪ್ರಕಾರ, ಬೆಳಗಾವಿಯ ಎಫ್‌ಎಸ್‌ಎಲ್ ಕಚೇರಿಯ ಸೀನಿಯರ್ ಸೈಂಟಿಫಿಕ್ ಆಫೀಸರ್ ವಿ.ಎನ್.ನಾಗರಾಜ್, ಲ್ಯಾಬ್ ಅಸಿಸ್ಟೆಂಟ್ ಚಿನ್ನಯ್ಯ, ಗುಮಾಸ್ತ ಅಪ್ಪಾಸಾಬ್ ನಾಯಕ್, ಆರ್ ಎಂಓ ವೈದ್ಯ ಬಸವರಾಜ್ ಭಗ್ನೆ ಹಾಗೂ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಫ್‌ಡಿಎ ಅಶೋಕ ಗುಜನಾಳ ಅವರನ್ನು ಬಂಧಿಸಲಾಗಿದೆ.

ಪ್ರಕರಣದಲ್ಲಿ ಪ್ರಮುಖ ಆರೋಪಿ ಸುಮಾ ಅವರಿಂದ ಹಣದ ಹಂಚಿಕೆ ನಡೆದಿರುವ ಮಾಹಿತಿ ತನಿಖೆಯಲ್ಲಿ ಬಹಿರಂಗವಾಗಿದ್ದು, ಎಫ್‌ಡಿಎ ಅಶೋಕ ಗುಜನಾಳ ಮೂಲಕ ಎಫ್‌ಎಸ್‌ಎಲ್ ಅಧಿಕಾರಿಗಳ ಸಂಪರ್ಕ ಸಾಧಿಸಲಾಗಿತ್ತು ಎನ್ನಲಾಗಿದೆ. ಈ ಮೂಲಕ ಪ್ರಕರಣವನ್ನು ಆತ್ಮಹತ್ಯೆ ಎಂದು ತೋರಿಸುವ ಪ್ರಯತ್ನ ನಡೆದಿರಬಹುದೆಂಬ ಅನುಮಾನ ವ್ಯಕ್ತವಾಗಿದೆ. ಇದುವರೆಗೆ ಪ್ರಕರಣದಲ್ಲಿ ಮೃತ ಸಂದೀಪ್ ಮಂಜರಗಿ ಅವರ ಪತ್ನಿ ಸುಮಾ, ಆಕೆಯ ಪ್ರಿಯಕರ ಮಂಡಲೀಕ, ಸ್ನೇಹಿತ ಸಚಿನ್ ಸೇರಿದಂತೆ ಒಟ್ಟು ಒಂಬತ್ತು ಮಂದಿಯನ್ನು ಪೊಲೀಸರು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಬಂಧಿತರಿಂದ ಮಹತ್ವದ ಮಾಹಿತಿಗಳು ಲಭ್ಯವಾಗುತ್ತಿದ್ದು, ಪ್ರಕರಣದಲ್ಲಿ ಇನ್ನೂ ಕೆಲವರ ಪಾತ್ರ ಇರುವ ಸಾಧ್ಯತೆಗಳಿವೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಈ ಪ್ರಕರಣವು ರಾಜ್ಯದ ತನಿಖಾ ವ್ಯವಸ್ಥೆಯ ವಿಶ್ವಾಸಾರ್ಹತೆಯ ಕುರಿತು ಪ್ರಶ್ನೆಗಳನ್ನು ಹುಟ್ಟುಹಾಕಿದ್ದು, ಫೊರೆನ್ಸಿಕ್ ವರದಿಗಳ ದುರುಪಯೋಗ ಮತ್ತು ಅಧಿಕಾರ ದುರ್ಬಳಕೆಯ ಆರೋಪಗಳು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿವೆ. ತನಿಖೆ ಮುಂದುವರಿದಿದ್ದು, ಇನ್ನಷ್ಟು ಆರೋಪಿಗಳ ಬಂಧನ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಪ್ರಕರಣದ ಸಂಪೂರ್ಣ ಸತ್ಯಾಂಶ ಅರಿಯಲು ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಮಹತ್ವದ ಮಾಹಿತಿಗಳು ಬಹಿರಂಗವಾಗುವ ನಿರೀಕ್ಷೆಯಿದೆ.

ಇಂದು ರೆಸಾರ್ಟ್‌ನಲ್ಲೇ ಕೈ ಶಾಸಕಾಂಗ ಪಕ್ಷದ ಸಭೆ

ಪುಟ ೧➜ ವಿಧಾನಪರಿಷತ್ತಿನ 7 ಸ್ಥಾನಗಳಿಗೆ 8 ಅಭ್ಯರ್ಥಿಗಳು ಕಣದಲ್ಲಿರುವುದರಿಂದ ಕಾಂಗ್ರೆಸ್ ಪಕ್ಷ ತನ್ನ ಐವರು ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳಲು ರಣತಂತ್ರ ರೂಪಿಸಿದ್ದು, ಅದರಂತೆ ಕಾಂಗ್ರೆಸ್ ಶಾಸಕರ ಮತಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮಾತ್ರ ಚಲಾಯಿಸಲು ಏನೆಲ್ಲಾ ತಂತ್ರ ಮಾಡಬೇಕು ಎನ್ನುವ ಬಗ್ಗೆ ಚರ್ಚೆ ನಡೆಯಲಿದೆ.

ಡಿಕೆಶಿ ಸಿಎಂ ಆದ ಬಳಿಕ ಮೊದಲ ಶಾಸಕಾಂಗ ಸಭೆ

ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿಯಾದ ನಂತರ ಅವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಮೊದಲ ಶಾಸಕಾಂಗ ಸಭೆ ನಡೆಯುತ್ತಿದ್ದು, ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರುಗಳು ಹಾಗೂ ಪಕ್ಷದ ಎಲ್ಲಾ ಕಾರ್ಯಾಧ್ಯಕ್ಷರು ಪಾಲ್ಗೊಳ್ಳಲಿದ್ದು, ಈ ಸಭೆಗೆ ಕಡ್ಡಾಯವಾಗಿ ಹಾಜರಿರುವಂತೆ ವಿಧಾನಸಭೆ ಹಾಗೂ ವಿಧಾನ ಪರಿಷತ್ತಿನ ಎಲ್ಲ ಸದಸ್ಯರುಗಳಿಗೆ ಸೂಚನೆ ನೀಡಲಾಗಿದೆ.

ಚುನಾವಣೆಯಲ್ಲಿ ಮತ ಚಲಾಯಿಸುವ ವಿಧಾನ ಬಗ್ಗೆ ಮಾಹಿತಿ: ಸಭೆಯಲ್ಲಿ ವಿಧಾನಪರಿಷತ್ತಿನ ಚುನಾವಣೆಯಲ್ಲಿ ಯಾವ ರೀತಿ ಮತ ಚಲಾಯಿಸಬೇಕು, ಯಾವ ಶಾಸಕರು ಕಾಂಗ್ರೆಸ್‌ನ ಯಾವ ಅಭ್ಯರ್ಥಿಗೆ ಮತ ಹಾಕಬೇಕು ಎನ್ನುವ ಬಗ್ಗೆ ಶಾಸಕರುಗಳಿಗೆ ಸೂಚನೆ ನೀಡಲಾಗುತ್ತದೆ. ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಮೊದಲ ಮತ್ತು ದ್ವಿತೀಯ ಪ್ರಾಶಸ್ತ್ಯದ ಮತ ಚಲಾಯಿಸಲು ಅವಕಾಶವಿದ್ದು, ಮೊದಲ ಪ್ರಾಶಸ್ತ್ಯ ಮತವನ್ನು ಪಕ್ಷ ಸೂಚಿಸಿದ ಅಭ್ಯರ್ಥಿಗಳಿಗೆ ಹಾಕುವ ಶಾಸಕರುಗಳು ಎರಡನೇ ಪ್ರಾಶಸ್ತ್ಯ ಮತವನ್ನು ಯಾವ ಕಾಂಗ್ರೆಸ್ ಅಭ್ಯರ್ಥಿಗೆ ಹಾಕಬೇಕು ಎಂಬುದನ್ನು ಎಲ್ಲಾ ಶಾಸಕರಿಗೂ ತಿಳಿಸಲಾಗುತ್ತದೆ.

ಅಡ್ಡ ಮತದಾನವಾಗದಂತೆ ಎಚ್ಚರ

ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷ 8ನೇ ಅಭ್ಯರ್ಥಿಯನ್ನಾಗಿ ಗೋವಿಂದರಾಜು ಅವರನ್ನು ಕಣಕ್ಕಿಳಿಸುವುದರಿಂದ ಕಾಂಗ್ರೆಸ್ ಪಕ್ಷದಿಂದ ಯಾರೂ ಅಡ್ಡ ಮತದಾನ ಮಾಡದಂತೆ ಕಟ್ಟೆಚ್ಚರ ವಹಿಸಲಾಗಿದ್ದು, ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಸೂಚನೆಯನ್ನು ಎಐಸಿಸಿ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶಾಸಕರುಗಳಿಗೆ ನೀಡಲಿದ್ದಾರೆ. ವಿಧಾನ ಪರಿಷತ್ತಿನ ಚುನಾವಣೆ ಗೌಪ್ಯ ಮತದಾನವಾಗಿರುವುದರಿಂದ ಯಾರಾದರೂ ಅಡ್ಡಮತದಾನ ಮಾಡಬಹುದು ಎಂಬ ಭೀತಿಯೂ ಇದ್ದು, ಅದಕ್ಕೆ ಅವಕಾಶ ಕೊಡದಂತೆ ಕಾಂಗ್ರೆಸ್ ಶಾಸಕರನ್ನು ಮತದಾನದವರೆಗೂ ರೆಸಾರ್ಟ್‌ನಲ್ಲಿ ಇರಿಸುವ ತಂತ್ರಗಾರಿಕೆಯನ್ನು ಮಾಡಲಾಗಿದೆ. ವಿಧಾನಪರಿಷತ್ತಿನ 7 ಸ್ಥಾನಗಳ ಪೈಕಿ 5 ಸ್ಥಾನಗಳಿಗೆ ಕಾಂಗ್ರೆಸ್ ಪಕ್ಷ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಎಐಸಿಸಿ ಕಾರ್ಯದರ್ಶಿ ಪಿ.ವಿ. ಮೋಹನ್, ಶಿವಣ್ಣ ಕಮಕನೂರು, ಮಂಜಪ್ಪ ಶಿವಣ್ಣ ಹಾಗೂ ವಿನಯ್ ಕಾರ್ತಿಕ್ ಇವರುಗಳನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ವಿಧಾನ ಪರಿಷತ್ತಿಗೆ ಮತದಾನ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೂ ನಡೆಯಲಿದ್ದು, 5 ಗಂಟೆಯ ನಂತರ ಮತ ಎಣಿಕೆ ನಡೆದು ಫಲಿತಾಂಶ ಪ್ರಕಟಿಸಲಾಗುತ್ತದೆ.

ಸ್ಲೋವಾಕಿಯಾ ಸಂಬಂಧ ಸುಮಧುರ

ಪುಟ ೧➜ ಭಾರತದ ಪ್ರಧಾನಿಯೊಬ್ಬರು ಈ ಯುರೋಪಿಯನ್ ರಾಷ್ಟ್ರಕ್ಕೆ ಭೇಟಿ ನೀಡುತ್ತಿರುವುದು ಇದೇ ಮೊದಲು.

ಆರ್ಥಿಕ ಮತ್ತು ಇಂಧನ ಸಹಕಾರ: ಭಾರತ-ಯುರೋಪಿಯನ್ ಯೂನಿಯನ್ ಮುಕ್ತ ವ್ಯಾಪಾರ ಒಪ್ಪಂದವನ್ನು ಆದಷ್ಟು ಬೇಗ ಅನುಷ್ಠಾನಗೊಳಿಸಲು ಇಬ್ಬರೂ ನಾಯಕರು ಒಪ್ಪಿಕೊಂಡಿದ್ದಾರೆ. ಉಭಯ ದೇಶಗಳ ನಡುವೆ ಸಂಚಾರವನ್ನು ಸುಲಭಗೊಳಿಸಲು ಕಾರ್ಮಿಕ ವಲಸೆ ಕ್ಷೇತ್ರದಲ್ಲಿ ಸಹಕಾರದ ಕುರಿತು ತಿಳುವಳಿಕಾ ಪತ್ರಕ್ಕೆ ಸಹಿ ಹಾಕಲಾಗಿದ್ದು, ಸಾಮಾಜಿಕ ಭದ್ರತಾ ಒಪ್ಪಂದವನ್ನು ಶೀಘ್ರದಲ್ಲೇ ಪೂರ್ಣಗೊಳಿಸಲು ನಿರ್ಧರಿಸಲಾಗಿದೆ. ಇದರೊಂದಿಗೆ, ಪರಮಾಣು ಶಕ್ತಿ ಮತ್ತು ಜಿಯೋಥರ್ಮಲ್ ವಿದ್ಯುತ್ ಸೇರಿದಂತೆ ಇಂಧನ ವಲಯದಲ್ಲಿ ಸಹಕಾರವನ್ನು ಹೆಚ್ಚಿಸಲು ಮತ್ತು ಆಟೋಮೊಬೈಲ್, ರೈಲ್ವೆ, ಸುಧಾರಿತ ಉತ್ಪಾದನೆ ಹಾಗೂ ಹೊಸ ತಂತ್ರಜ್ಞಾನಗಳತ್ತ ಗಮನ ಹರಿಸಲು ಉಭಯ ದೇಶಗಳು ಸಮ್ಮತಿಸಿವೆ.

ರಕ್ಷಣೆ ಮತ್ತು ಜಾಗತಿಕ ಸಮನ್ವಯ: ರಕ್ಷಣಾ ಉದ್ಯಮಗಳ ನಡುವೆ ಸಹಕಾರ ಹೆಚ್ಚಿಸಲು ಉಭಯ ನಾಯಕರ ಮಾತುಕತೆಯ ನಂತರ ರಕ್ಷಣಾ ಸಹಕಾರದ ಕುರಿತು ಆಶಯ ಪತ್ರವನ್ನು ಅಂತಿಮಗೊಳಿಸಲಾಯಿತು. ಜಾಗತಿಕ ಮಟ್ಟದಲ್ಲಿ ಎಲ್ಲಾ ವಿವಾದಗಳು ಮತ್ತು ಉದ್ವಿಗ್ನತೆಗಳನ್ನು ಶಾಂತಿಯುತವಾಗಿ ಬಗೆಹರಿಸಬೇಕು ಮತ್ತು ಜಾಗತಿಕ ಸಂಸ್ಥೆಗಳು 21ನೇ ಶತಮಾನದ ವಾಸ್ತವಗಳನ್ನು ಎದುರಿಸಲು ಮರು ವ್ಯಾಖ್ಯಾನಿಸಿಕೊಳ್ಳಬೇಕು ಎಂದು ಎರಡೂ ದೇಶಗಳು ಒಮ್ಮತ ಸೂಚಿಸಿವೆ. ಬೆಳೆಯುತ್ತಿರುವ ಇಂಡೋ-ಪೆಸಿಫಿಕ್ ಪ್ರದೇಶದ ಪ್ರಾಮುಖ್ಯತೆಯಿಂದ, ಪ್ರಾದೇಶಿಕ ಸಂಪರ್ಕ, ಮುಕ್ತ ಅಂತರರಾಷ್ಟ್ರೀಯ ವ್ಯಾಪಾರ ಮತ್ತು ನೌಕಾಯಾನದ ಸ್ವಾತಂತ್ರ್ಯ ಬೆಂಬಲಿಸಲು ಪ್ರಬಲ ಪಾಲುದಾರಿಕೆಯ ಅಗತ್ಯವಿದೆ ಎಂದು ನಾಯಕರು ಒಪ್ಪಿಕೊಂಡಿದ್ದಾರೆ.

ಭಯೋತ್ಪಾದಕರು ಬ್ರದರ್ಸ್ ಹೇಗಾದರು: ಸಿ.ಟಿ.ರವಿ ಪ್ರಶ್ನೆ

• **ಬಳ್ಳಾರಿ:** ಭಯೋತ್ಪಾದಕರನ್ನು, ಕುಕ್ಕರ್ ಬಾಂಬ್ ಇಟ್ಟವರನ್ನು ಕಾಂಗ್ರೆಸ್‌ನವರು ಅವರೆಲ್ಲರೂ ನಮ್ಮ ಬ್ರದರ್ಸ್ ಎಂದು ಕರೆದಿದ್ದರು. ಇದು ಕಾಂಗ್ರೆಸ್ ಇತಿಹಾಸ. ಆದರೆ, ನಮ್ಮ ಬಿಜೆಪಿ ಸಂಸ್ಕೃತಿಯೇ ಬೇರೆ ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ದೇಶದಲ್ಲಿ ಆತಂಕ ಸೃಷ್ಟಿಸುವವರ, ಭಯೋತ್ಪಾದಕರನ್ನು ಸಂಹಾರ ಮಾಡುತ್ತೇವೆ ಹೊರತೂ, ಅವರಿಗೆ ರಾಜ ಮರ್ಯಾದೆ ನೀಡಿ ಬಿರಿಯಾನಿ ಕೊಡುವ ಸರ್ಕಾರ ನಮ್ಮದಲ್ಲ, ಮಂಗಳೂರಿನಲ್ಲಿ ಆಟೋದಲ್ಲಿ ಕುಕ್ಕರ್ ಬಾಂಬ್ ಬ್ಲಾಸ್ಟ್ ಮಾಡಿದವರನ್ನು ಕಾಂಗ್ರೆಸ್‌ನವರು ಅವರು ನಮ್ಮ ಬ್ರದರ್ಸ್ ಅಂತಾರೆ ಅಂದ್ರೆ, ನಾಚಿಕೆಯಾಗಬೇಕು ಎಂದರು.

ನಕ್ಸಲ್ ಮುಕ್ತ ಭಾರತ ಮಾಡುವ ಸಂಕಲ್ಪ ನಮ್ಮ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರ ಮಾಡಿದೆ. ನಗರ ನಕ್ಸಲ್‌ರು ಬಿಜೆಪಿಯೇತರ ಸರ್ಕಾರ ಇರುವ ರಾಜ್ಯಗಳಲ್ಲಿದ್ದು, ಅವರನ್ನು ತೊಲಗಿಸಬೇಕು ಎಂದು ಕೈ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. ರಾಜ್ಯದ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಜನರಿಗೆ ಅನೇಕ ಭರವಸೆಗಳನ್ನು ನೀಡಿದ್ದು ಸ್ವಾಗತಾರ್ಹ. ಯಾರಾದರೂ ಲಂಚ ಕೇಳಿದರೆ, ಲಂಚ ಪಡೆದರೆ ನಮ್ಮ ಕಚೇರಿಗೆ ದೂರು ನೀಡಿ, ಗಮನಕ್ಕೆ ತನ್ನಿ ಎಂದು ಸಿಎಂ ಡಿ.ಕೆ.ಶಿವಕುಮಾರ ಅವರ ಹೇಳಿಕೆ ಸ್ವಾಗತಾರ್ಹ. ಆದರೆ, ಸಿಎಂ ಕಚೇರಿಯೇ ಭ್ರಷ್ಟಾಚಾರ ಕೇಂದ್ರವಾದರೇ ಯಾರಿಗೆ ದೂರು ನೀಡಬೇಕು ಎನ್ನುವ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ. ಒಳ್ಳೆಯ ಆಡಳಿತ ನೀಡಲಿ ಎಂದು ಹಾರೈಸೋಣ. ಆದರೆ, ಅದು ಆಗದ ಕನಸು ಕಾಂಗ್ರೆಸ್ ಭ್ರಷ್ಟಾಚಾರದ ಪಿತಾಮಹ, ಎಲ್ಲವನ್ನೂ ಕಾದು ನೋಡುತ್ತೇವೆ ಎಂದು ಎಚ್ಚರಿಸಿದರು.

ಕೊಲ್ಲೂರಿಗೆ ಬಿವೈವಿ ಭೇಟಿ...

ವಿಕಸಿತ ಭಾರತದ ನಿರ್ಮಾಣಕ್ಕೆ ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಸಾರ್ಥಕ ಸಾಧನೆಗಳ 12 ವರ್ಷಗಳನ್ನು ಪೂರೈಸಿರುವ ಅಂಗವಾಗಿ ಶ್ರೀಕ್ಷೇತ್ರ ಕೊಲ್ಲೂರು ಮೂಕಾಂಬಿಕೆ ದೇವಾಲಯಕ್ಕೆ ಸೋಮವಾರ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಪಕ್ಷದ ಶಾಸಕರಾದ ಸುನೀಲ್ ಕುಮಾರ್, ಭೈರತಿ ಬಸವರಾಜ್, ಹರೀಶ್ ಪೂಂಜಾ ಜತೆಗಿದ್ದರು.

ದೇಶದಲ್ಲಿ ಮೋದಿ ಸಾಧನೆ ಕ್ರಾಂತಿ: ಸಚಿವ ಸೋಮಣ್ಣ

• **ತುಮಕೂರು:** ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ 12 ವರ್ಷಗಳ ಆಡಳಿತವು ದೇಶದಲ್ಲಿ ಅತಿ ದೊಡ್ಡ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆಗೆ ಕಾರಣವಾಗಿದೆ ಎಂದು ಕೇಂದ್ರ ರಾಜ್ಯ ಸಚಿವ ವಿ. ಸೋಮಣ್ಣ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಅವರು, ದೇಶದ 25 ಕೋಟಿ ಜನರು ಬಡತನದಿಂದ ಮುಕ್ತರಾಗಿದ್ದಾರೆ. ಪಿಎಂ ಗರೀಬ್ ಕಲ್ಯಾಣ್ ಯೋಜನೆಯಲ್ಲಿ 81 ಕೋಟಿ ಜನರಿಗೆ ಉಚಿತ ರೇಷನ್, ಆವಾಸ್ ಯೋಜನೆಯಲ್ಲಿ 4 ಕೋಟಿ ಮನೆ ಹಾಗೂ ಜನ ಧನ್ ಮೂಲಕ 58 ಕೋಟಿ ಬ್ಯಾಂಕ್ ಖಾತೆ ತೆರೆಯಲಾಗಿದೆ ಎಂದರು.

ಜಲ ಜೀವನ್ ಮಿಷನ್‌ನಿಂದ 16 ಕೋಟಿ ಮನೆಗಳಿಗೆ ನಲ್ಲಿ ನೀರು ಹಾಗೂ 11 ಕೋಟಿ ಎಲ್‌ಪಿಜಿ ಸಂಪರ್ಕ ನೀಡಲಾಗಿದೆ. ಪಿಎಂ ಕಿಸಾನ್ ಮೂಲಕ ರೈತರ ಖಾತೆಗೆ 4.3 ಲಕ್ಷ ಕೋಟಿ ಜಮಾ ಮಾಡಲಾಗಿದ್ದು, ಯೂರಿಯಾಕ್ಕೆ ಶೇ.90 ರಷ್ಟು ಸಬ್ಸಿಡಿ ನೀಡಲಾಗುತ್ತಿದೆ. ಮುದ್ರಾ ಯೋಜನೆಯಲ್ಲಿ 57 ಕೋಟಿ ಜನರಿಗೆ ಸಾಲ ಸೌಲಭ್ಯ ನೀಡಲಾಗಿದೆ. ದೇಶದಲ್ಲಿ 164 ವಂದೇ ಭಾರತ್ ರೈಲುಗಳು ಕಾರ್ಯನಿರ್ವಹಿಸುತ್ತಿದ್ದು, ಹಾಗೂ 26 ನಗರಗಳಲ್ಲಿ ಮೆಟ್ರೋ ಸಂಪರ್ಕ ಕಲ್ಪಿಸಲಾಗಿದೆ. ಆಯುಷ್ಮಾನ್ ಭಾರತ್ ಅಡಿ 60 ಕೋಟಿ ಜನರಿಗೆ 5 ಲಕ್ಷದವರೆಗೆ ಉಚಿತ ಚಿಕಿತ್ಸೆ ಸಿಗುತ್ತಿದೆ.

ಭಾರತದ ಯುಪಿಐ ಬಳಕೆ ಜಗತ್ತಿನಲ್ಲೇ ನಂ.1 ಆಗಿದೆ ಎಂದರು. ಇಂದು ಭಾರತೀಯ ಮಧ್ಯಮ ವರ್ಗವೇ ದೇಶದ ಅತಿದೊಡ್ಡ ಗ್ರಾಹಕ ಶಕ್ತಿಯಾಗಿದೆ. ಪ್ರತಿಯೊಬ್ಬ ನಾಗರಿಕನು ಮೊದಲ ಕಾರು, ಸ್ವಂತ ಮನೆ ಹಾಗೂ ಮಕ್ಕಳ ಉನ್ನತ ಶಿಕ್ಷಣದ ಕನಸನ್ನು ನನಸು ಮಾಡುವ ಮೂಲಕ ವಿಕಸಿತ ಭಾರತ 2047 ನಿರ್ಮಿಸುವುದೇ ಪ್ರಧಾನಿ ಮೋದಿಯವರ ಸಂಕಲ್ಪವಾಗಿದೆ ಎಂದು ಕೇಂದ್ರ ಸಚಿವ ವಿ. ಸೋಮಣ್ಣ ತಿಳಿಸಿದರು.

ಕಿರುಸುದ್ದಿ

ಕಾಂಗ್ರೆಸ್‌ನಿಂದ ಎಸ್‌ಐಆರ್ ಕುರಿತು ಜಾಗೃತಿ ಸಮಾವೇಶ

• **ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿ ತೀವ್ರ ಪರಿಷ್ಕರಣೆ (ಎಸ್‌ಐಆರ್) ಹಿನ್ನೆಲೆಯಲ್ಲಿ ಕಾಂಗ್ರೆಸ್‌ನಿಂದ ಜೂ. 23 ರಿಂದ ಕಾಂಗ್ರೆಸ್‌ನಿಂದ ವಿಭಾಗವಾರು ಜಾಗೃತಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜೂ. 23ಕ್ಕೆ ಮಂಗಳೂರು, ಜೂ.25ಕ್ಕೆ ಹುಬ್ಬಳ್ಳಿ, ಜೂ.27ಕ್ಕೆ ಮೈಸೂರು ಮತ್ತು ಜೂ.29ಕ್ಕೆ ಕಲಬುರಗಿಯಲ್ಲಿ ಹಾಗೂ ಜೂ.30 ಬೆಂಗಳೂರಿನಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಕಾಂಗ್ರೆಸ್ ನಡಿಗೆ ಮತದಾರರ ಕಡೆಗೆ ಎಂಬ ಜಾಗೃತಿ ಕಾರ್ಯಕ್ರಮದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಪ್ರಮುಖರು ಭಾಗವಹಿಸಲಿದ್ದಾರೆ.

ಹಲ್ಲಿ ಬಿದ್ದ ನೀರು ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥ

• **ಕಲಬುರಗಿ:** ಗುಲ್ಬರ್ಗ ವಿಶ್ವವಿದ್ಯಾಲಯದ ಆವರಣದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಳೆಯ ಬಾಲಕರ ವಸತಿ ನಿಲಯದ ನೀರಿನ ಟ್ಯಾಂಕ್‌ನಲ್ಲಿ ಹಲ್ಲಿ ಬಿದ್ದ ನೀರು ಸೇವಿಸಿ 15ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಸ್ವಸ್ಥಗೊಂಡಿರುವ ಆತಂಕಕಾರಿ ಘಟನೆ ಸೋಮವಾರ ನಡೆದಿದೆ. ಜಿಲ್ಲೆಯ ಸರ್ಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಸಾಲು ಸಾಲು ಅವಾಂತರಗಳು ಸೃಷ್ಟಿಯಾಗುತ್ತಿದ್ದರೂ ಜಿಲ್ಲೆಯ ಇಬ್ಬರು ಸಚಿವರು ಇತ್ತ ಸುಳಿಯದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ನೀರು ಸೇವಿಸಿದ ವಿದ್ಯಾರ್ಥಿಗಳಲ್ಲಿ ತೀವ್ರ ವಾಂತಿ ಹಾಗೂ ಎದೆ ಉರಿ ಕಾಣಿಸಿಕೊಂಡಿದ್ದು, ಸಮಾಜಶಾಸ್ತ್ರ ವಿಭಾಗದ ಅರುಣಕುಮಾರ್ ನಾಯಕೋಡಿ ಹಾಗೂ ಇತಿಹಾಸ ವಿಭಾಗದ ಮಲ್ಲಿಕಾರ್ಜುನ ಜೇವರ್ಗಿ ಅವರನ್ನು ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಳೆದ ಎರಡು ದಿನಗಳಿಂದ ನೀರು ಕುಡಿಯುವಾಗ ತೀವ್ರ ದುರ್ವಾಸನೆ ಬಂದ ಹಿನ್ನೆಲೆಯಲ್ಲಿ ಟ್ಯಾಂಕ್ ಪರಿಶೀಲಿಸಿದಾಗ ಅದರಲ್ಲಿ ಎರಡು ಹಲ್ಲಿಗಳು ಸತ್ತು ಬಿದ್ದಿರುವುದು ಪತ್ತೆಯಾಗಿದೆ.

ಯುವತಿ ಆತ್ಮಹತ್ಯೆಗೆ ಯತ್ನ: ಕಾಂಗ್ರೆಸ್ ನಾಯಕಿ ಕೈವಾಡ

• **ಬೆಳಗಾವಿ:** ಮದುವೆಯಾಗುವುದಾಗಿ ನಂಬಿಸಿ ಯುವತಿಯೊಂದಿಗೆ ದೈಹಿಕ ಸಂಬಂಧ ಬೆಳೆಸಿದ ಯುವಕನನ್ನು ಮದುವೆಯಾಗದಂತೆ ಒತ್ತಡ ಹೇರಲಾಗುತ್ತಿದ್ದು, ಖಾಸಗಿ ಕ್ಷಣಗಳ ಫೋಟೋಗಳನ್ನು ಬಹಿರಂಗಪಡಿಸುವುದಾಗಿ ಬೆದರಿಕೆ ಹಾಕಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ಮನನೊಂದ ಯುವತಿಯೊಬ್ಬಳು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಬೆಳಗಾವಿಯಲ್ಲಿ ಬೆಳಕಿಗೆ ಬಂದಿದೆ. ಯುವತಿ ಗಂಭೀರ ಸ್ಥಿತಿಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದು, ಸಾವು-ಬದುಕಿನ ನಡುವೆ ಹೋರಾಟ ನಡೆಸುತ್ತಿದ್ದಾಳೆ ಎಂದು ತಿಳಿದುಬಂದಿದೆ. ಈ ಪ್ರಕರಣದಲ್ಲಿ ಬೆಳಗಾವಿ ಕಾಂಗ್ರೆಸ್ ನಾಯಕಿ ಆಯೇಶಾ ಸನದಿ ವಿರುದ್ಧ ಯುವತಿಯ ಪೋಷಕರು ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಸಲೀಂ ಕಿಲ್ಲೇದಾರ್ ಎಂಬ ಯುವಕ ಮದುವೆಯಾಗುವುದಾಗಿ ನಂಬಿಸಿ ಯುವತಿಯೊಂದಿಗೆ ದೈಹಿಕ ಸಂಬಂಧ ಬೆಳೆಸಿದ್ದಲ್ಲದೆ, ಆಕೆಯ ಖಾಸಗಿ ಕ್ಷಣಗಳ ಫೋಟೋಗಳನ್ನು ತನ್ನ ಬಳಿ ಇಟ್ಟುಕೊಂಡಿದ್ದಾನೆ ಎಂದು ದೂರಲಾಗಿದೆ.

ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆ

ಶೇ.25 ನೋಂದಣಿ ಪ್ರಗತಿ

• **ಬೆಂಗಳೂರು:** ಮೊಬೈಲ್ ಆ್ಯಪ್ ಮೂಲಕ ಜಿಪಿಎಸ್ ಆಧಾರಿತ ಹಾಜರಾತಿ ವ್ಯವಸ್ಥೆಗೆ 42 ಇಲಾಖೆಗಳ 4,78,522 ಸರ್ಕಾರಿ ನೌಕರರು ಒಳಪಟ್ಟಿದ್ದು, ಈ ಪೈಕಿ 3.01 ಲಕ್ಷಕ್ಕೂ ಹೆಚ್ಚು ನೌಕರರು ಈಗಾಗಲೇ ನೋಂದಾಯಿಸಿಕೊಂಡಿದ್ದಾರೆ. ಒಂದೇ ವಾರದಲ್ಲಿ ನೋಂದಣಿ ಪ್ರಕ್ರಿಯೆಯಲ್ಲಿ ಶೇ.25 ರಷ್ಟು ಪ್ರಗತಿ ಕಂಡುಬಂದಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹೇಳಿದರು.

ಕಳೆದ ವಾರ ಅಂದಾಜು 2,46,000 ರಷ್ಟಿದ್ದ ಒಟ್ಟು ನೋಂದಾಯಿತ ಉದ್ಯೋಗಿಗಳ ಸಂಖ್ಯೆ ಪ್ರಸ್ತುತ ವಾರದಲ್ಲಿ 3,01,034ಕ್ಕೆ ಏರಿಕೆಯಾಗಿದೆ. ಇದು ಕೇವಲ ಒಂದೇ ವಾರದಲ್ಲಿ ಶೇ.25 ಕ್ಕಿಂತಲೂ ಹೆಚ್ಚು (55,000ಕ್ಕೂ ಅಧಿಕ ಹೊಸ ಸೇರ್ಪಡೆ) ಬೆಳವಣಿಗೆಯಾಗಿದೆ. ಇದೇ ಅವಧಿಯಲ್ಲಿ, ಆ್ಯಪ್ ಮೂಲಕ ಪ್ರತಿದಿನ ದಾಖಲಾಗುವ ದೈನಂದಿನ ಹಾಜರಾತಿ ಸಂಖ್ಯೆಯು ಸಹ 1,85,308 ರಿಂದ 2,32,612 ಕ್ಕೆ ಜಿಗಿದಿದ್ದು, ಸಕ್ರಿಯ ಬಳಕೆಯಲ್ಲಿ ಶೇ.25 ರಷ್ಟು ಭಾರಿ ಏರಿಕೆ ದಾಖಲಾಗಿದೆ ಎಂದರು.

ಈ ಹಿಂದೆ ಜಾರಿಯಲ್ಲಿದ್ದ ಬಯೋಮೆಟ್ರಿಕ್ ವ್ಯವಸ್ಥೆಯಲ್ಲಿ ಉದ್ಯೋಗಿಗಳು ಕೇವಲ ಡಿಜಿಟಲ್ ಸಹಿ ಮಾಡಿ ಕಚೇರಿಯಿಂದ ಗೈರಾಗುವ ಸಾಧ್ಯತೆಗಳಿದ್ದವು. ಈ ದೋಷವನ್ನು ನಿವಾರಿಸಲು, ಉದ್ಯೋಗಿಗಳ ಭೌತಿಕ ಉಪಸ್ಥಿತಿ ಮತ್ತು ಕಚೇರಿಯ ಭೌಗೋಳಿಕ ಸ್ಥಳವನ್ನು ನಿಖರವಾಗಿ ಪತ್ತೆಹಚ್ಚುವ ಈ ಹೊಸ ವ್ಯವಸ್ಥೆಯನ್ನು ರೂಪಿಸಲಾಗಿದೆ. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಕರ್ತವ್ಯ ಆ್ಯಪ್ ತಂತ್ರಜ್ಞಾನವನ್ನು ಕರ್ನಾಟಕದಲ್ಲೇ ಅಭಿವೃದ್ಧಿಪಡಿಸಲಾಗಿದೆ.

ತಂತ್ರಜ್ಞಾನದ ವೈಶಿಷ್ಟ್ಯಗಳು: ಕೃತಕ ಬುದ್ಧಿಮತ್ತೆ (ಎಐ)ಆಧಾರಿತ ಮುಖ ಗುರುತಿಸುವಿಕೆ ತಂತ್ರಾಂಶವು ವಂಚನೆಯ ಹಾಜರಾತಿ ತಡೆಯಲಿದ್ದು, ಜಿಪಿಎಸ್ ತಂತ್ರಜ್ಞಾನದ ಮೂಲಕ ಉದ್ಯೋಗಿ ತನ್ನ ಕಚೇರಿಯ ನಿಗದಿತ ಪರಿಧಿಯೊಳಗೆ ಇದ್ದಾಗ ಮಾತ್ರ ಹಾಜರಾತಿ ದಾಖಲಿಸಲು ಸಾಧ್ಯವಾಗುತ್ತದೆ. ಆಂಡ್ರಾಯ್ಡ್ ಮತ್ತು ಐಒಎಸ್ ಆ್ಯಪ್ ಮೂಲಕ ಹಾಜರಾತಿ, ರಜೆ ಮತ್ತು ಅಧಿಕೃತ ಹೊರಗಿನ ಕೆಲಸದ ವಿವರಗಳನ್ನು ದಾಖಲಿಸುವ ಸೌಲಭ್ಯವಿದೆ ಎಂದರು.

ಮೊದಲ ಸ್ಥಾನದಲ್ಲಿ ಶಿಕ್ಷಣ ಇಲಾಖೆ: ಶಾಲಾ ಶಿಕ್ಷಣ ಇಲಾಖೆಯು ಒಟ್ಟು 1,76,055 ಉದ್ಯೋಗಿಗಳಲ್ಲಿ ಈಗಾಗಲೇ 1,68,252 ನೌಕರರು ನೋಂದಾಯಿಸಿಕೊಂಡಿದ್ದು, 1,41,800ಕ್ಕೂ ಹೆಚ್ಚು ದೈನಂದಿನ ಚೆಕ್-ಇನ್‌ಗಳೊಂದಿಗೆ ಮೊದಲ ಸ್ಥಾನದಲ್ಲಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು 66,969 ನೋಂದಣಿ ಹಾಗೂ 54,400ಕ್ಕೂ ಹೆಚ್ಚು ದೈನಂದಿನ ಹಾಜರಾತಿಯೊಂದಿಗೆ ಎರಡನೇ ಸ್ಥಾನದಲ್ಲಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆಗಳಲ್ಲಿ ಪ್ರಾಯೋಗಿಕವಾಗಿ ಯಶಸ್ವಿಯಾದ ನಂತರ, ಶಾಲಾ ಶಿಕ್ಷಣ ಇಲಾಖೆಯ ಸಿಬ್ಬಂದಿ ಇದನ್ನು ಸಕ್ರಿಯವಾಗಿ ಬಳಸುತ್ತಿದ್ದಾರೆ. ಇನ್ನುಳಿದ ಹಲವು ಇಲಾಖೆಗಳು ಈಗಾಗಲೇ ಶೇ.90 ಕ್ಕಿಂತ ಹೆಚ್ಚು ನೋಂದಣಿ ಮೈಲಿಗಲ್ಲು ದಾಟಿವೆ ಎಂದು ತಿಳಿಸಿದರು.

ಮೇಡ್ ಇನ್ ಕರ್ನಾಟಕ: ಯಾವುದೇ ಬಾಹ್ಯ ಖಾಸಗಿ ತಂತ್ರಜ್ಞಾನ ಸಂಸ್ಥೆಗಳ ನೆರವಿಲ್ಲದೆ, ಸಂಪೂರ್ಣವಾಗಿ ಸರ್ಕಾರದ ಪರಿಸರ ವ್ಯವಸ್ಥೆಯಲ್ಲೇ ಕರ್ತವ್ಯ ಸಾಫ್ಟ್‌ವೇರ್ ವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಉಸ್ತುವಾರಿಯಲ್ಲಿ, ಸೆಂಟರ್ ಫಾರ್ ಇ-ಗವರ್ನೆನ್ಸ್ (ಸಿಇಜಿ) ಮತ್ತು ಕರ್ನಾಟಕ ಎಐ ಸೆಲ್ ಜಂಟಿಯಾಗಿ ಇದನ್ನು ಸಿದ್ಧಪಡಿಸಿವೆ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ಸಿಬ್ಬಂದಿ ವೆಚ್ಚ ಉಳಿತಾಯವಾಗಿದ್ದು, ದತ್ತಾಂಶ ಸುರಕ್ಷತೆ ಮತ್ತು ಸ್ವಾಯತ್ತತೆ ಹೆಚ್ಚಾಗಿದೆ. ಕರ್ನಾಟಕದ ಈ ಯಶಸ್ವಿ ಮಾದರಿಯನ್ನು ದೇಶದ ಇತರೆ ರಾಜ್ಯಗಳೂ ಅಳವಡಿಸಿಕೊಳ್ಳಬಹುದಾಗಿದೆ ಎಂದರು.

> ಕಚೇರಿಗಳಲ್ಲಿ ಅಧಿಕಾರಿಗಳ ಭೌತಿಕ ಲಭ್ಯತೆ ಮತ್ತು ವಿಶ್ವಾಸಾರ್ಹತೆಯನ್ನು ಖಾತರಿಪಡಿಸುವ ಮೂಲಕ ಸಾರ್ವಜನಿಕರಿಗೆ ಸಿಗುವ ಸೇವೆಗಳು ಇನ್ನು ಮುಂದೆ ಹೆಚ್ಚು ಸುಲಭ ಹಾಗೂ ತಡೆರಹಿತವಾಗಲಿವೆ. ಈ ಮೂಲಕ ಕರ್ನಾಟಕವು ಡಿಜಿಟಲ್ ಆಡಳಿತ ಮತ್ತು ನಾಗರಿಕ ಕೇಂದ್ರಿತ ಸುಧಾರಣೆಯಲ್ಲಿ ದೇಶದಲ್ಲೇ ಮುಂಚೂಣಿ ರಾಜ್ಯವಾಗಿ ಹೊರಹೊಮ್ಮಿದೆ.
>
> ■ **ಡಾ. ಶಾಲಿನಿ ರಜನೀಶ್**, ಸರ್ಕಾರದ ಮುಖ್ಯ ಕಾರ್ಯದರ್ಶಿ

ಅಭಿವೃದ್ಧಿ ಶೂನ್ಯ ಸರ್ಕಾರ: ಬಿವೈವಿ

• **ಶಿವಮೊಗ್ಗ:** ಸಿಎಂ ಡಿ.ಕೆ.ಶಿವ ಕುಮಾರ್ ಅವರು ಭ್ರಷ್ಟಾಚಾರ ಸಹಿಸಿಕೊಳ್ಳುವುದಿಲ್ಲ ಎಂದಿದ್ದಾರೆ. ಆದರೆ ಇದು ಹಾಸ್ಯಾಸ್ಪದವಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಲೇವಡಿ ಮಾಡಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಭ್ರಷ್ಟಾಚಾರಕ್ಕೂ ಕಾಂಗ್ರೆಸ್‌ಗೂ ಅವಿನಾಭಾವ ಸಂಬಂಧವಿದೆ. ನಾನು ಈಗಲೇ ಸಿಎಂ ಬಗ್ಗೆ ಮಾತನಾಡುವುದಿಲ್ಲ, ಆದರೆ ರಾಜ್ಯದ ಜನತೆಯ ಹೇಳಿಕೆಗಳ ಪ್ರಕಾರ ಈ ಸರ್ಕಾರ ಅಭಿವೃದ್ಧಿ ಶೂನ್ಯ ಸರ್ಕಾರವಾಗಿದೆ. ಆಡಳಿತದಲ್ಲಿ ವೈಫಲ್ಯ ಕಂಡಿದೆ. ಡಿ.ಕೆ. ಶಿವಕುಮಾರ್ ಸಿಎಂ ಆಗಿರುವಷ್ಟು ದಿನವಾದರೂ ಒಳ್ಳೆಯ ಆಡಳಿತ ನೀಡಲಿ ಎಂದರು.

ಗ್ಯಾರಂಟಿ ಯೋಜನೆಯ ಲಕ್ಷಾಂತರ ಫಲಾನುಭವಿಗಳಿಗೆ ರಾಜ್ಯ ಸರ್ಕಾರ ಅನ್ಯಾಯ ಮಾಡಿದೆ. ಹೊಸದಾಗಿ ದಾಖಲೆ ನೀಡಬೇಕು ಎಂಬ ಸಬೂಬು ಹೇಳಿ ಯೋಜನೆಯನ್ನು ರದ್ದು ಮಾಡಿದೆ. ಇದು ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳಿಗೆ ತದ್ವಿರುದ್ಧವಾಗಿದೆ. ಆಗ ಯಾರ್ಯಾರಿಗೆ ಗ್ಯಾರಂಟಿ ಕೊಡುತ್ತೇವೆಂದು ಹೇಳಿದ್ದರೋ ಅವರೆಲ್ಲರಿಗೂ ಈ ಯೋಜನೆಯ ಲಾಭ ನೀಡಬೇಕು. ಕುಂಟುನೆಪ ಹೇಳಿ ಕತ್ತರಿ ಹಾಕುವ ಕೆಲಸಬೇಡ. ಆದರ ಬದಲು ರಾಜ್ಯದ ಆರ್ಥಿಕ ಸ್ಥಿತಿಗತಿಯ ಶ್ವೇತಪತ್ರ ಹೊರಡಿಸಿ ಎಂದು ಒತ್ತಾಯಿಸಿದರು. ಈಗಾಗಲೇ ಗ್ಯಾರಂಟಿ ಯೋಜನೆಯ ಭರವಸೆ ನೀಡಿದ ಹಿಮಾಚಲ ಪ್ರದೇಶ, ತೆಲಂಗಾಣದಲ್ಲಿ ಸರ್ಕಾರಿ ನೌಕರರಿಗೂ ಸಂಬಳ ಸಿಗುತ್ತಿಲ್ಲ, ಇಲ್ಲಿಯೂ ಅದೇ ಪರಿಸ್ಥಿತಿ ಬರಲಿದೆ. ಮತಕ್ಕಾಗಿ ಗ್ಯಾರಂಟಿಗಳನ್ನು ಘೋಷಿಸಿ ಅದಕ್ಕೆ ಕತ್ತರಿ ಹಾಕಿ ಕುಂಟುನೆಪ ಹೇಳುವುದು ಸರ್ಕಾರಕ್ಕೆ ಶೋಭೆಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶೇ.90ರಷ್ಟು ರೈತರ ವಿರೋಧ

ಬಡವ ರೈತರನ್ನು ಒಕ್ಕಲೆಬ್ಬಿಸುತ್ತಿರುವುದು ಅಕ್ಷಮ್ಯ ಅಪರಾಧ. ಕನಿಷ್ಠ ಶೇ. 70 ರಷ್ಟು ರೈತರು ಯೋಜನೆಗೆ ಒಪ್ಪಿಗೆ ಸೂಚಿಸಬೇಕು. ಇಲ್ಲಿ ಶೇ.90ರಷ್ಟು ರೈತರು ವಿರೋಧಿಸುತ್ತಿದ್ದಾರೆ. ಒತ್ತಾಯಪೂರ್ವಕವಾಗಿ ಜಮೀನು ಖರೀದಿ ಮಾಡುತ್ತಿರುವುದು ಸರಿಯಲ್ಲ. ರಾಹುಲ್‌ಗಾಂಧಿ ಅವರಿಗೆ ಕೂಡ ನಾನು ಪತ್ರ ಬರೆದು ರೈತರ ಭೂಸ್ವಾಧೀನ ಪ್ರಕ್ರಿಯೆ ಕೈಬಿಡುವಂತೆ ತಾಕೀತು ಮಾಡಲು ಸರ್ಕಾರಕ್ಕೆ ಸೂಚನೆ ನೀಡುವಂತೆ ಹೇಳಿದ್ದೇನೆ ಎಂದರು.

ಆರ್‌ಟಿಇ ವಿಸ್ತರಿಸುವ ಕುರಿತ ಸುತ್ತೋಲೆ ಜಾರಿಗೆ ಹೈ ತಡೆ

• **ಬೆಂಗಳೂರು:** 2026-27ನೇ ಶೈಕ್ಷಣಿಕ ವರ್ಷದಿಂದ 9ನೇ ತರಗತಿಗೂ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಸೌಲಭ್ಯ ವಿಸ್ತರಿಸುವ ಕುರಿತು ಸಾರ್ವಜನಿಕ ಶಿಕ್ಷಣ ಇಲಾಖೆ ಹೊರಡಿಸಿದ್ದ ಸುತ್ತೋಲೆ ಜಾರಿಗೆ ಕರ್ನಾಟಕ ಹೈಕೋರ್ಟ್ ಜು.3ರವರೆಗೆ ತಡೆ ನೀಡಿದೆ. ಈ ಹಿನ್ನೆಲೆಯಲ್ಲಿ, ರಾಜ್ಯದ ಎಲ್ಲ ಕ್ಷೇತ್ರಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡುವಂತೆ ಕರ್ನಾಟಕ ಅಸೋಸಿಯೇಟೆಡ್ ಮ್ಯಾನೇಜ್‌ಮೆಂಟ್ಸ್ ಆಫ್ ಸ್ಕೂಲ್ಸ್ (ಕ್ಯಾಮ್ಸ್) ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರಿಗೆ ಕ್ಯಾಮ್ಸ್ ಪ್ರಧಾನ ಕಾರ್ಯದರ್ಶಿ ಶಶಿಕುಮಾರ್ ಡಿ. ಈ ಸಂಬಂಧ ಪತ್ರ ಬರೆದಿದ್ದಾರೆ. ರಾಜ್ಯದ ಎಲ್ಲಾ ಉಪನಿರ್ದೇಶಕರು (ಡಿಡಿಪಿಐ), ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿಇಒ) ಹಾಗೂ ಅಧೀನ ಅಧಿಕಾರಿಗಳಿಗೆ ತಕ್ಷಣವೇ ಸ್ಪಷ್ಟ ನಿರ್ದೇಶನ ನೀಡುವಂತೆ ಕ್ಯಾಮ್ಸ್ ಮನವಿ ಮಾಡಿದೆ.

ಈ ಸುತ್ತೋಲೆಯ ಆಧಾರದ ಮೇಲೆ ಯಾವುದೇ ಶಾಲೆಯನ್ನು 9ನೇ ತರಗತಿಗೆ ಆರ್‌ಟಿಇ ಅಡಿಯಲ್ಲಿ ವಿದ್ಯಾರ್ಥಿಗಳನ್ನು ಸೇರಿಸಲು ಒತ್ತಾಯಿಸಬಾರದು. ಆದೇಶ ಪಾಲಿಸದ ಶಾಲೆಗಳ ವಿರುದ್ಧ ಯಾವುದೇ ರೀತಿಯ ಬಲವಂತದ ಅಥವಾ ದಂಡಾತ್ಮಕ ಕ್ರಮ ಕೈಗೊಳ್ಳಬಾರದು. ಸುತ್ತೋಲೆಯ ಅಡಿ ಸೇರಿರುವ ವಿದ್ಯಾರ್ಥಿಗಳಿಂದ ಈಗಾಗಲೇ ಸಂಗ್ರಹಿಸಿರುವ ಶುಲ್ಕವನ್ನು ಹಿಂತಿರುಗಿಸುವಂತೆ ಶಾಲೆಗಳಿಗೆ ನಿರ್ದೇಶನ ನೀಡಬಾರದು ಎಂದು ಮನವಿ ಮಾಡಿದೆ.

ಪ್ರಸ್ತುತ 2026-27ನೇ ಸಾಲಿನ ಪ್ರವೇಶ ಪ್ರಕ್ರಿಯೆಗಳು ಪೂರ್ಣಗೊಂಡಿರುವುದರಿಂದ, ಶಾಲೆಗಳು, ಪೋಷಕರು ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳಲ್ಲಿ ಗೊಂದಲ ಉಂಟಾಗದಂತೆ ಸರ್ಕಾರ ತಕ್ಷಣವೇ ಸ್ಪಷ್ಟನೆ ನೀಡಬೇಕು ಎಂದು ಕ್ಯಾಮ್ಸ್ ಒತ್ತಾಯಿಸಿದೆ.

ಪ್ರಿಯಾಂಕ್ ಆರೆಸ್ಸೆಸ್ ಫೋಬಿಯಾದಿಂದ ಹೊರಬರಲ್ಲ: ವಿ.ಸುನೀಲ್ ಕುಮಾರ್

• **ಬೆಂಗಳೂರು:** ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್)ವನ್ನು ನೋಂದಣಿ ಮಾಡಿಸಿ ಎಂದು ಸರಸಂಘಚಾಲಕರಿಗೆ ಪತ್ರ ಬರೆದಿರುವ ಗೃಹಸಚಿವ ಪ್ರಿಯಾಂಕ್ ಖರ್ಗೆ ಆರ್‌ಎಸ್‌ಎಸ್ ಫೋಬಿಯಾದಿಂದ ಹೊರಬರುವುದಿಲ್ಲ ಎನ್ನುವ ಮೂಲಕ ಶಾಸಕ ವಿ.ಸುನೀಲ್‌ಕುಮಾರ್ ತಿರುಗೇಟು ನೀಡಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಅವರು ಪೋಸ್ಟ್ ಮಾಡಿದ್ದಾರೆ.

ಕೊಟ್ಟ ಕುದುರೆಯ ಏರಲರಿಯದ ವೀರ ಪ್ರಿಯಾಂಕ್ ಖರ್ಗೆ ಅವರೇ, ನಿಮ್ಮನ್ನು ಆವರಿಸಿದ ಆರ್‌ಎಸ್‌ಎಸ್ ಫೋಬಿಯಾ ಬಿಡುಗಡೆಯಾಗುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ, ಪರಿಸ್ಥಿತಿ ಬದಲಾದಾಗ ಮನಸ್ಥಿತಿ ಬದಲಾಗುತ್ತದೆ ಎಂದು ನಾವೆಲ್ಲ ಭಾವಿಸಿದ್ದೆವು. ಆದರೆ, ನಿಮ್ಮ ವಿಚಾರದಲ್ಲಿ ಆ ನಿರೀಕ್ಷೆ ಹುಸಿಯಾಗಿದೆ ಎಂದು ಟೀಕಿಸಿದ್ದಾರೆ. ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರಾಗಿ ಮೂರು ವರ್ಷಗಳ ಕಾಲ ನಿಮ್ಮಿಂದ ಏನು ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಮೂರು ವರ್ಷದಲ್ಲಿ ಎಷ್ಟು ಕಿ.ಮೀ. ಗ್ರಾಮೀಣ ರಸ್ತೆ ನಿರ್ಮಾಣ ಮಾಡಿದಿರಿ ಎಂಬ ಪ್ರಶ್ನೆ ರಾಜ್ಯದ ಜನರಿಗೆ ಇನ್ನೂ ನಿಗೂಢವಾಗಿಯೇ ಉಳಿದಿದೆ.

ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಜಾತಿ ಹಾಗೂ ಪಂಗಡದ ವಿಶೇಷ ಉಪಯೋಜನೆ ಎಸ್‌ಸಿಎಸ್‌ಪಿ - ಟಿಎಸ್‌ಪಿ ಹಣವನ್ನು ರಾಜ್ಯ ಸರ್ಕಾರ ದುರ್ಬಳಕೆ ಮಾಡಿಕೊಂಡಾಗ ಉಸಿರೆತ್ತದ ನೀವು ನಿಮ್ಮ ವೈಫಲ್ಯವನ್ನು ಮುಚ್ಚಿಕೊಳ್ಳುವುದಕ್ಕೆ ಆರ್‌ಎಸ್‌ಎಸ್ ವಿರುದ್ಧ ನಾಲಗೆ ಹರಿಬಿಡುತ್ತಲೇ ಬಂದಿರಿ ಎಂದು ಕುಟುಕಿದ್ದಾರೆ.

ಭ್ರಷ್ಟಾಚಾರದಲ್ಲಿ ಮುಳುಗಿ ಹೋಗಿರುವ ಪೊಲೀಸ್ ಇಲಾಖೆಯನ್ನು ಹತೋಟಿಗೆ ತರುವ ಆದ್ಯ ಕರ್ತವ್ಯ ನಿಮ್ಮ ಮೇಲಿದೆ. ಅನ್ಯರಾಜ್ಯಗಳಲ್ಲಿ ಕರ್ನಾಟಕ ಪೊಲೀಸ್ ಮಾನ ಹರಾಜಾಗುತ್ತಿದೆ. ಕಾನೂನು ಸುವ್ಯವಸ್ಥೆ ಕುಸಿದು ಬಿದ್ದು ಖಾಕಿ ಕರ್ತವ್ಯ ಮರೆತಿದೆ. ಇದೆಲ್ಲದರ ಬಗ್ಗೆ ಉತ್ತರಿಸಬೇಕಾದ ನೀವು ಆರ್‌ಎಸ್‌ಎಸ್ ಬಗ್ಗೆ ಕಂಠ ಶೋಷಣೆ ಮಾಡಿಕೊಳ್ಳುವ ಪ್ರಯತ್ನವನ್ನು ಇನ್ನಾದರೂ ನಿಲ್ಲಿಸಿ ಎಂದು ಸುನೀಲ್ ಕುಮಾರ್ ಸಲಹೆ ನೀಡಿದ್ದಾರೆ.

ಬೆಂಕಿ ಅವಘಡ: ಇಬ್ಬರ ಸಾವು, ಹಲವರು ಗಂಭೀರ

• **ಮೈಸೂರು:** ಮೈಸೂರಿನ ದಟ್ಟಗಳ್ಳಿ ಸಮೀಪದ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ನಡೆದ ಬೆಂಕಿ ಅವಘಡ ಸಂಭವಿಸಿ, ಇಬ್ಬರು ಮೃತಪಟ್ಟಿದ್ದು ಹಲವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ನಡೆದಿದೆ.

ರೆಸ್ಟೋರೆಂಟ್ ನೌಕರರು ಎಂದು ಹೇಳಲಾಗುತ್ತಿರುವ ಪ್ರಕಾಶ್ ಹಾಗೂ ಸುಹೇಲ್ ಎಂಬವರು ಮೃತಪಟ್ಟಿದ್ದು, ಸುಮಾರು 7 ಮಂದಿಗೆ ಸುಟ್ಟ ಗಾಯಗಳಾಗಿದ್ದು, ಗಾಯಾಳುಗಳನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದೆ. ಕಟ್ಟಡದ ಮೇಲಂತಸ್ತು ಮರ ಮತ್ತು ಹುಲ್ಲಿನಿಂದ ಅಲಂಕರಿಸಲಾಗಿತ್ತು. ಹಾಗಾಗಿ ಬೆಂಕಿ ವೇಗ ಆವರಿಸಿದೆ. ಮೇಲಿಂದ ಕೆಳಗೆ ಬರಲು ಚಿಕ್ಕ ಸ್ಟೇರ್ ಮಾತ್ರ ಇದೆ. ಜತೆಗೆ ಹೊರಗೆ ಬರಲು ಕೂಡಾ ಒಂದೇ ಬಾಗಿಲು ಇದ್ದುದರಿಂದ ಬಹಳ ಮಂದಿ ಬೆಂಕಿಯಿಂದ

ಸ್ಫೋಟದ ಬಳಿಕ ಕಟ್ಟಡದಲ್ಲಿ ದಟ್ಟ ಹೊಗೆ ಆವರಿಸಿದ್ದರಿಂದ ರೆಸ್ಟೋರೆಂಟ್‌ನಲ್ಲಿದ್ದವರು ಆತಂಕಗೊಂಡು ಮೇಲಂತಸ್ತಿನಿಂದ ಜಿಗಿದು ಪಾರಾಗಲು ಯತ್ನಿಸಿದ್ದಾರೆ. ಇದರಿಂದಾಗಿ ಗಾಯಗೊಂಡಿದ್ದಾರೆ. ಸ್ಫೋಟದ ತೀವ್ರತೆಗೆ ಇಡೀ ಆವರಣ ಸುಟ್ಟು ಕರಕಲಾಗಿದೆ. ಈ ಘಟನೆಯಿಂದಾಗಿ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ವಿಷಯ ತಿಳಿದು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಹರ ಸಾಹಸ ನಡೆಸಿ ಬೆಂಕಿಯನ್ನು ನಂದಿಸಿದರು. ಘಟನೆಗೆ ಸಿಲಿಂಡರ್ ಸ್ಫೋಟವಾಗಿದ್ದೆ ಕಾರಣ ಎಂದು ಹೇಳಲಾಗುತ್ತಿದೆ. ಆದರೆ ಘಟನೆ ನೋಡಿದವರು ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಇದು ಆಗಿದೆ ಎಂದು ಹೇಳುತ್ತಿದ್ದಾರೆ.

ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅವಘಡಕ್ಕೆ ಕಾರಣ ಏನು ಎಂಬ ಬಗ್ಗೆ ತನಿಖೆ ಕೈಗೊಂಡಿದ್ದಾರೆ.

ಕೃತಕ ಬುದ್ಧಿಮತ್ತೆ, ಯಂತ್ರ ಕಲಿಕೆ ಶಿಕ್ಷಣಕ್ಕೆ ಮಹತ್ವದ ಹೆಜ್ಜೆ ಇಟ್ಟ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ

ಕೃಷಿ ಕ್ಷೇತ್ರದ ಪದವಿ ವಿದ್ಯಾರ್ಥಿಗಳಿಗೆ ಎಐ ಕೋರ್ಸ್ ಆರಂಭ

▸ **ದೇವಿತಾ ಸಿ.ಸುಬ್ಬಯ್ಯ**

• **ಬೆಂಗಳೂರು:** ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆ ದಿನದಿಂದ ದಿನಕ್ಕೆ ವಿಸ್ತರಿಸುತ್ತಿರುವ ಸಂದರ್ಭದಲ್ಲಿ, ಕೃಷಿ ವಿಶ್ವವಿದ್ಯಾಲಯದಲ್ಲಿ ಕೃತಕ ಬುದ್ಧಿಮತ್ತೆ (AI) ಮತ್ತು ಯಂತ್ರ ಕಲಿಕೆ (Machine Learning) ಶಿಕ್ಷಣಕ್ಕೆ ಹೊಸ ದಿಕ್ಕು ನೀಡುವ ಮಹತ್ವದ ಹೆಜ್ಜೆಯಿಟ್ಟಿದೆ. ಬೆಂಗಳೂರು ಕೃಷಿ ವಿವಿಯು ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಕೃಷಿ ಬಿಎಸ್ಸಿ ಪದವಿ ಮತ್ತು ನಾನಾ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಕೃತಕ ಬುದ್ಧಿಮತ್ತೆ (ಎಐ) ನಾನ್ ಗ್ರೇಡಿಯಲ್ ಕಂಪಲ್ಸರಿ ಕೋರ್ಸ್ ಆರಂಭಿಸಿದೆ.

ಕೃಷಿ ವಿವಿಯಲ್ಲಿ ಮೊದಲ ಬಾರಿಗೆ ಪ್ರಾರಂಭಿಸುತ್ತಿರುವ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮಷಿನ್ ಲರ್ನಿಂಗ್ ಮತ್ತು ಬಿಗ್ ಡೇಟಾ ಅನಾಲಿಟಿಕ್ಸ್ ಅನ್ನು ಒಂದು ಭಾಗವಾಗಿ ತೆಗೆದುಕೊಂಡು, ಆರು ತಿಂಗಳ ಕಾಲ ಅಧ್ಯಯನ ಮಾಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ಪ್ರತ್ಯೇಕ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್, ಮಷಿನ್ ವಿಭಾಗ ಪ್ರಾರಂಭಿಸಿದ್ದು, ನುರಿತ ಪ್ರಾಧ್ಯಾಪಕರನ್ನು ನಿಯೋಜಿಸುತ್ತಿದೆ. ಜತೆಗೆ, ಪ್ರತಿಷ್ಠಿತ ಇಂಜಿನಿಯರಿಂಗ್ ಕಾಲೇಜುಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ವರ್ಚುಯಲ್ ತರಗತಿಗಳನ್ನು ನಡೆಸಲು ಈ ಕಾಲೇಜುಗಳ ಪ್ರಾಧ್ಯಾಪಕರನ್ನು ಬಳಸಿಕೊಳ್ಳಲಾಗುತ್ತದೆ. ವಾರಾಂತ್ಯದಲ್ಲಿ ವಿದ್ಯಾರ್ಥಿಗಳೊಂದಿಗೆ ಸಂವಾದ, ಚರ್ಚಾ ಕಾರ್ಯಕ್ರಮಗಳಿಗಾಗಿ ಭೌತಿಕ ತರಗತಿ ನಡೆಸಲಾಗುವುದು. ಈ ಕೋರ್ಸ್‌ಗೆ ಅಂಕಗಳು ಇರುವುದಿಲ್ಲ, ಆದರೆ ಇದಕ್ಕೆ ಗ್ರೇಡಿಂಗ್ ಇರಲಿದ್ದು, ಕಡ್ಡಾಯವಾಗಿ ಕಲಿಯಬೇಕಾಗಿರುತ್ತೆ.

AI ಚಿತ್ರ

ವಿದ್ಯಾರ್ಥಿಗಳಿಗೆ ಎಐ ಪಾಠ: ಪ್ರಸ್ತುತ ವಿಶ್ವವಿದ್ಯಾಲಯವು ಅಂತಿಮ ವರ್ಷದ ಬಿಎಸ್ಸಿ (ಕೃಷಿ) ಹಾಗೂ ಕೃಷಿ ವ್ಯವಹಾರ ನಿರ್ವಹಣೆ (ABM) ವಿದ್ಯಾರ್ಥಿಗಳಿಗಾಗಿ EAI& 421: ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯ ಅನ್ವಯಿಕೆಗಳು ಎಂಬ ವಿಶೇಷ ಕೋರ್ಸ್ ಯಶಸ್ವಿಯಾಗಿ ನಡೆದಿದೆ. ಈ ಕೋರ್ಸ್‌ಗಳನ್ನು ರೇವಾ ವಿಶ್ವವಿದ್ಯಾಲಯದ ತಜ್ಞ ಅಧ್ಯಾಪಕರ ಸಹಯೋಗದಲ್ಲಿ ವಿದ್ಯಾರ್ಥಿಗಳಿಗೆ ಬೋಧಿಸಲಾಗಿದೆ.

> ಬಿಕೆವಿಕೆಯಲ್ಲಿ ಕೈಗೊಂಡಿರುವ ಈ ಉಪಕ್ರಮಗಳು ಕೇವಲ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸೀಮಿತವಾಗದೇ, ಭವಿಷ್ಯದ ಸ್ಮಾರ್ಟ್ ಕೃಷಿ ವ್ಯವಸ್ಥೆಗೆ ಬಲವಾದ ಅಡಿಪಾಯ ಹಾಕುವ ಪ್ರಯತ್ನವಾಗಿ ಪರಿಣಮಿಸಿವೆ. ಕೃಷಿ ಮತ್ತು ತಂತ್ರಜ್ಞಾನ ಒಂದಾಗುವ ಹೊಸ ಯುಗಕ್ಕೆ ಇದು ನಾಂದಿಯಾಗುವ ಸಾಧ್ಯತೆಗಳಿವೆ.
>
> ■ **ಡಾ.ಮಂಜುನಾಥ್**, ಸಹಾಯಕ ಪ್ರಾಧ್ಯಾಪಕ

ಅತ್ಯಾಧುನಿಕ ಎಐ ಪ್ರಯೋಗಾಲಯ

ಕೃಷಿ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ತಂತ್ರಜ್ಞಾನ ಅಭಿವೃದ್ಧಿಗೆ ಉತ್ತೇಜನ ನೀಡುವ ಉದ್ದೇಶದಿಂದ ಜಿಕೆವಿಕೆ ವಿಶೇಷ ಎಐ ಪ್ರಯೋಗಾಲಯ ಸ್ಥಾಪಿಸಲಾಗಿದ್ದು, ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ನಿಧಿ ಹಾಗೂ ವಿಶ್ವವಿದ್ಯಾಲಯದ ಅಭಿವೃದ್ಧಿ ಅನುದಾನಗಳ ನೆರವಿನಿಂದ ಈ ಯೋಜನೆ ರೂಪುಗೊಂಡಿದೆ. ಈ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ, ಡೇಟಾ ವಿಶ್ಲೇಷಣೆ, ಕೃಷಿ ಮುನ್ಸೂಚನಾ ಮಾದರಿಗಳು, ಸ್ಮಾರ್ಟ್ ಕೃಷಿ ತಂತ್ರಜ್ಞಾನ ಮತ್ತು ಸ್ವಯಂಚಾಲಿತ ವ್ಯವಸ್ಥೆಗಳ ಕುರಿತು ಪ್ರಾಯೋಗಿಕ ತರಬೇತಿ ಪಡೆಯಬಹುದಾಗಿದೆ.

ವಿಶೇಷ ಎಐ ಇಂಜಿನಿಯರಿಂಗ್ ಪದವಿ

ವಿಶ್ವವಿದ್ಯಾಲಯವು ಮುಂದಿನ 2027-28ನೇ ಶೈಕ್ಷಣಿಕ ವರ್ಷದಿಂದ ಬಿ.ಟೆಕ್ (ಕೃಷಿಯಲ್ಲಿ ಕೃತಕ ಬುದ್ಧಿಮತ್ತೆ) ಎಂಬ ಪದವಿ ಕೋರ್ಸ್ ಆರಂಭಿಸಲು ಯೋಜನೆ ರೂಪಿಸಿದೆ. ಅದೇ ರೀತಿ ಡಿಸೆಂಬರ್ ಮಾಹೆಯೊಳಗೆ ಸ್ನಾತಕೋತ್ತರ ವಿದ್ಯಾರ್ಥಿಗಳಿಗಾಗಿ CMC - 511: ಕೃಷಿಯಲ್ಲಿ ಕೃತಕ ಬುದ್ಧಿಮತ್ತೆಯ ಅನ್ವಯಿಕೆಗಳು ಎಂಬ ಕೋರ್ಸ್ ಪರಿಚಯಿಸಲಾಗುತ್ತಿದ್ದು, ಕೃಷಿ ಅಂಕಿ ಅಂಶ ಶಾಸ್ತ್ರ, ಅನ್ವಯಿಕ ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನ ವಿಭಾಗಗಳ ಅಧ್ಯಾಪಕರು ಈ ಪಠ್ಯಕ್ರಮವನ್ನು ಬೋಧಿಸಲಿದ್ದಾರೆ.

ಗ್ಯಾರಂಟಿಗಳ ಹೆಸರಿನಲ್ಲಿ ಜನರಿಗೆ ಮೋಸ: ಸಂಸದ

• **ಶಿವಮೊಗ್ಗ:** ಕಾಂಗ್ರೆಸ್ ಸರ್ಕಾರ ಮೂರು ವರ್ಷಗಳಲ್ಲೇ ದಿವಾಳಿಯಾಗಿದೆ. ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಿದೆ ಎಂದು ಸಂಸದ ಗೋವಿಂದ ಕಾರಜೋಳ ಆರೋಪಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮಗಳೊಂದಿಗೆ ಮಾತನಾಡಿ, ವಿಧಾನಸಭಾ ಚುನಾವಣೆ ವೇಳೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಇಬ್ಬರೂ ಮಹಿಳೆಯರು ಮತ್ತು ಯುವಕರಿಗೆ ಆರ್ಥಿಕ ನೆರವು, ಉಚಿತ ಬಸ್ ಪ್ರಯಾಣ, ಉಚಿತ ವಿದ್ಯುತ್ ಹಾಗೂ 10 ಕೆ.ಜಿ ಅಕ್ಕಿ ನೀಡುವುದಾಗಿ ಭರವಸೆ ನೀಡಿ ಅಧಿಕಾರಕ್ಕೆ ಬಂದರು. ಇದೀಗ ಬಡವರು, ದಲಿತರು ಹಾಗೂ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ದೂರಿದರು.

ದಲಿತ ಸಮುದಾಯದ ಅಭಿವೃದ್ಧಿ, ಶಿಕ್ಷಣ, ಉದ್ಯೋಗ, ಮನೆ ನಿರ್ಮಾಣ ಹಾಗೂ ಭೂಮಿಗಾಗಿ ಬಳಸಬೇಕಾದ ಹಣವನ್ನು ಸರ್ಕಾರ ಬೇರೆ ಉದ್ದೇಶಗಳಿಗೆ ದುರುಪಯೋಗ ಪಡಿಸಿಕೊಂಡಿದೆ. ಇದರಿಂದ ದಲಿತರಿಗೆ ದೊಡ್ಡ ಮಟ್ಟದ ಅನ್ಯಾಯವಾಗಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗುತ್ತಿದ್ದರೂ ಸರ್ಕಾರ ಯಾವುದೇ ಕಾಳಜಿ ತೋರಿಸುತ್ತಿಲ್ಲ, ಈಗ ಗೃಹಲಕ್ಷ್ಮಿ ಯೋಜನೆಗೂ ಕುತ್ತು ತರುವ ಕೆಲಸ ನಡೆಯುತ್ತಿದೆ. ಜನರು ಸರ್ಕಾರದ ನಿಜ ಸ್ವರೂಪವನ್ನು ಅರಿತು ಎಚ್ಚೆತ್ತುಕೊಳ್ಳಬೇಕು ಎಂದರು. ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವ ಪ್ರಯತ್ನ ಖಂಡನೀಯ. ಅದ್ದರಿಂದ ವಿದ್ಯುತ್ ನಿರ್ವಹಣೆಯನ್ನು ಖಾಸಗಿ ಕಂಪನಿಗಳಿಗೆ ನೀಡಬಾರದು ಎಂದು ಒತ್ತಾಯಿಸಿದರು.

CHANGE OF NAME

I, SRISHTI GARG, d/o - Mr. Akshay Garg, aged about - 28 years, permanent r/of-B-1002, Keshav Kunj-3, Plot No. 19, Sec -14, Sanpada, Navi Mumbai, Pin- 400705, Maharashtra, India, presently r/at - No. 364, 6th Floor, Block-III, Embassy Meadows, 8th Cross Road, S.T. Bed, 4th Block, Koramangala, Bengaluru, Karnataka - 560095, have changed my name from **"SRISHTI AKSHAY GARG"** to **"SRISHTI GARG",** vide affidavit dated 10/6/2026 sworn to before K V Mani Advocate and Notary Bangalore.

IN THE COURT OF THE PRINCIPAL SENIOR CIVIL JUDGE BENGALURU RURAL AT BENGALURU

G & WC No. 5/2025

BETWEEN: 1.Mrs. Siddiqua Anjum Khanum R Aged about 27 years, D/o Abdul Raheem, D/o Rizwan Ulla Khan, Residing at No.8/1, 2nd Main, Thippasandra Guru Siddeshwara Theatre, Talaghattapur Post Bengaluru-560062 Ph: 9448871353 & others ... **Petitioner**

AND

Mr Abdul Raheem Aged about 31 years, S/o Mr. Shabbir Ahmed, Residing at No. 139, 34th Main 8th Cross, Yarab Nagar, Banashankri 2nd Stage Bengaluru-560070 Ph: 8792478738 ... **Respondent**

Notice To The Respondent

Mr Abdul Raheem Aged about 31 years, S/o Mr. Shabbir Ahmed, Residing at No. 139, 34th Main 8th Cross, Yarab Nagar, Banashankri 2nd Stage Bengaluru-560070.

ತನ್ನ ಸಂಪನ್ಮೂಲಗಳನ್ನು ಗರಿಷ್ಠಗೊಳಿಸಲು ಪ್ರಯತ್ನಿಸುತ್ತಿರುವ ಭಾರತವು ಸಿಂಧೂ ಜಲ ಒಪ್ಪಂದವನ್ನು ಉಲ್ಲಂಘಿಸಿದೆ ಎಂದು ಪಾಕಿಸ್ತಾನದ ಆರೋಪವಿದೆ. ಭಾರತ ಮತ್ತು ಪಾಕಿಸ್ತಾನ ಸೆಪ್ಟೆಂಬರ್ 19, 1960ರಂದು ಸಿಂಧೂ ಜಲ ಒಪ್ಪಂದಕ್ಕೆ ಸಹಿ ಹಾಕಿದ್ದವು. ಇದು ಸಿಂಧೂ ಜಲಾನಯನ ಪ್ರದೇಶದ ಆರು ನದಿಗಳನ್ನು ಎರಡು ದೇಶಗಳ ನಡುವೆ ವಿಭಜಿಸಿತು. ಅದರ ನಿಬಂಧನೆಗಳಲ್ಲಿ, ಪೂರ್ವದ ಮೂರು ನದಿಗಳಾದ ರಾವಿ, ಬಿಯಾಸ್ ಮತ್ತು ಸಟ್ಲೆಜ್‌ಗಳನ್ನು ಭಾರತಕ್ಕೆ ನೀಡಲಾಯಿತು. ಆದರೆ ಸಿಂಧೂ, ಝೀಲಂ ಮತ್ತು ಚೆನಾಬ್ ಸೇರಿದಂತೆ ಮೂರು ಪಶ್ಚಿಮ ನದಿಗಳನ್ನು ಪಾಕಿಸ್ತಾನಕ್ಕೆ ನೀಡಲಾಯಿತು. ಪಶ್ಚಿಮ ನದಿಗಳ ಮೇಲೆ ಭಾರತದ ಅಣೆಕಟ್ಟುಗಳು ಮತ್ತು ಜಲವಿದ್ಯುತ್ ಯೋಜನೆಗಳಿಂದ ಪಾಕಿಸ್ತಾನಕ್ಕೆ ನೀರಿನ ಅಭಾವ ಉಂಟಾಗುತ್ತದೆ ಎಂದು ಈ ಯೋಜನೆಗೆ ಪಾಕಿಸ್ತಾನ ಆಕ್ಷೇಪ ವ್ಯಕ್ತಪಡಿಸುತ್ತಲೇ ಬಂದಿದೆ. ಇದು ತನ್ನ ನೀರಿನ ಭದ್ರತೆಯ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಉಂಟುಮಾಡುತ್ತದೆ ಎಂಬುದು ನೆರೆ ರಾಷ್ಟ್ರದ ಆರೋಪ.

ದಶಕದ ಹಿಂದಿನ ಪ್ರಸ್ತಾವನೆಗೆ ಮರುಜೀವ

ಈ ಸುರಂಗ ಯೋಜನೆ, ಸುಮಾರು ಒಂದು ದಶಕದ ಹಿಂದೆ ಸುಸ್ಥಿರ ಅಭಿವೃದ್ಧಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕ ಪ್ರವೀಣ್ ಶರ್ಮಾ ಮಂಡಿಸಿದ್ದ ಪರಿಕಲ್ಪನೆ ಎಂಬುದು ವಿಶೇಷ. ಶರ್ಮಾ, ಪ್ರಧಾನ ಮಂತ್ರಿ ಕಾರ್ಯಾಲಯ(ಪಿಎಂಒ) ಮತ್ತು ಜಲಸಂಪನ್ಮೂಲ ಸಚಿವಾಲಯಕ್ಕೆ ನಿರಂತರವಾಗಿ ಪತ್ರಗಳನ್ನು ಬರೆಯುವ ಮೂಲಕ ಸಿಂಧೂ ಜಲ ಒಪ್ಪಂದಕ್ಕೆ ಸಂಬಂಧಿಸಿದ ಬದಲಾವಣೆಗಳನ್ನು ತರಲು ಮತ್ತು ಚೆನಾಬ್‌ನ ಉಪನದಿ ಚಂದ್ರಭಾಗಾ ನದಿಯಿಂದ ನೀರನ್ನು ತಿರುಗಿಸಲು ಒತ್ತಾಯಿಸಿದ್ದರು. ಶರ್ಮಾ ಪ್ರಕಾರ, ಅವರು 2016ರಲ್ಲಿ ವಿವರವಾದ ಲೇಖನವೊಂದರ ಮೂಲಕ ಈ ವಿಷಯವನ್ನು ಮೊದಲು ಮುಂಚೂಣಿಗೆ ತಂದಿದ್ದರು.

ಚೆನಾಬ್ -ಬಿಯಾಸ್ ಲಿಂಕ್ ಸುರಂಗ

ಚೆನಾಬ್-ಬಿಯಾಸ್ ಲಿಂಕ್ ಸುರಂಗ ಯೋಜನೆ, ಹಿಮಾಚಲ ಪ್ರದೇಶದ ಬುಡಕಟ್ಟು ಜಿಲ್ಲೆಯಾದ ಲಾಹೌಲ್-ಸ್ಪಿತಿಯಲ್ಲಿ ಸ್ಥಾಪನೆಯಾಗಲಿದೆ. ನ್ಯಾಷನಲ್ ಹೈಡ್ರೋಎಲೆಕ್ಟ್ರಿಕ್ ಪವರ್ ಕಾರ್ಪೊರೇಷನ್ (ಎನ್‌ಎಚ್‌ಪಿಸಿ) ಮೂಲಕ ಅನುಷ್ಠಾನಗೊಳ್ಳಲಿರುವ ಈ ಯೋಜನೆ, 8.7 ಕಿಮೀ ಉದ್ದದ ಸುರಂಗ ನಿರ್ಮಾಣವನ್ನು ಒಳಗೊಂಡಿದೆ. ಇದು ಚೆನಾಬ್ ಜಲಾನಯನ ಪ್ರದೇಶದಿಂದ ಹೆಚ್ಚುವರಿ ನೀರನ್ನು ಬಿಯಾಸ್ ನದಿಗೆ ತಿರುಗಿಸುತ್ತದೆ. ಈ ಯೋಜನೆ, ಅಂತರ-ಜಲಾನಯನ ನದಿ ಜೋಡಣೆಯಿಂದ ದೊಡ್ಡ ಯೋಜನೆಯ ಒಂದು ಭಾಗ. ಇದು ಸುರಂಗಗಳು ಮತ್ತು ಹೈಡ್ರಾಲಿಕ್ ರಚನೆಗಳ ಮೂಲಕ ಚಂದ್ರಭಾಗಾ ನದಿಯ ನೀರನ್ನು ಬಿಯಾಸ್ ಜಲಾನಯನ ಪ್ರದೇಶದ ಕಡೆಗೆ ತಿರುಗಿಸಲಿದೆ. ಮೊದಲ ಹಂತ, ಲಾಹೌಲ್ ಕಣಿವೆಯ ಕೋಕ್ಸರ್ ಗ್ರಾಮದ ಬಳಿ ಚಂದ್ರ ನದಿಗೆ 19 ಮೀಟರ್ ಎತ್ತರದ ಬ್ಯಾರೇಜ್ ನಿರ್ಮಾಣವನ್ನು ಒಳಗೊಂಡಿದೆ. ಅಲ್ಲಿಂದ ಮೇಲಿನ ಚೆನಾಬ್ ಜಲಾನಯನ ಪ್ರದೇಶದ ನೀರನ್ನು ಬಿಯಾಸ್ ವ್ಯವಸ್ಥೆಗೆ ಹರಿಸಲಾಗುತ್ತದೆ. ಮೇಲಿನ ಚೆನಾಬ್ ಅನ್ನು ರೂಪಿಸುವ ಚಂದ್ರ ಮತ್ತು ಭಾಗಾ ನದಿಗಳ ನೀರನ್ನು ಅಂತಿಮವಾಗಿ 113 ಕಿಮೀ ಉದ್ದದ ಕಾಲುವೆ ಜಾಲದ ಮೂಲಕ ವರ್ಗಾಯಿಸಲಾಗುತ್ತದೆ. ಚೆನಾಬ್ ನದಿಯ ಒಟ್ಟು ವಾರ್ಷಿಕ ಹರಿವು ಸುಮಾರು 35 ಮಿಲಿಯನ್ ಎಕರೆ–ಅಡಿಗಳಷ್ಟಿದ್ದರೂ, ಉದ್ದೇಶಿತ ತಿರುವು ಯೋಜನೆಗೆ ಕೇವಲ 1 ಮಿಲಿಯನ್ ಎಕರೆ–ಅಡಿಗಿಂತ ಕಡಿಮೆ ನೀರನ್ನು ಬಳಸಲಾಗುತ್ತದೆ.

ಕಿರುಸುದ್ದಿ

ಕೇರಳದಲ್ಲೂ ಮಹಿಳೆಯರಿಗೆ ಉಚಿತ ಬಸ್‌ಪ್ರಯಾಣ

• ತಿರುವನಂತಪುರಂ: ಪ್ರಮುಖ ಚುನಾವಣಾ ಭರವಸೆಯನ್ನು ಈಡೇರಿಸಿದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರ್ಕಾರವು ಸೋಮವಾರ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಯೋಜನೆಯನ್ನು ಜಾರಿಗೆ ತಂದಿದೆ. ಮುಖ್ಯಮಂತ್ರಿ ವಿ.ಡಿ. ಸತೀಶನ್ ಇದನ್ನು ಹೊಸ ಕೇರಳವನ್ನು ನಿರ್ಮಿಸುವ ನಿರ್ಣಾಯಕ ಹೆಜ್ಜೆ ಎಂದು ಕರೆದಿದ್ದಾರೆ. ಪ್ರಿಯದರ್ಶಿನಿ ಯೋಜನೆಯನ್ನು ಪ್ರಾರಂಭಿಸುವುದರೊಂದಿಗೆ, ಕೇರಳವು ಕಾಂಗ್ರೆಸ್ ಆಡಳಿತದ ಕರ್ನಾಟಕ ಮತ್ತು ತೆಲಂಗಾಣ ಸೇರಿದಂತೆ ಇತರ ದಕ್ಷಿಣದ ರಾಜ್ಯಗಳೊಂದಿಗೆ ಸೇರಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವನ್ನು ನೀಡಿದೆ. ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳು ಸಹ ಮಹಿಳೆಯರಿಗೆ ಇದೇ ರೀತಿಯ ಸವಲತ್ತುಗಳನ್ನು ನೀಡಿವೆ.

ಅಯೋಧ್ಯೆ ದೇಣಿಗೆ ಬಗ್ಗೆ ಎಸ್‌ಐಟಿಯಿಂದ ತನಿಖೆ

• ಲಖನೌ: ಅಯೋಧ್ಯೆ ರಾಮಮಂದಿರ ದೇಣಿಗೆ ಸಂಗ್ರಹದಲ್ಲಿ ಅಕ್ರಮಗಳು ನಡೆದಿವೆ ಎಂಬ ಆರೋಪಗಳ ಬಗ್ಗೆ ವಿಶೇಷ ತನಿಖಾ ತಂಡ(ಎಸ್‌ಐಟಿ) ತನಿಖೆ ಪ್ರಾರಂಭಿಸಿದೆ. ದೇವಾಲಯದ ಅರ್ಪಣೆಗಳಿಗೆ ಸಂಬಂಧಿಸಿದ ಕಳ್ಳತನ ಮತ್ತು ಹಣಕಾಸಿನ ದುರುಪಯೋಗದ ಆರೋಪಗಳು ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಸಮಾಜವಾದಿ ಪಕ್ಷದ ನಡುವೆ ರಾಜಕೀಯ ಸಂಘರ್ಷವನ್ನು ಪ್ರಚೋದಿಸಿದ ನಂತರ ಈ ಬೆಳವಣಿಗೆ ಸಂಭವಿಸಿದೆ. ಎಸ್‌ಐಟಿ ಅಯೋಧ್ಯೆಗೆ ತಲುಪಿ ತನ್ನ ತನಿಖೆಯನ್ನು ಪ್ರಾರಂಭಿಸಿದೆ. ಮುಂದಿನ 15 ದಿನಗಳಲ್ಲಿ ತಂಡವು ತನ್ನ ಅಂತಿಮ ವರದಿಯನ್ನು ಸಲ್ಲಿಸುವ ನಿರೀಕ್ಷೆಯಿದೆ.

ಮೋದಿ ಕರೆಯ ಪ್ರೇರಣೆ ಚಿನ್ನ ಖರೀದಿಸದ ಕುಟುಂಬ

• ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿಯವರ ಮನವಿಯಿಂದ ಪ್ರೇರಿತರಾಗಿ ಮಹಾರಾಷ್ಟ್ರದ ವಾರ್ಧಾದ ಕುಟುಂಬವೊಂದು ತಮ್ಮ ಮಗನ ಮದುವೆಗೆ ಚಿನ್ನದ ಆಭರಣಗಳನ್ನು ಖರೀದಿಸದಿರಲು ನಿರ್ಧರಿಸಿದೆ. ಚಿನ್ನದ ಕರಿಮಣಿ ಸರ ಬದಲಿಗೆ ತಮ್ಮ ಭಾವಿ ಸೊಸೆಗೆ ತಮ್ಮ ಮಡದಿಯ ಮಂಗಳಸೂತ್ರ ನೀಡಲು ನಿರ್ಧರಿಸಿದ್ದಾರೆ. ಮೋದಿಯವರನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ, ವಾರ್ಧಾದ ಪುಲ್ಗಾಂವ್‌ನಲ್ಲಿ ಪೂಜಾ ಸಾಮಗ್ರಿಗಳ ಅಂಗಡಿಯನ್ನು ನಡೆಸುತ್ತಿರುವ ಸತೀಶ್ ಗೌರಿಶಂಕರ್ ಚೌಧೆ, ರಾಷ್ಟ್ರದ ಹಿತದೃಷ್ಟಿಯಿಂದ ಜವಾಬ್ದಾರಿಯುತ ಖರ್ಚು ಮಾಡುವ ಪ್ರಧಾನ ಮಂತ್ರಿಯ ಕರೆಯಿಂದ ಪ್ರಭಾವಿತರಾಗಿ ವಧುವಿಗೆ ಹೊಸ ಕರಿಮಣಿ ಸರ ಖರೀದಿಸದಿರಲು ತಮ್ಮ ಕುಟುಂಬ ನಿರ್ಧರಿಸಿದೆ ಎಂದು ಹೇಳಿದ್ದಾರೆ.

ಹಾರ್ಮುಜ್ ದಾಟಿದ ಭಾರತ ಹಡಗು ದಿಶಾ

• ಹೊಸದಿಲ್ಲಿ: ಭಾರತದ ಎಲ್‌ಎನ್‌ಜಿ ಕಾರ್ಗೋ ನೌಕೆ ದಿಶಾ ಸ್ಟ್ರೈಟ್ ಆಫ್ ಹಾರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿದೆ. ಈ ಮೂಲಕ ಕಳೆದ ಮೂರು ತಿಂಗಳಿಗೂ ಹೆಚ್ಚು ಅವಧಿಯಲ್ಲಿ ಯುದ್ಧ ಪೀಡಿತ ವಲಯದಿಂದ ಯಶಸ್ವಿಯಾಗಿ ಹೊರಬಂದ ಭಾರತದ ಧ್ವಜ ಹೊಂದಿದ ಮೊದಲ ಎಲ್‌ಎನ್‌ಜಿ ನೌಕೆ ಎಂಬ ಹೆಗ್ಗಳಿಕೆಗೆ ಇದು ಪಾತ್ರವಾಗಿದೆ. ಶಿಪ್ಪಿಂಗ್ ಕಾರ್ಪೊರೇಷನ್ ಆಫ್ ಇಂಡಿಯಾ ನೇತೃತ್ವದ ಒಕ್ಕೂಟದ ಉಸ್ತುವಾರಿಯಲ್ಲಿರುವ ಈ ನೌಕೆ, 62,370 ಮೆಟ್ರಿಕ್ ಟನ್ ಎಲ್‌ಎನ್‌ಜಿ ಸರಕನ್ನು ಹೊತ್ತು ಸಾಗುತ್ತಿದೆ. ಬಂದರು,

ಹಡಗು ಮತ್ತು ಜಲಮಾರ್ಗ ಸಚಿವಾಲಯದ ನಿರ್ದೇಶಕ ಒಪೇಶ್ ಕುಮಾರ್ ಶರ್ಮಾ ಪ್ರಕಾರ, ಈ ನೌಕೆ ಜೂ.18ರಂದು ದಹೇಜ್ ಬಂದರು ತಲುಪುವ ನಿರೀಕ್ಷೆಯಿದೆ. ಭಾರತೀಯ ನಾವಿಕರ ಸುರಕ್ಷತೆ ಮತ್ತು ಕಲ್ಯಾಣವನ್ನು ಖಚಿತಪಡಿಸಿಕೊಳ್ಳಲಾಗುತ್ತಿದೆ. ಕಳೆದ 96 ಗಂಟೆಗಳಲ್ಲಿ ಸಚಿವಾಲಯದ ನಿಯಂತ್ರಣ ಕೊಠಡಿ 12,737 ಕರೆಗಳನ್ನು ಮತ್ತು 28,299ಕ್ಕೂ ಹೆಚ್ಚು ಇಮೇಲ್‌ಗಳನ್ನು ನಿರ್ವಹಿಸಿದೆ. ಈ ನಿರ್ದಿಷ್ಟ ಅವಧಿಯಲ್ಲಿ 406 ಕರೆಗಳು ಮತ್ತು 784 ಇಮೇಲ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಹಡಗು ಮತ್ತು ಜಲಮಾರ್ಗ ಸಚಿವಾಲಯ ತಿಳಿಸಿದೆ. ಇಲ್ಲಿಯವರೆಗೆ 3,587ಕ್ಕೂ ಹೆಚ್ಚು ಭಾರತೀಯ ನಾವಿಕರನ್ನು ಯಶಸ್ವಿಯಾಗಿ ಸ್ವದೇಶಕ್ಕೆ ಕರೆತರಲಾಗಿದ್ದು, ಇದರಲ್ಲಿ ಕಳೆದ 96 ಗಂಟೆಗಳಲ್ಲಿ ವಾಪಸಾದ 50 ನಾವಿಕರು ಸೇರಿದ್ದಾರೆ.

ದೇಶದಲ್ಲಿ ರಸಗೊಬ್ಬರ ಕೊರತೆಯಿಲ್ಲ: ಕೇಂದ್ರ

• ಹೊಸದಿಲ್ಲಿ: ಪ್ರಸಕ್ತ ಮುಂಗಾರು ಋತುವಿನಲ್ಲಿ ರಸಗೊಬ್ಬರಗಳ ಕೊರತೆಯಿಲ್ಲ ಎಂದು ಕೇಂದ್ರ ಸರ್ಕಾರ ಸೋಮವಾರ ಹೇಳಿದೆ. ರೈತರು ಈಗಾಗಲೇ ನಿರೀಕ್ಷಿತ ಅಗತ್ಯದ ಶೇ.37ಕ್ಕಿಂತ ಹೆಚ್ಚು ಮತ್ತು ದೇಶಾದ್ಯಂತ ಲಭ್ಯವಿರುವ ಗಣನೀಯ ದಾಸ್ತಾನುಗಳನ್ನು ಖರೀದಿಸಿದ್ದಾರೆ. ರಸಗೊಬ್ಬರ ಇಲಾಖೆಯ ಪ್ರಕಾರ, ರೈತರು ಈ ಋತುವಿನಲ್ಲಿ ಈವರೆಗೆ 102.78 ಲಕ್ಷ ಟನ್ ರಾಸಾಯನಿಕ ರಸಗೊಬ್ಬರಗಳನ್ನು ಖರೀದಿಸಿದ್ದಾರೆ. ಕೃಷಿ ಸಚಿವಾಲಯವು ಖಾರಿಫ್‌ಗೆ ಒಟ್ಟು 383.9 ಲಕ್ಷ ಟನ್ ರಸಗೊಬ್ಬರದ ಅಗತ್ಯವನ್ನು

ಮರುಮೌಲ್ಯಮಾಪನ ಮಾಡಿದೆ. ಸೋಮವಾರದ ಹೊತ್ತಿಗೆ, ಸ್ಟಾಕ್‌ಗಳು 196.65 ಲಕ್ಷ ಟನ್‌ಗಳಷ್ಟಿವೆ. ಇದು ಸಾಮಾನ್ಯ ಬಫರ್ ಮಟ್ಟಕ್ಕಿಂತ ಗಮನಾರ್ಹವಾಗಿ ಹೆಚ್ಚಾಗಿದೆ. ಬಾಕಿ ಇರುವ ಬಳಕೆ 281.12 ಲಕ್ಷ ಟನ್ ಆಗಿದ್ದು, ಅದರಲ್ಲಿ ಇಂದು ನಮ್ಮ ಬಳಿ 196 ಲಕ್ಷ ಟನ್ ಲಭ್ಯವಿದೆ ಎಂದು ರಸಗೊಬ್ಬರ ಇಲಾಖೆಯ ಜಂಟಿ ಕಾರ್ಯದರ್ಶಿ ಬಂದನಾ ಪ್ರೇಯಶಿ ಸುದ್ದಿಗಾರರಿಗೆ ತಿಳಿಸಿದರು. ದೃಢವಾದ ದೇಶೀಯ ಉತ್ಪಾದನೆ ಮತ್ತು ಸಮಯೋಚಿತ ಆಮದುಗಳಿಂದಾಗಿ ಸ್ಟಾಕ್ ಸ್ಥಾನವು ಆರಾಮದಾಯಕವಾಗಿದೆ ಎಂದು ಅವರು ಹೇಳಿದರು. ಪ್ರಸ್ತುತ ಅವಧಿಯಲ್ಲಿ, ಸರ್ಕಾರವು 50 ಲಕ್ಷ ಟನ್‌ಗಳಿಗಿಂತ ಹೆಚ್ಚು ಯೂರಿಯಾ ಮತ್ತು ಫಾಸ್ಫೇಟ್ ಮತ್ತು ಪೊಟ್ಯಾಷ್(ಪಿ ಮತ್ತು ಕೆ) ರಸಗೊಬ್ಬರಗಳನ್ನು ಪಡೆದುಕೊಂಡಿದೆ. ಪೂರೈಕೆಯನ್ನು ಮತ್ತಷ್ಟು ಬಲಪಡಿಸಲು ಸರ್ಕಾರವು ಹೆಚ್ಚುವರಿ 17 ಲಕ್ಷ ಟನ್ ಯೂರಿಯಾವನ್ನು ಆಮದು ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿದೆ.

ವ್ಯವಹಾರವಾಗಿ ಮಾರ್ಪಟ್ಟ ಆರ್‌ಟಿಐ ಹೋರಾಟ: ಸುಪ್ರೀಂ

• ಹೊಸದಿಲ್ಲಿ: ಮಾಹಿತಿ ಹಕ್ಕು (ಆರ್‌ಟಿಐ) ಹೋರಾಟ ಈಗ ಹೊಸ ವ್ಯವಹಾರವಾಗಿ ಮಾರ್ಪಟ್ಟಿದೆ ಎಂದು ಕಟುವಾಗಿ ಅಭಿಪ್ರಾಯಪಟ್ಟ ಸುಪ್ರೀಂ ಕೋರ್ಟ್, ರಸ್ತೆ ನಿರ್ಮಾಣ ಕಾಮಗಾರಿಗೆ ಅಡ್ಡಿಪಡಿಸಿದ ಆರೋಪ ಎದುರಿಸುತ್ತಿರುವ ಆರ್‌ಟಿಐ ಕಾರ್ಯಕರ್ತ ಹಾಗೂ ಮತ್ತೊಬ್ಬ ಆರೋಪಿಗೆ ನಿರೀಕ್ಷಣಾ ಜಾಮೀನು ನೀಡಲು ಸೋಮವಾರ ನಿರಾಕರಿಸಿದೆ. ನ್ಯಾಯಮೂರ್ತಿಗಳಾದ ಸಂದೀಪ್ ಮೆಹ್ತಾ ಹಾಗೂ ವಿಜಯ್ ಬಿಷ್ಣೋಯಿ ಅವರ ಪೀಠವು ಆರ್‌ಟಿಐ ಕಾರ್ಯಕರ್ತ ರಾಕೇಶ್ ಕುಮಾರ್ ಬೆಹ್ಲ್ ಮತ್ತು ಅವರ ಸಹಚರರ ಅರ್ಜಿಯನ್ನು ವಜಾಗೊಳಿಸಿತು. ರಸ್ತೆ ಕಾಮಗಾರಿಯ ಮೇಲ್ವಿಚಾರಣೆ ನಡೆಸಲು ಇವರಿಗೆ ಯಾವ ಅಧಿಕಾರವಿದೆ ಎಂದು ಪೀಠ ಪ್ರಶ್ನಿಸಿತು. ಆರ್‌ಟಿಐ ಕಾರ್ಯಕರ್ತರು ಎಂಬ ಹೆಸರಿನಲ್ಲಿ ಕೆಲವರು ಸಾರ್ವಜನಿಕ ಕಾಮಗಾರಿಗಳಿಗೆ ಅಡ್ಡಿಯಾಗುತ್ತಿದ್ದಾರೆ. ಕೇಂದ್ರ ಸರ್ಕಾರ ಹಣ ಮಂಜೂರು ಮಾಡಿದೆ. ರಸ್ತೆ ನಿರ್ಮಾಣದ ಜವಾಬ್ದಾರಿ ಸರ್ಕಾರದ್ದೇ. ನೀವು ಯಾರು? ಸ್ವಯಂ ಘೋಷಿತ ಆರ್‌ಟಿಐ ಕಾರ್ಯಕರ್ತರು ಎಂದು ನ್ಯಾಯಮೂರ್ತಿ ಮೆಹ್ತಾ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ನ್ಯಾಯಮೂರ್ತಿ ಬಿಷ್ಣೋಯಿ ಸಹ, ಎಲ್ಲ ರಸ್ತೆ ಕಾಮಗಾರಿಗಳ ಮೇಲ್ವಿಚಾರಣೆ ನಡೆಸಲು ನೀವು ಯಾವುದಾದರೂ ಉನ್ನತ ಅಧಿಕಾರಿಗಳೇ? ಎಂದು ಪ್ರಶ್ನಿಸಿದರು. ಪಂಜಾಬ್‌ನ ಗುರುದಾಸ್ಪುರ ಜಿಲ್ಲೆಯ ಬಟಾಲಾ ಪ್ರದೇಶದಲ್ಲಿ ನಡೆಯುತ್ತಿದ್ದ ರಸ್ತೆ ನಿರ್ಮಾಣ ಕಾಮಗಾರಿಗೆ ಅಡ್ಡಿಪಡಿಸಿ, ಕಾರ್ಮಿಕರು ಮತ್ತು ಮೇಲ್ವಿಚಾರಕರಿಗೆ ಬೆದರಿಕೆ ಹಾಕಿದ ಹಾಗೂ ಹಲ್ಲೆ ನಡೆಸಿದ ಆರೋಪದಡಿ ಬೆಹ್ಲ್ ಮತ್ತು ಮತ್ತೊಬ್ಬರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಆಧಾರ್ ಕೇವಲ ಗುರುತಿನ ಪುರಾವೆ; ಇಂದು ವಿಚಾರಣೆ

• ಹೊಸದಿಲ್ಲಿ: ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವು ನೀಡಿದ ಆಧಾರ್ ಕಾರ್ಡ್‌ಗಳನ್ನು ಪೌರತ್ವ, ವಾಸಸ್ಥಳ ಮತ್ತು ಜಾತಿ ವಿಳಾಸದ ಪುರಾವೆಯಾಗಿ ದುರುಪಯೋಗಪಡಿಸಿಕೊಳ್ಳಲಾಗಿದೆ. ಗುರುತಿನ ಪರಿಶೀಲನೆಗಾಗಿ ಅದರ ಬಳಕೆಯನ್ನು ಕಟ್ಟುನಿಟ್ಟಾಗಿ ನಿರ್ಬಂಧಿಸಲು ನಿರ್ದೇಶನಗಳನ್ನು

ಕೋರಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂಕೋರ್ಟ್ ಮಂಗಳವಾರ ನಡೆಸಲಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ವಿ.ಮೋಹನಾ ಅವರನ್ನೊಳಗೊಂಡ ಪೀಠವು ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸುವ ಸಾಧ್ಯತೆಯಿದೆ. ಪೌರತ್ವ, ವಾಸಸ್ಥಾನ, ವಿಳಾಸ ಮತ್ತು ಹುಟ್ಟಿದ ದಿನಾಂಕದ ಪುರಾವೆಯಾಗಿ ಅಲ್ಲ, ಗುರುತಿನ ಪುರಾವೆಯಾಗಿ ಆಧಾರವನ್ನು ಬಳಸುವುದನ್ನು ಖಚಿತಪಡಿಸಿಕೊಳ್ಳಲು ಅದು ಕೇಂದ್ರ, ರಾಜ್ಯಗಳು ಮತ್ತು ಚುನಾವಣಾ ಆಯೋಗಕ್ಕೆ ನಿರ್ದೇಶನಗಳನ್ನು ಕೋರಿದೆ.

ಅಟ್ಯಾಕ್ ಕ್ಷಿಪಣಿ ಪರೀಕ್ಷೆ ಯಶಸ್ವಿ

• ಹೊಸದಿಲ್ಲಿ: ಒಡಿಶಾ ಕರಾವಳಿಯ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ದ್ವೀಪದಿಂದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಸೋಮವಾರ ಲಾಂಗ್ ರೇಂಜ್ ಲ್ಯಾಂಡ್ ಅಟ್ಯಾಕ್ ಕ್ರೂಸ್ ಕ್ಷಿಪಣಿ(ಎಲ್‌ಆರ್‌ಎಲ್‌ಎಸಿಎಂ) ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಚಂಡೀಪುರದ ಇಂಟಿಗ್ರೇಟೆಡ್ ಟೆಸ್ಟ್ ರೇಂಜ್ ನಿಯೋಜಿಸಿರುವ ವಿವಿಧ ಟ್ರ್ಯಾಕಿಂಗ್ ಉಪಕರಣಗಳಿಂದ ಸೆರೆಹಿಡಿಯಲಾದ ಮಾಹಿತಿಯ ಪ್ರಕಾರ, ಎಲ್ಲಾ ಪರೀಕ್ಷಾ ಉದ್ದೇಶಗಳನ್ನು ಸಂಪೂರ್ಣವಾಗಿ ಪೂರೈಸಲಾಗಿದೆ. ಎಲ್‌ಆರ್‌ಎಲ್‌ಎಸಿಎಂ ಸ್ವದೇಶಿಯವಾಗಿ ಅಭಿವೃದ್ಧಿಪಡಿಸಿದ ಕ್ಷಿಪಣಿಯಾಗಿದ್ದು, ವಿವಿಧ ಡಿಆರ್‌ಡಿಒ ಪ್ರಯೋಗಾಲಯಗಳು ಮತ್ತು ಭಾರತೀಯ ಕೈಗಾರಿಕಾ ಪಾಲುದಾರರು ಅಭಿವೃದ್ಧಿಪಡಿಸಿದ ಎಲ್ಲಾ ಉಪ-ವ್ಯವಸ್ಥೆಗಳನ್ನು ಹೊಂದಿದೆ. ಕ್ಷಿಪಣಿಯು ಎಲ್ಲಾ ಮಿಷನ್ ಉದ್ದೇಶಗಳನ್ನು ಸಾಧಿಸಿತು, ನಿರ್ಣಾಯಕ ತಂತ್ರಜ್ಞಾನಗಳನ್ನು ಮೌಲ್ಯೀಕರಿಸಿದೆ. ಭಾರತದ ಬೆಳೆಯುತ್ತಿರುವ ದೀರ್ಘ-ಶ್ರೇಣಿಯ ನಿಖರ ದಾಳಿ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಈ ಉಡಾವಣೆಗೆ ಡಿಆರ್‌ಡಿಒದ ಹಿರಿಯ ಅಧಿಕಾರಿಗಳು, ನೌಕಾಪಡೆ ಮತ್ತು ವಾಯುಪಡೆಯ ಪ್ರತಿನಿಧಿಗಳು ಸಾಕ್ಷಿಯಾದರು.

ಭಾರತವನ್ನು ಜೋಡಿಸಿದ್ದು ಋಷಿಗಳು ಮತ್ತು ಸಂತರು: ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್

ಭಾರತದ ಏಕತೆಯ ಪರಿಕಲ್ಪನೆ ಪ್ರಾಚೀನ ನಾಗರಿಕತೆಯ ವಾಸ್ತವ

• ಹೊಸದಿಲ್ಲಿ: ಭಾರತದ ಏಕತೆಯ ಪರಿಕಲ್ಪನೆ ಹೊಸತಲ್ಲ, ಇದು ಪ್ರಾಚೀನ ಭಾರತೀಯ ನಾಗರಿಕತೆಯ ವಾಸ್ತವವಾಗಿದೆ. ಭಾರತವನ್ನು ನಿಜವಾಗಿಯೂ ಜೋಡಿಸಿದವರು ಋಷಿಗಳು ಮತ್ತು ಸಂತಶ್ರೇಷ್ಠರು ಎಂಬುದಾಗಿ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಸೋಮವಾರ ಹೇಳಿದರು. ಅವರು ದಿಲ್ಲಿಯ ಉಪರಾಷ್ಟ್ರಪತಿ ಭವನದಲ್ಲಿ "ಅಗತ್ತಿಯಾರ್-ದ ಯುನಿಫೈಯರ್" ತಮಿಳು ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು. ಈಗಾಗಲೇ ಈ ಕೃತಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಭಾಷಾಂತರಗೊಂಡು ಬಿಡುಗಡೆಯಾಗಿರುವುದನ್ನು ಇಲ್ಲಿ ಸ್ಮರಿಸಬಹುದು. ಭಾರತೀಯ ನಾಗರಿಕ ಏಕತೆ ಅಥವಾ ರಾಷ್ಟ್ರೀಯ ಸಮಗ್ರತೆಯ ಬಗ್ಗೆ ಮಾತನಾಡುವ ವೇಳೆ ರಾಜರನ್ನು, ರಾಜಕೀಯ ಸಂಸ್ಥೆಗಳನ್ನು ಪದೇ ಪದೇ ಉಲ್ಲೇಖಿಸಲಾಗುತ್ತದೆ. ಆದರೆ ಭಾರತೀಯ ಏಕತೆಯ ನಿಜವಾದ ಶಿಲ್ಪಿಗಳೆಂದರೆ ಅದು ಋಷಿಗಳು ಮತ್ತು ಸಂತಶ್ರೇಷ್ಠರಾಗಿದ್ದಾರೆ. ಅಂತಹ ಋಷಿಗಳಲ್ಲಿ ಅಗಸ್ತ್ಯರು ಭಾರತೀಯ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಏಕತೆಯ ಮಹಾನ್ ಸಂಕೇತಗಳಲ್ಲಿ ಒಬ್ಬರಾಗಿದ್ದಾರೆ ಎಂದು ಅವರು ನುಡಿದರು.

ಅಗಸ್ತ್ಯರು ಉತ್ತರ ಭಾರತ ಮತ್ತು ದಕ್ಷಿಣ ಭಾರತೀಯ ಪರಂಪರೆಗಳೆರಡರಲ್ಲೂ ಸಮಾನವಾಗಿ ಗೌರವಿಸಲ್ಪಟ್ಟ ಋಷಿ ಶ್ರೇಷ್ಠರು. ಅಗಸ್ತ್ಯರು ಹಿಮಾಲಯದಿಂದ ಹಿಂದು ಮಹಾಸಾಗರದವರೆಗೆ ವ್ಯಾಪಿಸಿರುವ ಭಾರತೀಯ ಏಕತೆಯ

AGATTHIYAR - THE UNIFIER

ಸಂಕೇತವಾಗಿದ್ದಾರೆ. ತಮಿಳ್ನಾಡಿನ ಪೊತಿಗಾಯಿ ಪರ್ವತಗಳು ಮತ್ತು ಕಾವೇರಿ ನದಿಯನ್ನು ಉಲ್ಲೇಖಿಸಿದ ಅವರು, ಇವು ಅಗಸ್ತ್ಯರ ಸ್ಮರಣೆಯನ್ನು ಶಾಶ್ವತವಾಗಿರಿಸುತ್ತವೆ. ತಮಿಳು ವ್ಯಾಕರಣದ ಅಭಿವೃದ್ಧಿ ಹಾಗೂ ತಮಿಳ್ ಸಂಗಮ್ ಪರಂಪರೆಗೆ ಅಗಸ್ತ್ಯರದು ಮಹತ್ವದ ಕೊಡುಗೆಯಾಗಿರುವುದನ್ನು ಎತ್ತಿ ತೋರಿದ ಅವರು , ಅಗಸ್ತ್ಯರು ಉತ್ತರ ಭಾರತ ಮತ್ತು ದಕ್ಷಿಣ ಭಾರತೀಯ ಸಂಸ್ಕೃತಿಗಳ ನಡುವಣ ಸೇತುವಾಗಿದ್ದಾರೆಎಂದು ಬಣ್ಣಿಸಿದರು. ಭಾರತೀಯ ಭಾಷೆಗಳಾವುವೂ ಸ್ಪರ್ಧಿಗಳಲ್ಲ, ಬದಲಿಗೆ ಸಹೋದರ ಭಾಷೆಗಳಾಗಿದ್ದು, ಅವು ಪರಸ್ಪರ ಗೌರವಿಸುವ ಮೂಲಕ ಒಂದು ಇನ್ನೊಂದನ್ನು ಸಮೃದ್ಧಗೊಳಿಸುವಂತೆ ಹಾಸುಹೊಕ್ಕಾಗಿವೆ. ಭಾರತೀಯ ಏಕತೆಯು ಇತ್ತೀಚಿನ ನಿರ್ಮಾಣವಲ್ಲ, ಬದಲಿಗೆ ಪ್ರಾಚೀನ ನಾಗರಿಕತೆಯ ವಾಸ್ತವವಾಗಿ ಸಾವಿರಾರು ವರ್ಷಗಳಿಂದ ಸಾಧು, ಸಂತ, ಋಷಿ ಮುನಿಗಳಿಂದ ಬೆಳೆದು ಬಂದಿರುವಂತಹದ್ದು, ಅಗಸ್ತ್ಯರ ಬದುಕೇ ಇದಕ್ಕೆ ಸಾಕ್ಷಿ ಎಂದರು. ಭಾಷೆಯ ಹೆಸರಿನಲ್ಲಿ ಅನಗತ್ಯ ಚರ್ಚೆಗಳನ್ನು ಹುಟ್ಟುಹಾಕಿ ಜನರನ್ನು ವಿಭಜಿಸುವ ಕೆಲವು ಶಕ್ತಿಗಳ ಹುನ್ನಾರದ ವಿರುದ್ಧ ಜನತೆಯನ್ನು ಎಚ್ಚರಿಸಿ, ಇಂತಹ ದುಷ್ಟಶಕ್ತಿಗಳಿಗೆ ಬಲಿಯಾಗಬೇಡಿ. ಯಾವುದೇ ಶಕ್ತಿಯೂ ಭಾರತದಲ್ಲಿ ವಿಭಜನೆ ಸೃಷ್ಟಿಸಲು ಸಾಧ್ಯವಿಲ್ಲ ಎಂದು ದೃಢವಾಗಿ ನುಡಿದ ಅವರು, ಯುವಜನತೆಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ನಾಗರಿಕತೆಯ ಪರಂಪರೆಯ ಬಗೆಗೆ ಸಕಾರಾತ್ಮಕ ಅರಿವು ಮೂಡಿಸುವಂತಹ ಚರ್ಚೆಗಳಿಗೆ ಕರೆ ನೀಡಿದರು.

ಸಮಾರಂಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನೀಲ್ ಆಂಬೇಕರ್, ಪ್ರಕಾಶನ ಸಂಸ್ಥೆ ಕಲೈಮಗಳ್ ಸಾಪ್ತಾಹಿಕದ ಸಂಪಾದಕ ಕೀಲಂಬೂರ್ ಶಂಕರ ಸುಬ್ರಹ್ಮಣ್ಯನ್, ಹಿರಿಯ ಪತ್ರಕರ್ತ ಶ್ರೀ ಮಾಲನ್, ಲೇಖಕರಾದ ಕರ್ನಾಟಕದ ಓ.ಶ್ಯಾಮ್ ಭಟ್ ಮತ್ತು ಡಾ.ಎಂ.ಎಸ್.ಸುಧಾ , ಪುಸ್ತಕವನ್ನು ತಮಿಳಿಗೆ ಭಾಷಾಂತರಿಸಿದ ಪ್ರೊ.ಕಲ್ಯಾಣಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ಸಂಪಾದಕೀಯ

ಶಾಶ್ವತ ಶಾಂತಿ ನೆಲೆಸಲಿ...

ಅಮೆರಿಕ ಮತ್ತು ಇರಾನ್‌ಗಳು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಬಂದಿರುವುದು ಹಾಗೂ ಹೊರ್ಮುಜ್ ಜಲಸಂಧಿಯನ್ನು ನಿರ್ಬಂಧಮುಕ್ತ ಮಾಡಲು ನಿರ್ಧರಿಸಿರುವುದು ಜಾಗತಿಕವಾಗಿ ನಿರಾಳತೆ ತರುವ ಬೆಳವಣಿಗೆ. ಉಭಯದೇಶಗಳ ಮಧ್ಯೆ ಹಲವಾರು ವಿಷಯಗಳಿಗೆ ಸಂಬಂಧಿಸಿ ಒಪ್ಪಂದಕ್ಕೆ ಬರಲಾಗಿದ್ದು, ಅಂತಿಮ ಶಾಂತಿ ಒಪ್ಪಂದಕ್ಕೆ ಜೂನ್ 19ರಂದು ಸಹಿ ಹಾಕಲಾಗುವುದು ಎಂದು ಹೇಳಲಾಗಿದೆ. ಇರಾನಿನ ಪರಮಾಣು ಕಾರ್ಯಕ್ರಮ ಹಾಗೂ ಇನ್ನಿತರ ಕೆಲವು ಗಂಭೀರ ವಿಷಯಗಳಿಗೆ ಸಂಬಂಧಿಸಿ 60 ದಿನಗಳೊಳಗೆ ಸಹಮತದ ಒಪ್ಪಂದ ರೂಪಿಸುವ ಕುರಿತಂತೆಯೂ ಪ್ರಸ್ತಾಪಿಸಲಾಗಿದೆ. ಮೊನ್ನೆ ಮೊನ್ನೆ ತನಕ ಶಾಂತಿ ಒಪ್ಪಂದದ ಕುರಿತಂತೆ ಹಲವಾರು ಬಗೆಯ ಗೊಂದಲದ ವರದಿಗಳು ಬರುತ್ತಿದ್ದ ಮಧ್ಯೆ ಇದೀಗ ಅಮೆರಿಕ ಮತ್ತು ಇರಾನ್‌ಗಳೆರಡೂ 'ಒಪ್ಪಂದ ರೂಪಿಸಲ್ಪಟ್ಟಿದೆ' ಎಂದು ಹೇಳಿಕೊಂಡಿರುವುದು ಸಮಾಧಾನ ತರುವ ವಿಚಾರ. ಜಗತ್ತು ತೈಲ ಬಿಕ್ಕಟ್ಟಿನಿಂದ ಪಾರಾಗುವ ಆಶಾವಾದವನ್ನು ಇದು ಹುಟ್ಟಿಸಿದೆ.

ಆದರೆ ಕಳೆದ ಮೂರು ತಿಂಗಳಲ್ಲಿ ಕೊಲ್ಲಿ ಸಮರವು ಸಾಗಿ ಬಂದ ರೀತಿಯನ್ನು ಮತ್ತು ಶಾಂತಿ ಒಪ್ಪಂದ ರೂಪುಗೊಳ್ಳುವಲ್ಲಿ ಕಂಡುಬಂದ ವಿಳಂಬಗಳನ್ನು ಕಂಡವರಿಗೆ ಈಗಿನ ಒಪ್ಪಂದ ಶಾಶ್ವತವಾಗಿ ಉಳಿಯಬಲ್ಲುದೆ ಎಂಬ ಅನುಮಾನ ಮೂಡಿದ್ದರೆ ಅದು ಸಹಜವೇ ಆಗಿದೆ.

ಕ್ಷಣಕ್ಕೊಂದು ಹೇಳಿಕೆ ನೀಡುವ ಟ್ರಂಪ್‌ರ ವರ್ತನೆ ಗಮನಿಸಿದವರಿಗೆ ಮತ್ತೊಮ್ಮೆ ಯುದ್ಧ ಸಾರುವ ಹೇಳಿಕೆಯು ಟ್ರಂಪ್‌ರಿಂದ ಯಾವಾಗ ಹೊರಬಿದ್ದೀತು ಎಂಬ ಆತಂಕ ಇದ್ದೇ ಇರುತ್ತದೆ. ಅದೂ ಸಾಲದೆಂಬಂತೆ ಲೆಬನಾನ್‌ಗೆ ಸಂಬಂಧಿಸಿ ಈ ಶಾಂತಿ ಒಪ್ಪಂದವನ್ನು ವಿಸ್ತರಿಸಲು ಒಪ್ಪದ ಇಸ್ರೇಲ್, ಕೊಲ್ಲಿಯಲ್ಲಿ ದಾಳಿ ಮುಂದುವರಿಸುವ ಸಾಧ್ಯತೆಗಳು ಇನ್ನೂ ಇವೆ. ತಾನು ಈ ಒಪ್ಪಂದದ ಪಾಲುದಾರನಲ್ಲ ಎಂಬುದಾಗಿ ಇಸ್ರೇಲ್ ಈಗಾಗಲೇ ಘೋಷಿಸಿದೆ.

ಇದೇವೇಳೆ, ಇರಾನಿನ ಪರಮಾಣು ಕಾರ್ಯಕ್ರಮ ಮತ್ತು ಅದರ ಬಳಿಯಿರುವ ಸಂಸ್ಕರಿತ ಯುರೇನಿಯಂ ಕುರಿತಾದ ಬಿಕ್ಕಟ್ಟು ಯಾವ ಕ್ಷಣದಲ್ಲಿಯೂ ಶಾಂತಿ ಒಪ್ಪಂದವನ್ನು ಮುರಿದು ಬೀಳಿಸುವ ಸಂಭವನೀಯತೆ ಹೊಂದಿದೆ. ಇರಾನಿನ ಸಂಸ್ಕರಿತ ಯುರೇನಿಯಂ ಕುರಿತಂತೆ 60 ದಿನಗಳೊಳಗೆ ಅಂತಿಮ ಒಪ್ಪಂದ ರೂಪಿಸುವ ನಿರ್ಧಾರಕ್ಕೆ ಬರಲಾಗಿದ್ದರೂ, ಈ ಸಂಕೀರ್ಣ ವಿಷಯವು ಯಾವ ಬಗೆಯ ತಿರುವು ಪಡೆಯಬಹುದೆಂದು ಹೇಳಲಾಗದು.

ಸದ್ಯಕ್ಕಂತೂ ಅಮೆರಿಕ ಮತ್ತು ಇರಾನ್‌ಗಳು ಯುದ್ಧ ನಿಲ್ಲಿಸುವ ಒಪ್ಪಂದಕ್ಕೆ ಬಂದಿರುವುದು ಗುಣಾತ್ಮಕ ಬೆಳವಣಿಗೆ. ಇದರಿಂದ ಜಗತ್ತು ಎದುರಿಸುತ್ತಿರುವ ಕೆಲವಾರು ಬಿಕ್ಕಟ್ಟುಗಳು ಪರಿಹಾರ ಕಾಣಬಹುದು. ಈ ಒಪ್ಪಂದವು ಶಾಶ್ವತ ಶಾಂತಿಗೂ ದಾರಿ ಕಲ್ಪಿಸುವುದೆಂದು ಆಶಿಸಬೇಕಾಗಿದೆ.

ಕಂಪನಿ ದೊಡ್ಡದಾಗಲಿಕ್ಕೆ, ದೊಡ್ಡ ಸದ್ದು ಮಾಡಲೇಬೇಕಿಲ್ಲ

ರಾಘವಾಂಕಣ
• ರಾಘವೇಂದ್ರ ಸುಬ್ರಹ್ಮಣ್ಯ
raghavaankana@gmail.com

ಸ್ಪೇಸ್ ಎಕ್ಸ್ ಷೇರು ಮಾರುಕಟ್ಟೆಗೆ ಬಂದಿದ್ದು ಕಳೆದ ವಾರದ ಮಹತ್ವದ ಸುದ್ದಿಗಳಲ್ಲೊಂದು. ಈ ಐಪಿಒದ ಮೂಲಕ ಸ್ಪೇಸ್-ಎಕ್ಸ್ ಎರಡು ಟ್ರಿಲಿಯನ್ ಡಾಲರ್ ಮೌಲ್ಯದ ಕಂಪನಿಯಾಗಿದ್ದು ಮಾತ್ರವಲ್ಲದೇ, ತನ್ನ ಸ್ಥಾಪಕ ಎಲಾನ್ ಮಸ್ಕ್‌ನನ್ನು ಕೂಡಾ ಜಗತ್ತಿನ ಮೊದಲ ಟ್ರಿಲಿಯನೇರ್ ಆಗಿಸಿತು. ಐಪಿಒ ಬರುವ ಮೊದಲೂ ಸ್ಪೇಸ್ ಎಕ್ಸ್ ಜಗತ್ತಿನ ದೊಡ್ಡಕಂಪನಿಗಳಲ್ಲೊಂದು ಆಗಿತ್ತು. ಬಾಹ್ಯಾಕಾಶ ಪರಿಶೋಧನೆಯಲ್ಲಂತೂ ಸ್ಪೇಸ್ ಎಕ್ಸ್ ಮುಂಚೂಣಿಯ ಕಂಪನಿಯೇ ಆಗಿದೆ.

ಪ್ರಬಲ ಕಂಪನಿಗಳ ಬಗ್ಗೆ ಹೇಳಿ ಎಂದಾಗ ಹೆಚ್ಚಿನ ಜನರಿಗೆ ಆಪಲ್, ಗೂಗಲ್, ಮೈಕ್ರೋಸಾಫ್ಟ್, ಅಮೆಜಾನ್, ಅಥವಾ ಸ್ಪೇಸ್-ಎಕ್ಸ್‌ನಂತಹ ಹೆಸರುಗಳು ಸಾಮಾನ್ಯವಾಗಿ ನೆನಪಿಗೆ ಬರುತ್ತವೆ. ಆದರೆ ಭೂಮಿಯ ಮೇಲಿನ ಎಷ್ಟೋ ವ್ಯವಹಾರಗಳು ತೆರೆಮರೆಯಲ್ಲಿ ಸದ್ದಿಲ್ಲದೆ ಕಾರ್ಯನಿರ್ವಹಿಸುತ್ತವೆ. ಬಿಲಿಯನ್‌ಗಟ್ಟಲೇ ವ್ಯವಹಾರ ನಡೆಸುವ ಈ ಕಂಪನಿಗಳ ಹೆಸರನ್ನಾಗಲೀ, ಅವುಗಳ ಬಗೆಗಿನ ಹೆಚ್ಚಿನ ಮಾಹಿತಿಯನ್ನಾಗಲೀ ಹೆಚ್ಚಿನ ಗ್ರಾಹಕರು ಎಂದಿಗೂ ಕೇಳಿರುವುದೇ ಇಲ್ಲ ಎಂದರೆ ನಂಬುತ್ತೀರಾ? ಈ ಕಂಪನಿಗಳು ತಮ್ಮ ವ್ಯವಹಾರವನ್ನು ಮಾತ್ರವಲ್ಲ, ತಾವು ವ್ಯವಹರಿಸುವ ಆ ಇಡೀ ಉದ್ಯಮವನ್ನೇ ಆಡಿಯಿಂದ ಮುಡಿಯವರೆಗೆ ಸಂಪೂರ್ಣವಾಗಿ ನಿಯಂತ್ರಿಸುತ್ತವೆ. ಆ ಇಡೀ ಕೈಗಾರಿಕೆಯಲ್ಲಿ ಒಂದೋ ಇವರದ್ದೇ ಏಕಸ್ವಾಮ್ಯವಿರುತ್ತದೆ, ಅಥವಾ ತೊಂಬತ್ತಕ್ಕೂ ಹೆಚ್ಚು ಶೇಕಡಾ ಹಿಡಿತವಿರುತ್ತದೆ. ಈ ಉದ್ಯಮದಲ್ಲಿ ಎರಡನೇ ಕಂಪನಿ ಇದ್ದರೂ ಇಲ್ಲದಿರುವಂತಹ ಪರಿಸ್ಥಿತಿ.

ಉದಾಹರಣೆಗೆ, ನಿಮ್ಮ ಪ್ಯಾಂಟುಗಳಲ್ಲಿರುವ ಜಿಪ್ಪರ್ ಇದೆಯಲ್ಲಾ, ಜಗತ್ತಿನ ಅಷ್ಟೂ ಪ್ಯಾಂಟುಗಳಲ್ಲಿರುವ ಜಿಪ್ಪರ್‌ಗಳಲ್ಲಿ ಅರವತ್ತೈದಕ್ಕೂ ಹೆಚ್ಚು ಶೇಕಡಾ ಜಿಪ್ಪುಗಳು ಒಂದೇ ಕಂಪನಿಯಿಂದ ಬರುತ್ತವೆ ಎಂದರೆ ನಂಬುತ್ತೀರಾ? ಪ್ಯಾಂಟಿನದ್ದು ಮಾತ್ರವಲ್ಲ, ನಿಮ್ಮ ಹೆಗಲ ಬ್ಯಾಗ್ ಇರಬಹುದು, ಲ್ಯಾಪ್-ಟಾಪ್ ಬ್ಯಾಗಿರಬಹುದು, ಮಗಳ ಸ್ಕೂಲ್ ಬ್ಯಾಗ್, ಹೆಂಡತಿಯ ಡಿಸೈನರ್ ಬ್ಯಾಗಿರಬಹುದು, ಎಲ್ಲದರ ಜಿಪ್‌ಗಳದ್ದೂ ಪೂರೈಕೆ YKK ಎಂಬ ಒಂದೇ ಜಪಾನೀ ಕಂಪನಿಯ ಹಿಡಿತದಲ್ಲಿವೆ. ಜಗತ್ತಿನ ಅತ್ಯಾಧುನಿಕ ಕಂಪ್ಯೂಟರ್ ಚಿಪ್ ತಯಾರಿಕಾ ಕಂಪನಿಗಳು ಒಂದೇ ಒಂದು ಪೂರೈಕೆದಾರ ಕಂಪನಿಯನ್ನು ಅವಲಂಬಿಸಿವೆ. ಜಗತ್ತಿನ ಎಲ್ಲಾ ತಂಪುಕನ್ನಡಕಗಳು ಎರಡು ಅಥವಾ ಮೂರು ಸಂಸ್ಥೆಗಳಿಂದಲೇ ಬರುತ್ತವೆ. ಈ ಕಂಪನಿಗಳು ಯಾವಾಗಲೂ ಗೂಗಲ್, ಸ್ಯಾಮ್ಸಂಗ್, ಸೋನಿಯಷ್ಟು ಮನೆಮಾತಾಗಿಲ್ಲ, ಆದರೂ ಅವು ನಾವು ಏನನ್ನು ಧರಿಸುತ್ತೇವೆ, ನಾವು ಏನನ್ನು ಕುಡಿಯುತ್ತೇವೆ, ನಮ್ಮ ಮನರಂಜನೆ ಹೇಗಿರಬೇಕು ಮತ್ತು ಆಧುನಿಕ ನಾಗರಿಕತೆಗೆ ಶಕ್ತಿ ತುಂಬುವ ತಂತ್ರಜ್ಞಾನದ ಹೇಗಿರಬೇಕು ಎಂಬುದರ ಮೇಲೂ ಪ್ರಭಾವ ಬೀರುತ್ತವೆ.

ಇಂತಹ ಕಂಪನಿಗಳ ಅತ್ಯಂತ ಗಮನಾರ್ಹ ಉದಾಹರಣೆಗಳಲ್ಲೊಂದು ಡಚ್ ತಂತ್ರಜ್ಞಾನ ಕಂಪನಿಯಾದ ASML. ಇದು ವಿಶ್ವದ ಅತ್ಯಂತ ಮುಂದುವರಿದ ಅರೆವಾಹಕ ಅಂದರೆ ಸೆಮಿಕಂಡಕ್ಟರುಗಳನ್ನು ತಯಾರಿಸಲು ಬಳಸುವ ತೀವ್ರ ನೇರಳಾತೀತ (EUV) ಲಿಥೋಗ್ರಫಿ ಯಂತ್ರಗಳನ್ನು ಉತ್ಪಾದಿಸುತ್ತದೆ. ಈ ಯಂತ್ರಗಳು ಅದೆಷ್ಟು ಸಂಕೀರ್ಣ ಹಾಗೂ ಅತ್ಯುತ್ತಮವಾಗಿವೆಯೆಂದರೆ, ಸದ್ಯಕ್ಕೆ ಬೇರೆ ಯಾವುದೇ ಕಂಪನಿಯು ಇವರ ಯಂತ್ರಗಳಿಗೆ ಪ್ರಸ್ತುತ ಪ್ರಮಾಣದಲ್ಲಿ ಹೋಲಿಸಬಹುದಾದ ಪರ್ಯಾಯವನ್ನು ನೀಡುವುದಿಲ್ಲ. ಇಡೀ ಜಗತ್ತು ಚಿಪ್ ಮತ್ತು ಸೆಮಿಕಂಡಕ್ಟರುಗಳಿಗೆ ತೈವಾನ್ ಮೇಲೆ ಅವಲಂಬಿತವಾಗಿದ್ದರೆ, ಇಡೀ ತೈವಾನ್ ಈ ಡಚ್ ಕಂಪನಿಯ ಮೇಲೆ ಅವಲಂಬಿತವಾಗಿದೆ. TSMC, Samsung ಮತ್ತು Intel ನಂತಹ ದೈತ್ಯರು ಅತ್ಯಾಧುನಿಕ ಚಿಪ್‌ಗಳನ್ನು ಉತ್ಪಾದಿಸಲು ASMLನ ಉಪಕರಣಗಳನ್ನೇ ಅವಲಂಬಿಸಿವೆ. ASML ಇಲ್ಲದಿದ್ದರೆ, ಇಂದಿನ ಸ್ಮಾರ್ಟ್‌ಫೋನ್, ಕೃತಕ ಬುದ್ಧಿಮತ್ತೆ ಮತ್ತು ಕಂಪ್ಯೂಟಿಂಗ್ ಕ್ರಾಂತಿಯ ಬಹುಪಾಲು ಸ್ಥಗಿತಗೊಳ್ಳುತ್ತದೆ. ನಾಳೆ ಚೀನಾ, ತೈವಾನ್ ಅನ್ನು ಆಕ್ರಮಿಸಿದರೆ, ಅದು ಎಲೆಕ್ಟ್ರಾನಿಕ್ಸ್ ಚಿಪ್ ಪೂರೈಕೆ ವಿಷಯದಲ್ಲಿ ಮತ್ತೊಂದು ಹಾರ್ಮುಜ್ ಜಲಸಂಧಿಯಂತದ್ದೇ ಕಥೆಯಾಗಲಿದೆ. ಇದೇ ಕಾರಣಕ್ಕೆ, ಮೊನ್ನೆ ಮೋದಿಯವರು ತಮ್ಮ ನೆದರ್ಲ್ಯಾಂಡ್ ಭೇಟಿಯಲ್ಲಿ ಇದೇ ASML ಕಂಪನಿಯನ್ನು ಭಾರತಕ್ಕೆ ಆಹ್ವಾನಿಸಿ, ಟಾಟಾ ಎಲೆಕ್ಟ್ರಾನಿಕ್ಸ್ ಜೊತೆ ಕೈಗೂಡಿಸಲು ಒಪ್ಪಂದ ಮಾಡಿಕೊಂಡಿದ್ದಾರೆ. ಈ ಒಪ್ಪಂದ ಭಾರತದಲ್ಲಿ ಸೆಮಿಕಂಡಕ್ಟರ್ ಉದ್ಯಮದ ಹೊಸ ಶಕೆಗೆ ನಾಂದಿ ಹಾಡಲಿದೆ.

ಇಂತಹುದೇ ಮತ್ತೊಂದು ಅನಾಮಿಕ ದೈತ್ಯ ಕಂಪನಿಯೆಂದರೆ YKK ಎಂಬ ಜಪಾನಿನ ಜಿಪ್ಪರ್ ತಯಾರಿಕಾ ಕಂಪನಿ. ಜಿಪ್ಪರ್‌ಗಳು ಸರಳವಾಗಿ ಕಂಡುಬಂದರೂ, YKK ಪ್ರಪಂಚದ ಜಿಪ್ಪರ್ ಪೂರೈಕೆಯ ಸರಿಸುಮಾರು 65% ಭಾಗವನ್ನು ತಯಾರಿಸುತ್ತದೆ. ಉತ್ಪಾದನೆಯ ಬಹುತೇಕ ಪ್ರತಿಯೊಂದು ಹಂತವನ್ನು ನಿಯಂತ್ರಿಸುವ ಮೂಲಕ, ಅಸಾಧಾರಣ ಗುಣಮಟ್ಟ ಮತ್ತು ಬೆಲೆಯ ಸ್ಥಿರತೆಯನ್ನು ಉಳಿಸಿಕೊಳ್ಳುವ ಮೂಲಕ 1934ರಿಂದ ಇಂದಿನವರೆಗೆ ತನ್ನ ಯಶಸ್ಸನ್ನು ಉಳಿಸಿಕೊಂಡು ಬಂದಿದೆ.

ಇನ್ನು ಕನ್ನಡಕದ ಉದ್ಯಮಕ್ಕೆ ಬಂದರೆ, ಲಕ್ಸೋಟಿಕಾ ಎಂಬ ಒಂದೇ ಒಂದು ಕಂಪನಿ ತನ್ನ ಉತ್ಪಾದನೆ, ಚಿಲ್ಲರೆ ವ್ಯಾಪಾರ ಮತ್ತು ಪರವಾನಗಿ ಮೂರನ್ನೂ ಕಟ್ಟಿಕೊಂಡು ಏಕಮೇವಾ ದ್ವಿತೀಯನಾಗಿ ತನ್ನ ಸಾಮ್ರಾಜ್ಯವನ್ನೇ ಸೃಷ್ಟಿಸಿಕೊಂಡಿದೆ. ತನ್ನದೇ ಆದ ರೇ-ಬ್ಯಾನ್ ಮತ್ತು ಓಕ್ಲಿಯಂತಹ ಪ್ರಸಿದ್ಧ ಬ್ರ್ಯಾಂಡ್‌ಗಳನ್ನು ಮಾತ್ರವಲ್ಲದೇ, ಅರ್ಮಾನಿ, ಫೆರಾರಿ, ಡೀಸೆಲ್, ಡಿಯೋರ್, ಪ್ರಾಡಾ ಮುಂತಾದ ಹಲವಾರು ಐಷಾರಾಮಿ ಫ್ಯಾಷನ್ ಲೇಬಲ್‌ಗಳಿಗೆ ಕನ್ನಡಕಗಳನ್ನು ಉತ್ಪಾದಿಸುತ್ತದೆ. ಇಷ್ಟೇ ಅಲ್ಲದೇ, ಪ್ರಪಂಚದಾದ್ಯಂತ ಪ್ರಮುಖ ಚಿಲ್ಲರೆ ಮಾರಾಟದ ಅಂಗಡಿಗಳನ್ನೂ ಮತ್ತು ಆಪ್ಟಿಕಲ್ ಅಂಗಡಿಗಳನ್ನು ನಿರ್ವಹಿಸುತ್ತದೆ. ಫ್ಯಾಷನ್ ಜಗತ್ತಿನ ತಂಪುಕನ್ನಡಕಗಳನ್ನು ಇನ್ಯಾರೂ ತಯಾರಿಸುವ ಅಥವಾ ಮಾರಾಟ ಮಾಡುವ ಮೂಲಕ ಸೆಡ್ಡುಹೊಡೆಯಲು ಸಾಧ್ಯವೇ ಇಲ್ಲ ಎಂಬ ಹೆಗ್ಗಳಿಕೆಯ ಈ ಲಕ್ಸೋಟಿಕಾ, 2018ರಲ್ಲಿ ಆಪ್ಟಿಕಲ್ ಕನ್ನಡಕದ ಉದ್ಯಮದ ದೈತ್ಯನಾಗಿದ್ದ ಎಸ್ಸಿಲೋರ್ ಕಂಪನಿಯನ್ನೂ ತನ್ನದಾಗಿಸಿಕೊಂಡು EssilorLuxottica ಎಂಬ ಹದಿನೈದು ಬಿಲಿಯನ್ ಡಾಲರ್ ಮೌಲ್ಯದ ದೈತ್ಯ ಕಂಪನಿಯಾಗಿದೆ. ಫ್ಯಾಷನ್ ಮತ್ತು ಆಪ್ಟಿಕಲ್ ಎರಡೂ ಉದ್ಯಮಗಳನ್ನು ನಿಯಂತ್ರಿಸುತ್ತಾ, ಜಾಗತಿಕ ಕನ್ನಡಕ ಮಾರುಕಟ್ಟೆಯ ಮೇಲೆ ಅಸಾಧಾರಣ ಪ್ರಭಾವವನ್ನು ತನ್ನದಾಗಿಸಿಕೊಂಡು, ಕನ್ನಡಕ ಉದ್ಯಮದ ವಿಶ್ವದ ಜೈಂಟ್ ಆಗಿ ನಿಂತಿದೆ.

ಪಾನೀಯ ವಲಯಕ್ಕೆ ಬಂದರೆ AB InBev ಮೂಲಕ ಮತ್ತೊಂದು ಗಮನಾರ್ಹ ಉದಾಹರಣೆಯನ್ನು ನೀವು ನೋಡಬಹುದು. ಹಲವಾರು ದೈತ್ಯ, ದೊಡ್ಡ ಮತ್ತು ಸಣ್ಣ ಕಂಪನಿಗಳ ವಿಲೀನಗಳ ಸರಣಿಯ ಮೂಲಕ ರೂಪುಗೊಂಡ ಈ ಕಂಪನಿ ಇವತ್ತು ಬಡ್‌ವೈಸರ್, ಕರೋನಾ, ಸ್ಟೆಲ್ಲಾ ಆರ್ಟೊಯಿಸ್ ಮತ್ತು ಅನೇಕ ಪ್ರಾದೇಶಿಕ ಬಿಯರ್ ಬ್ರ್ಯಾಂಡ್‌ಗಳನ್ನು ತನ್ನದಾಗಿಸಿಕೊಂಡು, ಜಗತ್ತಿನ ಅತೀದೊಡ್ಡ ಬ್ರೂವರ್ ಎಂದು ಗುರುತಿಸಿಕೊಂಡಿದೆ. 61 ಬಿಲಿಯನ್ ಡಾಲರ್ ವ್ಯಾಪಾರದ ಮೂಲಕ ಜಗತ್ತಿನ ಜಾಗತಿಕ ಬಿಯರ್ ಮಾರಾಟದಲ್ಲಿ 32% ಪಾಲು ಇದೊಂದೇ ಕಂಪನಿಯದ್ದು. 34 ಬಿಲಿಯನ್ ಡಾಲರ್ ವ್ಯಾಪಾರ ಮಾಡುವ ಎರಡನೇ ಅತೀದೊಡ್ಡ ಬ್ರೂವರ್ ಹೈನೆಕೆನ್‌ನ ಮಾರುಕಟ್ಟೆಯ ಪಾಲು 12% ಎಂದರೆ ಲೆಕ್ಕ ಹಾಕಿ!

ಇಪ್ಪತ್ತನೇ ಶತಮಾನದ ಬಹುಪಾಲು ಕಾಲ, ವಜ್ರಗಳಿಗೆ ಸಮಾನಾರ್ಥಕ ಪದವೆಂದರೆ ಡಿ ಬೀರ್ಸ್ ಎಂದಾಗಿತ್ತು. ಈ ಕಂಪನಿ ಕೇವಲ ವಜ್ರಗಳನ್ನು ಜಗಮಗಿಸುವ ಅಂಗಡಿಗಳಲ್ಲಿಟ್ಟು ಮಾರುವುದೊಂದೇ ಅಲ್ಲ, ಸಗಟು ಮಾರಾಟವಲ್ಲ, ವಜ್ರಗಳನ್ನು ಕಟ್ ಮಾಡಿ ಸುಂದರವಾಗಿಸುವುದಲ್ಲ, ಈ ಇಡೀ ವ್ಯಾಪಾರದ ಸರಪಳಿಯಲ್ಲಿ ಎಲ್ಲಕ್ಕಿಂತ ಮೊದಲ ಕೆಲಸವಾದ ಗಣಿಗಾರಿಕೆಯನ್ನೂ ತಾನೇ ನಡೆಸಿ, ವಿತರಣಾ ಮಾರ್ಗಗಳನ್ನೂ ತಾನೇ ನಿಯಂತ್ರಿಸಿ, ವಿಶ್ವದ ಬಹುಪಾಲು ವಜ್ರ ಪೂರೈಕೆಯನ್ನು ತಾನೇ ನಿರ್ವಹಿಸುತ್ತದೆ.

ಜಗತ್ತಿನ ಅತೀ ದೊಡ್ಡ ಲೈವ್-ಈವೆಂಟ್‌ಗಳ ಉದ್ಯಮ ಹೆಚ್ಚೂ ಕಮ್ಮಿ ಲೈವ್ ನೇಷನ್ ಎಂಟರ್‌ಟೈನ್‌ಮೆಂಟ್ ಎಂಬ ಒಂದೇ ಕಂಪನಿಯಿಂದ ನಡೆಸಲ್ಪಡುತ್ತದೆ. ಸಂಗೀತ ಕಚೇರಿ ನಡೆಸುವ ಸ್ಥಳಗಳು, ಕಾರ್ಯಕ್ರಮಗಳ ಪ್ರಚಾರ ಸೇವೆಗಳು ಮತ್ತು ಟಿಕೆಟ್ ದೈತ್ಯ ಟಿಕೆಟ್‌ಮಾಸ್ಟರ್.ಕಾಂ ಮಾಲೀಕತ್ವದ ಮೂಲಕ, ಕಂಪನಿಯು ವಿಶ್ವಾದ್ಯಂತ ಪ್ರಮುಖ ಸಂಗೀತ ಕಚೇರಿಗಳಿಗೆ ಟಿಕೆಟ್‌ಗಳನ್ನು ಆಯೋಜಿಸುವ ಮತ್ತು ಮಾರಾಟ ಮಾಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ.

ಜಾಗತಿಕ ಆರ್ಥಿಕತೆಯಲ್ಲಿ ಅತ್ಯಂತ ಶಕ್ತಿಶಾಲಿ ವ್ಯವಹಾರಗಳು ಯಾವಾಗಲೂ ದೊಡ್ಡದಾಗಿ ಕೂಗಲೇ ಬೇಕಿಲ್ಲ, ದೊಡ್ಡ ಭಾಷಣಗಳನ್ನೇ ಮಾಡಬೇಕಿಲ್ಲ ಎಂಬುದನ್ನು ಈ ಅನಾಮಿಕ ದೈತ್ಯ ಕಂಪನಿಗಳ ಕಥೆಗಳು ನಿರೂಪಿಸುತ್ತವೆ. ತೀರಾ ಸಾಮಾನ್ಯ ಜಿಪ್ಪರ್‌ನಿಂದ ಹಿಡಿದು ಸಂಕೀರ್ಣ ಸೆಮಿಕಂಡಕ್ಟರ್‌ಗಳವರೆಗೆ, ನೂರು ರೂಪಾಯಿಯ ಬಿಯರ್‌ನಿಂದ ಹಿಡಿದು ಲಕ್ಷ ರೂಪಾಯಿಯ ವಜ್ರದವರೆಗೆ ಈ ಸಂಸ್ಥೆಗಳು ಇಡೀ ಕೈಗಾರಿಕೆಗಳನ್ನೇ ತಮ್ಮ ಮೇಲೆ ಅವಲಂಬಿತವಾಗಿರುವಷ್ಟು ಬಲವಾದ ಸ್ಥಾನಗಳನ್ನು ನಿರ್ಮಿಸಿವೆ. ಹಾಗೂ ಈ ಕಥೆಗಳು ಆಧುನಿಕ ಜಗತ್ತನ್ನು ರೂಪಿಸುವ ಕಂಪನಿಗಳ ಪಟ್ಟಿಯಲ್ಲಿ, ಸದ್ದಿಲ್ಲದೇ ಕೆಲಸ ಮಾಡುವ ಕಂಪನಿಗಳ ಒಂದು ಸಣ್ಣ ಗುಂಪೇ ಇದೆ ಎಂಬುದನ್ನೂ ನಮಗೆ ನೆನಪಿಸುತ್ತವೆ.

◆

ಅತ್ಯಂತ ಬುದ್ಧಿಶಾಲಿಗಳ ಸಮಸ್ಯೆ

ಅತ್ಯಂತಮತಿಮೇಧಾವೀ ತ್ರಯಾಣಾಮೇಕಮಶ್ನುತೇ ।
ಅಲ್ಪಾಯುರ್ವಾ ದರಿದ್ರೋ ವಾ ಹ್ಯನಪತ್ಯೋ ನ ಸಂಶಯಃ ॥

-ಸಮಯೋಚಿತ ಪದ್ಯಮಾಲಿಕಾ

ಶ್ಲೋಕ ಸಾಗರ
ಡಾ. ಸೋಂದಾ ಭಾಸ್ಕರ ಭಟ್

ಅತ್ಯಂತ ಬುದ್ಧಿಶಾಲಿಯಾದವನು ಅಲ್ಪಾಯುಷ್ಯನೋ, ಬಡವನೋ ಅಥವಾ ಮಕ್ಕಳಿಲ್ಲದಿರುವುದನೋ - ಇವುಗಳಲ್ಲಿ ಯಾವುದಕ್ಕಾದರೂ ಒಂದಕ್ಕೆ ತುತ್ತಾಗುತ್ತಾನೆ. ಇದಕ್ಕೆ ಸಂಶಯವಿಲ್ಲ - ಎಂಬುದು ಶ್ಲೋಕಾರ್ಥ.

'ಪಾಪಿ ಚಿರಾಯು' ಎಂಬ ಲೋಕೋಕ್ತಿಯಿದೆ. ದಿನನಿತ್ಯವೂ ಪಾಪದ ಕೆಲಸವನ್ನೇ ಮಾಡುವವನು ಸುಖವಾಗಿರುತ್ತಾನೆ. ಚಟಗಳ ದಾಸನಾದವನು ಆರೋಗ್ಯದಿಂದಿರುತ್ತಾನೆ. ದುಷ್ಟನು ದೀರ್ಘಾಯುಷಿಯಾಗಿರುತ್ತಾನೆ. ನೆಮ್ಮದಿಯಿಂದಿರುತ್ತಾನೆ. ಗೌರವಾದರಗಳಿಗೂ ಪಾತ್ರನಾಗುತ್ತಾನೆ.

ಇದನ್ನು ನಿತ್ಯವೂ ಸಮಾಜದಲ್ಲಿ ಕಾಣುತ್ತೇವೆ. ನಮ್ಮೆಲ್ಲರ ಅನುಭವಕ್ಕೂ ಬಂದಿರುತ್ತದೆ. ಇದಕ್ಕೆ ತದ್ವಿರುದ್ಧವಾಗಿ ಮೇಧಾವಿ, ಸಜ್ಜನ, ಪರೋಪಕಾರಿ - ಇವರೆಲ್ಲ ಒಂದಲ್ಲ ಒಂದು ಬಗೆಯ ತೊಂದರೆಯನ್ನು ಅನುಭವಿಸುತ್ತಾರೆ, ನೆಮ್ಮದಿ ಎಂಬುದೇ ಇರುವುದಿಲ್ಲ ಎಂದು ಹೇಳಲಾಗುತ್ತದೆ. ಲೋಕಮುಖೀ ಕೆಲಸಗಳಲ್ಲಿ ತೊಡಗಿಕೊಂಡವರಿಗೆ ತೊಂದರೆ ತಪ್ಪಿದ್ದಲ್ಲ, ಸಮಾಜಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡವರಿಗೆ ಸಮಾಜದಲ್ಲಿರುವವರೆಲ್ಲ ಸಹಕಾರ ನೀಡುವುದಿಲ್ಲ, ಕೆಲವರು ಕೈಜೋಡಿಸುತ್ತಾರೆ. ಇನ್ನು ಕೆಲವರು ಸಂಶಯಿಸುತ್ತಾರೆ. ಮತ್ತೆ ಕೆಲವರು ಆಕ್ಷೇಪಿಸುತ್ತಾರೆ. ಕೆಲವು ಮಂದಿ ವಿರೋಧಿಸುತ್ತಾರೆ. ಅವರವರು ಪಡೆದ ಸಂಸ್ಕಾರಕ್ಕನುಗುಣವಾಗಿ ನಡೆ ಮತ್ತು ನುಡಿಯಿರುತ್ತದೆ. ಇದನ್ನು ಎಲ್ಲೆಡೆ ನೋಡುತ್ತೇವೆ. ಇಂತಹ ನಡತೆ ಇಂದು ಮಾತ್ರವಲ್ಲ, ಹಿಂದಿನಿಂದಲೂ ಕೃತಯುಗದಿಂದಲೂ ಇದೆ. ರಾಮಾದಿಗಳಿರುವಾಗ ಮಂಥರೆ ಮೊದಲಾದವರಿದ್ದರು. ಕೃಷ್ಣ, ಧರ್ಮರಾಜಾದಿಗಳಿರುವಾಗ ಶಕುನಿ ಮೊದಲಾದವರಿದ್ದರು. ಇಂದು ಇಂಥವರ ಸಂಖ್ಯೆ ಅಧಿಕವಾಗಿದೆ.

ಪ್ರಕೃತ ಶ್ಲೋಕದಲ್ಲಿ ಕವಿಯು ಹೇಳುವ ವಿಚಾರವೆಂದರೆ ಸತ್ಯವಂತರು, ಸಜ್ಜನರು, ಸಂತರು ಒಂದಲ್ಲ ಒಂದು ಬಗೆಯ ತೊಂದರೆಗೆ ಸಿಲುಕುತ್ತಾರೆ ಎನ್ನುತ್ತಾ ಪ್ರಧಾನವಾಗಿ ಮೂರು ವಿಷಯವನ್ನು ಪ್ರಸ್ತಾಪಿಸುತ್ತಾನೆ. ಅತ್ಯಂತ ಮೇಧಾವಿಗಳು ಎನಿಸಿಕೊಂಡವರು ಕವಿಯು ಹೇಳಿದ ಮೂರು ಸಂಕಷ್ಟಗಳಲ್ಲಿ ಒಂದರಲ್ಲಾದರೂ ಸಿಲುಕಿಕೊಳ್ಳುತ್ತಾರಂತೆ. ಆ ಮೂರು ಸಂಕಷ್ಟಗಳೆಂದರೆ ಅಲ್ಪಾಯುಷ್ಯ, ಬಡತನ ಅಥವಾ ಮಕ್ಕಳಿಲ್ಲದಿರುವಿಕೆ. ಈ ತನ್ನ ಹೇಳಿಕೆಯಲ್ಲಿ ಸಂಶಯವಿಲ್ಲ ಎಂಬುದಾಗಿ ಸಮರ್ಥಿಸುತ್ತಾನೆ.

ಈ ಮಾತು ಕವಿಯ ಅನುಭವದ ಹಿನ್ನೆಲೆಯಲ್ಲಿ ಸತ್ಯವಾಗಿರಬಹುದು. ಬಹುತೇಕರು ಹೀಗಿರಬಹುದು. ಆದರೆ ಇದನ್ನು ಸಾರ್ವತ್ರೀಕರಿಸಬಹುದೇ? ಎಂಬ ಜಿಜ್ಞಾಸೆಯಿದೆ. 'ಸರ್ವೇ ನಿಯಮಾಃ ಸಾಪವಾದಾಃ' ಎಂಬ ನ್ಯಾಯವಿದೆ. ಎಲ್ಲ ನಿಯಮಕ್ಕೂ ಒಂದೆರಡಾದರೂ ಅಪವಾದವಿದ್ದೇ ಇರುತ್ತದೆ. ಹೀಗಿದ್ದರೂ ಕವಿಯ ಹೇಳಿಕೆಯಲ್ಲಿ ಸ್ವಲ್ಪ ಮಟ್ಟಿನ ಸತ್ಯಾಂಶವಿರುವುದು ಲೋಕದಲ್ಲಿ ಸಂಚರಿಸುವವರಿಗೆ ಗೊತ್ತು.

ಲೋಕವ್ಯವಹಾರ ನಡೆಯುವುದು ಬುದ್ಧಿವಂತಿಕೆಯ ಹಿನ್ನೆಲೆಯಿಂದ. ಬುದ್ಧಿವಂತರ ಯೋಗದಾನದಿಂದ. ಸ್ಪರ್ಧಾತ್ಮಕ ಯುಗದಲ್ಲಿ ಬುದ್ಧಿವಂತರಿರಬೇಕು. ಅವರು ಕೌಟುಂಬಿಕವಾಗಿ ನೆಮ್ಮದಿಯನ್ನು ಹೊಂದಿರಬೇಕು. ಸನ್ಮಾನದಿಂದ ಬದುಕಿರಬೇಕು. ಈ ಕಾರಣಕ್ಕಾಗಿ ಕವಿಯ ಅನುಭವದ ಮಾತು ಮುಂದಿನ ದಿನಗಳಲ್ಲಿ ಸುಳ್ಳಾಗಲಿ ಎಂದು ಆಶಿಸೋಣ.

ಬಂಗಾಳದ ಹಿಂದೂಗಳಿಗೆ ಗೋವು ಭಾರವಾಗಿದೆಯಾ?

ಧರಣಿ ಮಂಡಲ
• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com

ಪ್ರತಿವರ್ಷ ದೇಶಾದ್ಯಂತ ಬಕ್ರೀದ್‌ನಲ್ಲಿನ ಕುರ್ಬಾನಿಗಾಗಿ ಲಕ್ಷಾಂತರ ಗೋವುಗಳು ಹತ್ಯೆಯಾಗುತ್ತವೆ. ವಿಶೇಷವಾಗಿ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಈ ಹತ್ಯೆಯ ಪ್ರಮಾಣ ಹೆಚ್ಚಿರುತ್ತದೆ. ಆದರೆ ಈ ವರ್ಷ ಪಶ್ಚಿಮ ಬಂಗಾಳದಲ್ಲಿ ಪರಿಸ್ಥಿತಿ ಬೇರೆಯೇ ಇತ್ತು. ಹೊಸ ಸರ್ಕಾರ ಬಕ್ರೀದ್‌ನಲ್ಲಾಗುವ ಗೋಹತ್ಯೆಯನ್ನು ತಡೆಯಲು ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಿದ್ದಷ್ಟೇ ಅಲ್ಲದೆ ಅಕ್ರಮ ಗೋಹತ್ಯೆ ಹಾಗೂ ಮಾರಾಟದಲ್ಲಿ ಸಿಕ್ಕಿಬಿದ್ದವರನ್ನು ಜೈಲಿಗೆ ಕಳುಹಿಸುವುದಾಗಿ ಎಚ್ಚರಿಸಿತ್ತು. ಹೀಗಾಗಿ ಈ ವರ್ಷ ಪಶ್ಚಿಮ ಬಂಗಾಳದಲ್ಲಿ ಬಕ್ರೀದ್‌ನಂದು ಗೋವುಗಳ ಹತ್ಯೆ ಅಷ್ಟಾಗಿ ಕಂಡುಬಂದಿಲ್ಲ.

ಪಶ್ಚಿಮ ಬಂಗಾಳದಲ್ಲಿ ಬೀಫ್ ಎಂಬುದು ಬಹು ಮುಖ್ಯ ಆಹಾರವಾಗಿದೆ. ಇಲ್ಲಿ ಕೇರಳ ಹೊರತುಪಡಿಸಿ ದೇಶದಲ್ಲೇ ಬಹುದೊಡ್ಡ ಗೋಮಾಂಸದ ವ್ಯವಹಾರ ನಡೆಯುತ್ತದೆ. ಪ್ರತಿವರ್ಷ ಪಶ್ಚಿಮ ಬಂಗಾಳ ಒಂದರಲ್ಲೇ ಬಕ್ರೀದ್‌ನಂದು 1500 ರಿಂದ 2000 ಕೋಟಿವರೆಗೂ ಅಕ್ರಮ ಗೋವುಗಳ ಹತ್ಯೆ, ಸಾಗಾಟ ಮತ್ತು ಮಾಂಸದ ವ್ಯವಹಾರ ನಡೆಯುತ್ತದೆ. ಇಲ್ಲಿಯ ನಾದಿಯಾ, ಮುರ್ಷಿದಾಬಾದ್ ಮತ್ತು ಬಿರ್‌ಭೂಮ್ ಜಿಲ್ಲೆಗಳಲ್ಲಿ ಬಕ್ರೀದ್ ಸಮಯದಲ್ಲಿ ಗೋವಿನ ವಹಿವಾಟು ಹೆಚ್ಚಾಗಿ ನಡೆಯುತ್ತದೆ. ಹತ್ತರಿಂದ ಇಪ್ಪತ್ತೈದು ಸಾವಿರಕ್ಕೆ ಬೇರೆ ಸಮಯದಲ್ಲಿ ಮಾರಾಟವಾಗುವ ಒಂದೊಂದು ಗೋವುಗಳು ಬಕ್ರೀದ್‌ನಂದು ಒಂದು ಲಕ್ಷದಿಂದ ಐದು ಲಕ್ಷದವರೆಗೆ ಮಾರಾಟವಾಗುತ್ತವೆ. ಈ ಸಮಯದಲ್ಲಿ ಬೇಡಿಕೆ ಹೆಚ್ಚಿರುವುದರಿಂದ ಹೆಚ್ಚಿನ ರೈತರು ಈ ಸಮಯಕ್ಕಾಗಿಯೇ ಕಾದು ಮುಸ್ಲಿಮರಿಗೆ ಕುರ್ಬಾನಿಗೆಂದೇ ಗೋವು ಮಾರಾಟ ಮಾಡುತ್ತಾರೆ. ಇಂತಹ ರೈತರು ತಮ್ಮ ಮನೆಯಲ್ಲಿರುವ ವಯಸ್ಸಾದವರನ್ನು ಸಹ ಒಂದು ದಿನ ಹೀಗೆ ಮಾರುವುದಿಲ್ಲ ಎಂಬ ಗ್ಯಾರಂಟಿ ಏನೂ ಇಲ್ಲ.

ಈ ಬಾರಿ ಬಿಜೆಪಿ ಸರ್ಕಾರದ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಸುವೇಂದು ಅಧಿಕಾರಿ ಒಂದಷ್ಟು ತುರ್ತಾಗಿ ಆಗಬೇಕಾದ ಕಾರ್ಯಸೂಚಿಗಳನ್ನು ಸಿದ್ಧಪಡಿಸಿಟ್ಟುಕೊಂಡು ಅದನ್ನೆಲ್ಲಾ ಜಾರಿಗೆ ತರುತ್ತಿದ್ದಾರೆ. ಅದರಲ್ಲಿ ಗೋವುಗಳ ರಕ್ಷಣೆಯೂ ಒಂದು. ಹೀಗಾಗಿ ಈ ವರ್ಷ ಪರಿಸ್ಥಿತಿ ಹಿಂದಿನಂತಿಲ್ಲ ಎಂಬುದು ಬಹುತೇಕ ಇಂತಹ ವ್ಯವಹಾರದಲ್ಲಿರುವವರಿಗೆ ಮನವರಿಕೆಯಾಗಿತ್ತು. ಹೀಗಾಗಿ ಇವರುಗಳು ಬಕ್ರೀದ್‌ಗಿಂತ ಮುಂಚಿತವಾಗಿ ಹೊಸದೊಂದು ನಾಟಕವನ್ನಾರಂಭಿಸಿದ್ದರು. ಅದು ಇಲ್ಲಿಂದ ದೇಶವ್ಯಾಪಿ ಹರಡುವಂತಾಯಿತು. ಅದೇನೆಂದರೆ ಈ ಬಾರಿ ಮುಸ್ಲಿಮರು ಕುರ್ಬಾನಿಯಲ್ಲಿ ಗೋವನ್ನು ಬಲಿ ಕೊಡುವುದಿಲ್ಲ, ಈ ಪ್ರಾಣಿ ನಿಮಗೆ ಪೂಜ್ಯ ತಾಯಿಯ ಸಮಾನವಾಗಿದ್ದರೆ, ಅದನ್ನು ನಿಮ್ಮ ಮನೆಗಳಲ್ಲಿ ಇಟ್ಟು ಸೇವೆ ಮಾಡಿ, ಪೂಜೆ ಮಾಡಿ, ವ್ಯಾಪಾರಕ್ಕಾಗಿ ಮಾರುಕಟ್ಟೆಗಳಿಗೆ ತರಬೇಡಿ. ಏಕೆಂದರೆ ಇಲ್ಲಿ ಅದನ್ನು ಕೇವಲ ಕುರ್ಬಾನಿಯ ಉದ್ದೇಶದಿಂದಲೇ ಖರೀದಿಸಲಾಗುತ್ತದೆ. ಆದ್ದರಿಂದ ಈ ಪ್ರಾಣಿಗಳನ್ನು ಗೌರವಪೂರ್ವಕವಾಗಿ ಹಿಂದಕ್ಕೆ ತೆಗೆದುಕೊಂಡು ಹೋಗಿ ಎಂಬುದಾಗಿ ಇಲ್ಲಿಯ ಮುಸ್ಲಿಮರು ಹೇಳುತ್ತಿದ್ದುದು ದೊಡ್ಡ ಸುದ್ದಿಯಾಗಿತ್ತು. ಇನ್ನು ಇಲ್ಲಿಯ ಮುಸ್ಲಿಮ್ ಮುಖಂಡರು ಪರಿಸ್ಥಿತಿಯನ್ನು ಅರಿತು ಬಕ್ರೀದ್‌ನಂದು ಗೋವುಗಳ ಹತ್ಯೆ ಮಾಡಬೇಡಿ. ಕುರ್ಬಾನಿಗೆ ಕುರಿ ಇಲ್ಲವೇ ಆಡು ಮೇಕೆಗಳನ್ನು ಬಲಿ ಕೊಡಿ. ಗೋಮಾಂಸವನ್ನು ತ್ಯಜಿಸಿ ಎಂಬುದಾಗಿ ಹೇಳುತ್ತಿದ್ದುದು ವರದಿಯಾಗಿತ್ತು.

ಒಂದರ್ಥದಲ್ಲಿ ಸ್ವತಃ ಹೊಸದಾಗಿ ಚುನಾಯಿತ ಬಿಜೆಪಿ ಶಾಸಕಿ ರೇಖಾ ಪಾತ್ರ, ಹಿಂಗಲ್‌ಗಂಜ್‌ನಲ್ಲಿ ಜಾನುವಾರು ತುಂಬಿದ ವಾಹನವನ್ನು ತಡೆದು ನಿಲ್ಲಿಸಿದ್ದು ಗೋರಕ್ಷಕರನ್ನು ಉತ್ತೇಜಿಸಿತ್ತು. ಹೀಗಾಗಿ ಮುಂದಾಗಬಹುದಾದ ಪರಿಸ್ಥಿತಿಯನ್ನು ಮನಗಂಡು ಯಾವೊಬ್ಬ ಮುಸಲ್ಮಾನನು ಗೋವುಗಳನ್ನು ಖರೀದಿಸಲು ಮುಂದೆ ಬರದಂತಾಗಿತ್ತು. ಏಕೆಂದರೆ ಒಂದೊಮ್ಮೆ ಖರೀದಿಸಿ ಸಾಗಾಟ ಮಾಡುವಾಗ ಪೊಲೀಸರು ಕೇಸ್ ದಾಖಲಿಸಬಹುದು ಎಂಬ ಭಯ ಒಂದು ಕಡೆಯಾದರೆ, ಗೋರಕ್ಷಕರು ನಮ್ಮ ಮೇಲೆ ಹಲ್ಲೆ ಮಾಡಬಹುದೆಂಬ ಭಯ ಮತ್ತೊಂದೆಡೆ ಇವರನ್ನು ಕಾಡಿತ್ತು.

ಇಲ್ಲಿಯ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಮತ್ತು ಇತರ ವಿರೋಧ ಪಕ್ಷಗಳು ಬಿಜೆಪಿ ಸರ್ಕಾರವು ಬಕ್ರೀದ್‌ಗೆ ಮುಂಚಿತವಾಗಿ ಬೇಕಂತಲೆ ಗೋಹತ್ಯಾ ನಿಷೇಧದ ನಿಯಮಗಳನ್ನು ಜಾರಿಗೊಳಿಸಿ ಭಯದ ವಾತಾವರಣವನ್ನು ಸೃಷ್ಟಿಸುತ್ತಿದೆ ಎಂಬುದಾಗಿ ಹೇಳಿದ್ದವು. ಸಿಪಿಎಂನ ರಾಜ್ಯ ಕಾರ್ಯದರ್ಶಿ ಎಂ.ಡಿ. ಸಲೀಂ, ಈ ಕಾಯ್ದೆಯು ಸಣ್ಣ ದನದ ಮಾರಾಟಗಾರರು, ದನ ಸಾಕುವವರು ಮತ್ತು ಅಲ್ಪಸಂಖ್ಯಾತರಲ್ಲಿ ಭಯದ ವಾತಾವರಣವನ್ನು ಹುಟ್ಟುಹಾಕುವುದರೊಂದಿಗೆ ಸಾಮಾಜಿಕ ಸಾಮರಸ್ಯವನ್ನು ಹಾಳುಮಾಡುತ್ತಿದೆ ಎಂಬುದಾಗಿ ತಿಳಿಸಿದ್ದರು. ಮತ್ತೊಬ್ಬ ಕಾಂಗ್ರೆಸ್‌ನ ನಾಯಕ ಅಧೀರ್ ರಂಜನ್ ಚೌಧರಿ ಮುಖ್ಯಮಂತ್ರಿ ಸುವೇಂದು ಅಧಿಕಾರಿಗೆ ಪತ್ರವೊಂದನ್ನು ಬರೆದು, ಮುರ್ಷಿದಾಬಾದ್‌ನಂತಹ ಅಲ್ಪಸಂಖ್ಯಾತ ಪ್ರಾಬಲ್ಯದ ಜಿಲ್ಲೆಗಳಲ್ಲಿ ಗೋಹತ್ಯೆಗೆ ಸಂಬಂಧಿಸಿದಂತೆ ಸರ್ಕಾರ ಹೊರಡಿಸಿರುವ ಅಧಿಸೂಚನೆಯು ಗೊಂದಲ, ಅಸಮಾಧಾನ ಮತ್ತು ಆತಂಕವನ್ನು ಸೃಷ್ಟಿಸಿದೆ ಎಂದಿದ್ದರು. ಇನ್ನು ನಮ್ಮ ರಾಜ್ಯ ಕಾಂಗ್ರೆಸ್ ಸರ್ಕಾರ ಈ ಕ್ರಮವು ಅಲ್ಪಸಂಖ್ಯಾತರ ಧಾರ್ಮಿಕ ಆಚರಣೆಗಳಲ್ಲಿ ಸರ್ಕಾರದ ಹಸ್ತಕ್ಷೇಪ ಎಂಬುದಾಗಿ ಕೂಗಾಡಿತ್ತು. ಎಸ್‌ಯುಸಿಐ(ಕಮ್ಯುನಿಸ್ಟ್)ನ ಪ್ರಧಾನ ಕಾರ್ಯದರ್ಶಿ ಪ್ರಭಾಸ್ ಘೋಷ್ ಸರ್ಕಾರ ಹೊರಡಿಸಿರುವ ಈ ಅಧಿಸೂಚನೆಯು ಕೋಮು ಸೌಹಾರ್ದತೆಗೆ ಭಂಗವನ್ನುಂಟು ಮಾಡುತ್ತದೆ ಎಂಬುದಾಗಿ ಮೈಪರಚಿಕೊಂಡಿದ್ದರು. ಒಂದು ಹೆಜ್ಜೆ ಮುಂದೆ ಹೋದ ಇಂಡಿಯನ್ ಸೆಕ್ಯುಲರ್ ಫ್ರಂಟ್‌ನ ಶಾಸಕ ನೌಶಾದ್ ಸಿದ್ದಿಕ್, ಬಿಜೆಪಿ ಸರ್ಕಾರವು ಮುಸ್ಲಿಮರನ್ನು ಗುರಿಯಾಗಿಸಲು ಬಯಸುತ್ತದೆ. ಆದರೆ ದನ ಸಾಕಣೆಯಲ್ಲಿ ತೊಡಗಿರುವ ಶೇಕಡಾ 80ರಷ್ಟು ಜನರು ಮುಸ್ಲಿಮೇತರರು ಎಂಬುದಾಗಿ ತಿಳಿಸಿದ್ದ.

ಒಂದು ಕಡೆ ಇಷ್ಟೆಲ್ಲಾ ಹೋರಾಟ ಹಾರಾಟಗಳು ನಡೆಯುತ್ತಿದ್ದರೆ, ಮತ್ತೊಂದೆಡೆ ಜಮೀಯತ್ ಉಲಮಾ ಎ ಹಿಂದ್ ಸಂಘಟನೆಯ ಅಧ್ಯಕ್ಷರಾದ ಅರ್ಷದ್ ಮದನಿ ಹೇಳಿದ ಹೇಳಿಕೆಯೊಂದು ಭಾರಿ ವೈರಲ್ ಆಗಿತ್ತು. ಹಸುವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು, ಅದನ್ನು ಸಂಪೂರ್ಣವಾಗಿ ಸಂರಕ್ಷಿತ ಪ್ರಾಣಿ ಎಂದು ಪರಿಗಣಿಸಬೇಕು ಮತ್ತು ಹಸುವನ್ನು ಕೊಲ್ಲುವವರನ್ನು ಮಾತ್ರವಲ್ಲದೆ ಅದನ್ನು ಮಾರಾಟ ಮಾಡುವವರನ್ನು ಹಾಗೂ ಖರೀದಿಸುವವರನ್ನು ಕಾನೂನಿನ ಪ್ರಕಾರ ಅಪರಾಧಿಗಳನ್ನಾಗಿ ಮಾಡಬೇಕು ಎಂಬುದಾಗಿ ಈತ ಹೇಳಿದ್ದ. ಇವನಂತೆ ಮತ್ತೊಬ್ಬ ಕೋಲ್ಕತ್ತಾದ ಜಾಮಾ ಮಸೀದಿಯ ಇಮಾಮ್ ಸರ್ಕಾರದ ಗೋಹತ್ಯಾ ವಿರೋಧಿ ಕ್ರಮವನ್ನು ಕಂಡು ತಮ್ಮ ಸಮುದಾಯಕ್ಕೆ ಅತ್ಯಂತ ಜಾಣ್ಮೆಯ ಮತ್ತು ಶಾಂತಿಯುತವಾದ ಮನವಿಯೊಂದನ್ನು ಮಾಡಿದ್ದ. ಹಬ್ಬದ ಹೆಸರಿನಲ್ಲಿ ಯಾವುದೇ ರೀತಿಯ ಕಾನೂನು ಸಂಘರ್ಷ, ಗಲಭೆ ಅಥವಾ ಹಿಂಸಾಚಾರದಂತಹ ಘಟನೆಗಳಿಗೆ ಆಸ್ಪದ ಕೊಡಬೇಡಿ. ಈ ಬಾರಿ ಹಸುಗಳನ್ನು ಖರೀದಿಸಬೇಡಿ ಮತ್ತು ಹಸುಗಳ ಬಲಿಯನ್ನು ಕೊಡಬೇಡಿ ಎಂಬುದಾಗಿ ಕರೆ ನೀಡಿದ್ದ. ಇದರ ಹಿಂದೆ ತಮ್ಮ ಕೋಮಿನ ಯುವಕರು ಅನಗತ್ಯವಾಗಿ ಜೈಲು ಪಾಲಾಗುವುದನ್ನು ತಪ್ಪಿಸುವ ಉದ್ದೇಶ ಇವನದ್ದಾಗಿತ್ತು.

ಇವರುಗಳಂತೆ ಸಾಕಷ್ಟು ಮುಸ್ಲಿಮ್ ಮುಖಂಡರು ತಮ್ಮದೇ ವಾದವನ್ನು ಮಂಡಿಸುತ್ತಾ, ಭಾರತದಲ್ಲಿ ಹಸುವಿನ ಮಾಂಸ ತಿನ್ನುವ ವಿಷಯವನ್ನು ಕೇವಲ ಮುಸ್ಲಿಂ ಸಮುದಾಯಕ್ಕೆ ಜೋಡಿಸಿ ದೊಡ್ಡ ರಾಜಕೀಯ ಮಾಡಲಾಗುತ್ತಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಶೇಕಡಾ ತೊಂಬತ್ತಕ್ಕಿಂತ ಹೆಚ್ಚು ಮುಸ್ಲಿಮರಿದ್ದರೂ ಅಲ್ಲಿನ ಕಾಶ್ಮೀರಿ ಪಂಡಿತರ ಭಾವನೆಗಳಿಗೆ ಗೌರವ ನೀಡಿ ಮುಸ್ಲಿಮರು ಗೋಮಾಂಸ ತಿನ್ನುತ್ತಿರಲಿಲ್ಲ, ದೇಶದ ಜನಸಂಖ್ಯೆಯ ಶೇಕಡಾ ಎಪ್ಪತ್ತಕ್ಕಿಂತ ಹೆಚ್ಚು ಜನರು ಮಾಂಸಾಹಾರಿಗಳಾಗಿದ್ದಾರೆ. ಆದರೆ ದೇಶದಲ್ಲಿ ಮುಸ್ಲಿಮರ ಜನಸಂಖ್ಯೆ ಕೇವಲ ಶೇಕಡಾ ಹದಿನಾಲ್ಕರಷ್ಟಿದೆ. ಕೇವಲ ಮುಸ್ಲಿಮರು ಮಾತ್ರ ಮಾಂಸ ತಿನ್ನುತ್ತಿದ್ದರೆ ಮಾರುಕಟ್ಟೆಯಲ್ಲಿ ಮಾಂಸದ ಬೆಲೆ ಇಷ್ಟು ಹೆಚ್ಚಾಗುತ್ತಿರಲಿಲ್ಲ, ದೇಶದಲ್ಲಿ ಹಿಂದೂಗಳು, ಮುಸ್ಲಿಮರು, ಸಿಖ್ಖರು ಮತ್ತು ಕ್ರಿಶ್ಚಿಯನ್ನರು ಸೇರಿದಂತೆ ಎಲ್ಲಾ ಸಮುದಾಯದವರು ಮಾಂಸಾಹಾರ ಸೇವಿಸುತ್ತಾರೆ. ಆದರೆ ರಾಜಕೀಯ ಕಾರಣಗಳಿಗಾಗಿ ಕೇವಲ ಮುಸ್ಲಿಂ ಸಮುದಾಯವನ್ನು ಮಾತ್ರ ಗುರಿ ಮಾಡಲಾಗುತ್ತಿದೆ ಎಂಬುದಾಗಿ ಎಲ್ಲಾ ಬೊಬ್ಬೆ ಹೊಡೆದಿದ್ದರು.

ಇನ್ನು ಕೆಲವರು ವೀರ ಸಾವರ್ಕರ್ ಯಾವುದೋ ಪರಿಸ್ಥಿತಿಯಲ್ಲಿ ಎಂದೋ ಹೇಳಿದ್ದರು ಎನ್ನಲಾದ ಮಾತೊಂದನ್ನು ಎಳೆದು ತಂದು ನಾವು ಭಾರೀ ಸಭ್ಯರು ಎಂಬುದನ್ನು ಬಿಂಬಿಸುವ ಪ್ರಯತ್ನವನ್ನು ಮಾಡಿದ್ದರು. ಸಾವರ್ಕರ್ ತಮ್ಮ ಪುಸ್ತಕವೊಂದರಲ್ಲಿ ಹಸುವನ್ನು ಗೋಮಾತೆ ಎಂದು ಕರೆಯುವುದನ್ನು ಒಪ್ಪಿರಲಿಲ್ಲ, ಅವರು ಹಸುವಿಗಿಂತ ಕತ್ತೆ ಹೆಚ್ಚು ಉಪಯುಕ್ತ ಪ್ರಾಣಿ ಎಂದು ಬರೆದಿದ್ದರು. ಹಸುವಿನ ಹಾಲನ್ನು ಕುಡಿಯಿರಿ, ಆದರೆ ಅದನ್ನೇ ದೇವರೆಂದು ಪೂಜಿಸುವುದರಲ್ಲಿ ಅರ್ಥವಿಲ್ಲ ಎಂಬುದಾಗಿ ಹೇಳಿದ್ದರು ಎಂಬುದನ್ನು ಒತ್ತಿ ಹೇಳುವ ಪ್ರಯತ್ನವನ್ನು ಮಾಡಿದ್ದರು. ಇವರಂತೆ ಕೆಲ ಗಣ್ಯ ವ್ಯಕ್ತಿಗಳು, ಭಾರತೀಯ ಸಮಾಜದಲ್ಲಿ ಹಸು ಹಾಲು ಕೊಡುವವರೆಗೆ ಮಾತ್ರ ಅದನ್ನು ತಾಯಿ ಎಂದು ಪೂಜಿಸಲಾಗುತ್ತದೆ. ಆದರೆ ಅದು ಹಾಲು ಕೊಡುವುದನ್ನು ನಿಲ್ಲಿಸಿದ ತಕ್ಷಣ ಮತ್ತು ವಯಸ್ಸಾದ ತಕ್ಷಣ ಅದೇ ಜನರು ಆ ಹಸುವನ್ನು ಮಾರುಕಟ್ಟೆಗೆ ತಂದು ಮಾರಿಬಿಡುತ್ತಾರೆ. ಆ ಹಸುವನ್ನು ಕೊಳ್ಳುವವರು ಅದಕ್ಕೆ ಏನು ಮಾಡುತ್ತಾರೆ ಎಂಬುದು ಮಾರುವವರಿಗೂ ಗೊತ್ತಿರುತ್ತದೆ. ಆದರೂ ಹಣದಾಸೆಗಾಗಿ ಅದನ್ನು ಮಾರಿಬಿಡುತ್ತಾರೆ ಎಂಬುದಾಗಿ ಮನಸೋಚ್ಛೆ ಒದರಿದ್ದರು

◆

ಇದೇನಿದು 'ಖಾತಾ' ಪರಿವರ್ತನೆ ಗೊಂದಲ?

• ರಮಾನಂದ ಶರ್ಮಾ

ರಾಜ್ಯ ಸರ್ಕಾರದ 6ನೇ ಗ್ಯಾರಂಟಿ ಎಂದು ಕರೆಯಲಾಗುವ ಭೂ ಗ್ಯಾರಂಟಿ ಯೋಜನೆಗೆ ತಾರ್ಕಿಕ ಅಂತ್ಯ ಕಾಣಿಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ಪ್ರಾರಂಭಿಸಿರುವ 'ನನ್ನ ಇ ಖಾತಾ ನನ್ನ ಹಕ್ಕು' ಅಭಿಯಾನ ಬೆಂಗಳೂರಿನಲ್ಲಿ ನಡೆಯುತ್ತಿದೆ. ನಗರದ 5 ಪಾಲಿಕೆಗಳ 52 ಸ್ಥಳಗಳಲ್ಲಿ ಪ್ರತಿ ಶನಿವಾರ ನಡೆಯುತ್ತಿರುವ ಈ ಅಭಿಯಾನದ ಮೂಲಕ 'ಇ ಖಾತಾ' ಸೇವೆಯನ್ನು ಜನತೆಯ ಮನೆಬಾಗಿಲಿಗೆ ತಲುಪಿಸುವ ಪ್ರಯತ್ನ ನಡೆದಿದ್ದು, ಇ ಖಾತಾ, ಮ್ಯುಟೇಷನ್, ಖಾತಾ ತಿದ್ದುಪಡಿ, ಹೊಸ ಇ ಖಾತಾ, ಬಿ ಟು ಎ ಖಾತಾ ಸೇರಿದಂತೆ ವಿವಿಧ ಸೇವೆಗಳಿಗಾಗಿ ದಾಖಲೆಗಳನ್ನು ಹಿಡಿದು ಜನರು ಭೇಟಿ ನೀಡುತ್ತಿದ್ದಾರೆ.

ಲಭ್ಯ ಮಾಹಿತಿ ಪ್ರಕಾರ ಬೆಂಗಳೂರು ನಗರದಲ್ಲಿ 23 ಲಕ್ಷ ಆಸ್ತಿಗಳಿದ್ದು, ಅವುಗಳಲ್ಲಿ 'ಎ' ಖಾತಾ ಹೊಂದಿದ ಆಸ್ತಿಗಳು 16 ಲಕ್ಷ ಇದ್ದರೆ, 'ಬಿ' ಖಾತೆ ಹೊಂದಿದ ಆಸ್ತಿಗಳು 7 ಲಕ್ಷಗಳು. ಸುಮಾರು 7000 ಪುಸ್ತಕಗಳಲ್ಲಿದ್ದ ಆಸ್ತಿಗಳ ಎಲ್ಲಾ ವಿವರಗಳನ್ನು ಡಿಜಿಟಲೈಸ್ ಮಾಡಲಾಗಿದೆಯಂತೆ. ನಿರೀಕ್ಷೆಯಂತೆ 'ನನ್ನ ಇ ಖಾತಾ, ನನ್ನ ಹಕ್ಕು' ಅಭಿಯಾನ ಸಂಪೂರ್ಣವಾಗಿ ಯಶಸ್ವಿಯಾದರೆ, ಜಿಬಿಎ ಸುಮಾರು 10000 ಕೋಟಿ ರೂ. ಆದಾಯವನ್ನು ನಿರೀಕ್ಷಿಸಬಹುದಂತೆ.

'ಖಾತಾ' ಎಂದರೆ, ಒಂದು ಆಸ್ತಿಯ ಮಾಲೀಕತ್ವವು ರೆವೆನ್ಯೂ ರೆಕಾರ್ಡ್‌ಗಳಲ್ಲಿ ಸಂಬಂಧಪಟ್ಟ ಮಾಲೀಕನ ಹೆಸರಿನಲ್ಲಿ ದಾಖಲಾಗಿದೆ ಎಂದು ಸರಕಾರ ನೀಡುವ ಒಂದು ಪ್ರಮಾಣಪತ್ರ. ಇದು ಒಂದು ಆಸ್ತಿಯ ಮಾಲೀಕತ್ವದ ಬಗೆಗೆ ದೃಢವಾದ ಮತ್ತು ಅಂತಿಮ ದಾಖಲೆ. ಇದು ಆಸ್ತಿಯ ಕ್ರಯಪತ್ರ (ಸೇಲ್ ಡೀಡ್)ಕ್ಕಿಂತಲೂ ಹೆಚ್ಚು ನಿಖರವಾದ ಮತ್ತು ದೃಢವಾದ ದಾಖಲೆ ಎನ್ನಲಾಗುತ್ತದೆ. ಆಸ್ತಿ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರದಲ್ಲಿ ಇದು ಅತ್ಯಗತ್ಯ ದಾಖಲೆ ಎಂದು ಪರಿಗಣಿಸಲಾಗುತ್ತದೆ. ಈ ದಾಖಲೆ ಇಲ್ಲದ ವ್ಯವಹಾರವನ್ನು ಅಸಿಂಧು ಎನ್ನಲಾಗುತ್ತದೆ. ವಾಸ್ತವದಲ್ಲಿ ಒಂದು ಆಸ್ತಿಯ ಖರೀದಿ ಅಥವಾ ಮಾರಾಟವಾದ ತಕ್ಷಣ ಅದರ ನೋಂದಣಿ ಆಗುತ್ತಿರುವಂತೆ ಈ ಪ್ರಕ್ರಿಯೆ ಆಗಬೇಕು. ಆದರೆ, ಸದ್ಯದ ವ್ಯವಸ್ಥೆಯಲ್ಲಿ ಅದು ಸ್ವಯಂಪ್ರೇರಿತವಾಗಿ ಆಗದೆ, ಆಸ್ತಿಯ ಖರೀದಿದಾರ ಖಾತಾ ದಾಖಲೆಗೆ ಪುನಃ ಒಂದು ನಿರ್ದಿಷ್ಟ ಶುಲ್ಕವನ್ನು ನೀಡಿ ಸಂಬಂಧಪಟ್ಟ ಕಚೇರಿಗೆ ಹತ್ತಾರು ಬಾರಿ ಓಡಾಡಿ ಹಣ ವ್ಯಯಿಸಿ ಪಡೆಯಬೇಕಾಗುತ್ತದೆ. ಆಸ್ತಿ ಖರೀದಿದಾರರು ಆಸ್ತಿಯನ್ನು ಖರೀದಿಸಿದ ಬಳಿಕ ನಿಗದಿತ 7% ಸ್ಟ್ಯಾಂಪ್ ಡ್ಯೂಟಿ ನೀಡಿ ನೋಂದಣಿ ಮಾಡಿಸಿದ ಮೇಲೆ, ರೆವೆನ್ಯೂ ದಾಖಲೆಯಲ್ಲಿ ಹೆಸರು ನಮೂದಿಸಲು ಮತ್ತೇಕೆ ಶುಲ್ಕ ನೀಡಬೇಕು ಎಂದು ಜನಸಾಮಾನ್ಯರು ಪ್ರಶ್ನಿಸುತ್ತಾರೆ. ಅನುಭವಿಗಳ ಪ್ರಕಾರ ಈ 'ಬಿ' ಖಾತಾ ಪರಿಕಲ್ಪನೆ ದೇಶದಲ್ಲಿ ಬೇರಾವ ರಾಜ್ಯದಲ್ಲೂ ಇಲ್ಲ. 'ಬಿ' ಖಾತಾ ಪಡೆಯುವಾಗ ಆಸ್ತಿ ನೋಂದಣಿ ಸಮಯದಲ್ಲಿ ನೀಡಿದ ಸ್ಟ್ಯಾಂಪ್ ಡ್ಯೂಟಿಯ ಮೇಲೆ 2% ಶುಲ್ಕ ಪಡೆಯಲಾಗಿತ್ತು. ಈಗ 'ಎ' ಖಾತಾ ಪಡೆಯಲು ಆಸ್ತಿಯ ಮಾರ್ಗದರ್ಶಿ ಮೌಲ್ಯದ 2% ಶುಲ್ಕ (ಆಸ್ತಿ ಮಾಲೀಕರ ಆಕ್ಷೇಪಣೆ, ಆಕ್ರೋಶ ಮತ್ತು ಪ್ರತಿರೋಧಕ್ಕೆ ಸ್ಪಂದಿಸಿ ಹಿಂದಿನ ಆದೇಶವನ್ನು ಮಾರ್ಪಡಿಸಿ 5% ನಿಂದ 2% ಗೆ ಇತ್ತೀಚೆಗೆ ಇಳಿಸಲಾಗಿದೆ) ವಿಧಿಸಲಾಗುತ್ತಿದ್ದು, ಅದರ ಸಂಗಡ ಅಭಿವೃದ್ಧಿ ಶುಲ್ಕ ಬೇರೆ. ಆರಂಭಿಕ ವರದಿ ಪ್ರಕಾರ 'ಎ' ಖಾತಾ ಪಡೆಯಲು ಮಾರ್ಗದರ್ಶಿ ಬೆಲೆಯು ನೋಂದಣಿ ಮೌಲ್ಯವಾಗಿರದೇ, ಇಂದಿನ ಪರಿಷ್ಕೃತ ಮೌಲ್ಯವಾಗಿರುತ್ತದೆ. ಇತ್ತೀಚಿನ ವರದಿಗಳಲ್ಲಿ ಈ ಬಗೆಗೆ ಸ್ಪಷ್ಟೀಕರಣ ಕಾಣುತ್ತಿಲ್ಲ. 2016ರಲ್ಲಿ 50 ಲಕ್ಷ ಇದ್ದ ಮಾರ್ಗದರ್ಶಿ ಬೆಲೆ ಇಂದು ಸುಮಾರು 75 ಲಕ್ಷ ಇರಬಹುದು. ಸ್ಥಿರಾಸ್ತಿ ಮೌಲ್ಯವು ಸದಾ ಏರುತ್ತಲೇ ಇರುತ್ತದೆ ಮತ್ತು ಬೆಂಗಳೂರಿನಲ್ಲಿ ಇದು ಇನ್ನೂ ಹೆಚ್ಚು ಎನ್ನುವುದು ತಿಳಿದ ವಿಷಯ. ಈ ಎರಡೂ ಉದಾಹರಣೆಗಳಲ್ಲಿ ಆಸ್ತಿ ಮಾಲೀಕ 'ಎ' ಖಾತಾ ಪಡೆಯಲು ಕ್ರಮವಾಗಿ 1 ಮತ್ತು 1.50 ಲಕ್ಷ ಶುಲ್ಕ ನೀಡಬೇಕಾಗುತ್ತದೆ. ಇಂದಿನ ಪರಿಷ್ಕೃತ ಮಾರ್ಗದರ್ಶಿ ಬೆಲೆಯನುಸಾರ ಸುಮಾರು 50000 ರೂ.ನಷ್ಟು ಹೆಚ್ಚಿಗೆ ನೀಡಬೇಕಾಗುತ್ತದೆ. ಇದರ ಮೇಲೆ ಅಭಿವೃದ್ಧಿ ಶುಲ್ಕ ಬೇರೆ. ಇಂದು ಬೆಂಗಳೂರಿನಲ್ಲಿ ಎಲ್ಲಿಯೇ ಆಗಿರಲಿ ಆಸ್ತಿಯ (ನಿವೇಶನದ ಬೆಲೆ) ಸಾಮಾನ್ಯ ನಿವೇಶನಕ್ಕೆ ಕಡಿಮೆ ಎಂದರೂ 40-50 ಲಕ್ಷ ಇರುತ್ತಿದ್ದು ಅದೆಷ್ಟು ಆಸ್ತಿ ಮಾಲೀಕರು ಇದನ್ನು ಭರಿಸಬಹುದು?

ಆಸ್ತಿಗಳು 'ಎ' ಖಾತಾಗೆ ಪರಿವರ್ತನೆಯಾದರೆ ಆಸ್ತಿಯ ಬೆಲೆ ಹೆಚ್ಚಾಗುವುದರಿಂದ ಮಾರಾಟ ಮಾಡಿದರೆ ಬೃಹತ್ ಲಾಭವಾಗುತ್ತದೆ ಎನ್ನುವ ಸಮರ್ಥನೆ ಕೇಳಿಬರುತ್ತದೆ. ಅದು ಸರಿ. ಆದರೆ, ಎಷ್ಟು ಜನ ಆಸ್ತಿಯನ್ನು ಮಾರಾಟ ಮಾಡುತ್ತಾರೆ? ಬಹುತೇಕರು ಮಾಲೀಕತ್ವದ ದೃಢೀಕರಣಕ್ಕಾಗಿ 'ಎ' ಖಾತೆಗೆ ಪರಿವರ್ತನೆ ಮಾಡಿಕೊಳ್ಳುತ್ತಿದ್ದಾರೆ. ಬಹುಶಃ ಇದೇ ಕಾರಣಕ್ಕೋ ಏನೋ 'ಎ' ಖಾತಾ ಪರಿವರ್ತನೆಗೆ ನಿರೀಕ್ಷೆಯಷ್ಟು ಆತುರತೆ ಕಾಣುತ್ತಿಲ್ಲ. ಹಾಗೆಯೇ ಫ್ಲ್ಯಾಟ್‌ಗಳಿಗೆ 'ಎ' ಖಾತಾ ನೀಡುವ ನಿಟ್ಟಿನಲ್ಲಿ ಸಾಫ್ಟ್‌ವೇರ್ ಇನ್ನೂ ಬಿಡುಗಡೆಯಾಗಿಲ್ಲ ಎನ್ನಲಾಗುತ್ತಿದೆ. ಇದು ಕೂಡಾ ಜನರ ನಿರುತ್ಸಾಹಕ್ಕೆ ಕಾರಣ ಇರಬಹುದು. ಒಂದು ಅಂದಾಜಿನ ಪ್ರಕಾರ ಬೆಂಗಳೂರಿನಲ್ಲಿ ಸುಮಾರು 20000 ಅಪಾರ್ಟ್‌ಮೆಂಟ್‌ಗಳು ಮತ್ತು 2.50 ಲಕ್ಷ ಫ್ಲ್ಯಾಟ್‌ಗಳು ಇವೆ. ಬೆಂಗಳೂರು ಲಂಬಾಂತರವಾಗಿ ಬೆಳೆಯುತ್ತಿದ್ದು, ಫ್ಲ್ಯಾಟ್‌ಗಳ ಸಂಖ್ಯೆ ಗಮನಾರ್ಹವಾಗಿದೆ. ನಗರದಲ್ಲಿ 7 ಲಕ್ಷ 'ಬಿ' ಖಾತಾದಾರರು ಇದ್ದು, ಕೇವಲ 7000 ಅರ್ಜಿಗಳು ಪರಿವರ್ತನೆಗೆ ಬಂದಿವೆಯಂತೆ.

'ಬಿ' ಖಾತಾ ಪರಿಕಲ್ಪನೆ ಜನಸಾಮಾನ್ಯರಲ್ಲಿ ಗೊಂದಲವನ್ನು ಹುಟ್ಟುಹಾಕಿದೆ. ಈ ಪರಿಕಲ್ಪನೆ ಆರಂಭವಾಗಿದ್ದು ಹೇಗೆ ಮತ್ತು ಯಾಕೆ ಎನ್ನುವುದರ ಬಗೆಗೆ ಸರಿಯಾದ ಮಾಹಿತಿ ದೊರಕುತ್ತಿಲ್ಲ. ಕೆಲವು ಮೂಲಗಳ ಪ್ರಕಾರ ನಿಯಮಾವಳಿಯನ್ನು ಉಲ್ಲಂಘಿಸಿದ ಆಸ್ತಿಗೆ ತಾತ್ಕಾಲಿಕವಾಗಿ ನೀಡಿದ ಖಾತೆಯಿದು. ಇದರ ಮಾಲೀಕತ್ವವನ್ನು ಅಧಿಕೃತವೆಂದು ಹೇಳುವಂತಿಲ್ಲ. ಇದು ಒಂದು ರೀತಿಯಲ್ಲಿ "ಅಂತಿಮ ಪರಿಶೀಲನೆ ಮತ್ತು ಒಪ್ಪಿಗೆ ಆಧಾರದ ಮೇಲೆ" ಎಂದು ಕೆಲವರು ಅರ್ಥೈಸುತ್ತಾರೆ. ಈ 'ಬಿ' ಖಾತೆಯ ಮೇಲೆ ಬ್ಯಾಂಕ್ ಸಾಲ ಮತ್ತಿತರ ಸೌಲಭ್ಯಗಳು ದೊರಕುವುದಿಲ್ಲ ಮತ್ತು ಆಸ್ತಿಯನ್ನು ಮಾರಾಟ ಮಾಡಲಾಗುವುದಿಲ್ಲ, ಇದನ್ನು ಹಣಕಾಸು ವ್ಯವಹಾರದಲ್ಲಿ ಭದ್ರತೆಯಾಗಿ ನೀಡಲಾಗುವುದಿಲ್ಲ.

'ಬಿ' ಖಾತಾದಿಂದ 'ಎ' ಖಾತಾಗೆ ಪರಿವರ್ತಿಸುವ ಸರ್ಕಾರದ ಉದ್ದೇಶ ಸ್ವಾಗತನೀಯ. ಆಸ್ತಿಯ ಮಾಲೀಕತ್ವದ ಬಗೆಗೆ ಜನರಿಗೆ ಖಾತರಿ ದೊರಕುತ್ತದೆ. 'ಜಿಬಿಎ' ಆದಾಯವನ್ನು ಹೆಚ್ಚಿಸುವ ಉದ್ದೇಶವೂ ಕೂಡಾ ಇದರ ಹಿಂದಿದೆ ಎನ್ನುವ ಆರೋಪವೂ ಇದೆ. ಅದು ಬೇರೆ ವಿಚಾರ. ಆದರೆ, ಈ ಪ್ರಕ್ರಿಯೆಗೆ ಜನತೆಯಿಂದ ವಸೂಲು ಮಾಡುವ ಶುಲ್ಕದ ಬಗೆಗೆ ಭಾರೀ ಆಕ್ಷೇಪಣೆ ಇದೆ. ಈಗಾಗಲೇ ಆಸ್ತಿ ಖರೀದಿಯ ನೋಂದಣಿಗೆ ಮತ್ತು 'ಬಿ' ಖಾತಾಗೆ ಮತ್ತು ಅಭಿವೃದ್ಧಿ ಶುಲ್ಕಕ್ಕೆ ಲಕ್ಷಾಂತರ ವ್ಯಯಿಸಿದ್ದು, ಈಗ 'ಎ' ಖಾತಾಗೆ ಪರಿವರ್ತಿಸಲು ಮತ್ತೆ ಲಕ್ಷಾಂತರ ರೂ. ನೀಡುವುದು ಯಾವ ಮಾನದಂಡದಲ್ಲೂ ಸರಿಯೆನಿಸದು ಎನ್ನುವುದು ಜನರ ಭಾವನೆ. ಇದನ್ನು ಉಚಿತವಾಗಿ ಮಾಡಿ ಎಂದು ಅವರು ಕೇಳುವುದಿಲ್ಲ, ಒಂದು ನಾಮಿನಲ್ ಮೊತ್ತಕ್ಕೆ ಅಥವಾ 'ಬಿ' ಖಾತಾ ಮಾಡುವಾಗ ಶುಲ್ಕ ವಿಧಿಸಿದಂತೆ ನೋಂದಣಿ ಸಮಯದಲ್ಲಿ ನೀಡಿದ ಸ್ಟಾಂಪ್ ಡ್ಯೂಟಿಯ ಮೇಲೆ 1-2% ಶುಲ್ಕ ವಿಧಿಸಲಿ ಎನ್ನುತ್ತಾರೆ. ಈ ಅಭಿಯಾನ 100 ದಿನಗಳ ಕಾಲ ನಡೆಯುತ್ತಿದ್ದು ಆಗಸ್ಟ್ 23ಕ್ಕೆ ಅಂತ್ಯವಾಗುತ್ತದೆ. ಆಸ್ತಿಯ ಮಾರ್ಗದರ್ಶಿ ಬೆಲೆಯನ್ನು 5% ರಿಂದ 2% ಇಳಿಸಿದ್ದು ಕೇವಲ 100 ದಿನಗಳಿಗೆ ಮಾತ್ರವಾಗಿದೆ. ಜನತೆಯ ಸ್ಪಂದನೆಯನ್ನು ನೋಡಿ ಈ ಗಡುವನ್ನು ವಿಸ್ತರಿಸುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.

◆

ಕಿರುಸುದ್ದಿ

ಅಮಾವಾಸ್ಯೆ ಪ್ರಯುಕ್ತ ಸೋಮೇಶ್ವರನಿಗೆ ಪೂಜೆ



• **ತಾವರೆಕೆರೆ:** ನಂದಗುಡಿ ಹೋಬಳಿ ತಾವರೆಕೆರೆ ಗ್ರಾಮದ ಕೆರೆಯ ಬಳಿಯಿರುವ ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ಸ್ವಾಮಿಗೆ ವಿಶೇಷ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ಪ್ರಧಾನ ಅರ್ಚಕರಾದ ಸುಂದರ್ ದೀಕ್ಷಿತ್‌ರವರು ದೇವರಿಗೆ ಅಭಿಷೇಕ, ಕುಂಕುಮಾರ್ಚನೆ, ಮಹಾ ಮಂಗಳಾರತಿ, ತೀರ್ಥಪ್ರಸಾದದೊಂದಿಗೆ ಭಕ್ತಾದಿಗಳಿಂದ ಅನ್ನಸಂತರ್ಪಣೆ ಸೇವೆಯನ್ನು ಮಾಡಿದ್ದರು. ದರ್ಶನ ಪಡೆದ ಭಕ್ತಾದಿಗಳು ಪ್ರಸಾದ ಸ್ವೀಕರಿಸಿ ತೆರಳಿದರು.

ಸ್ಕೂಟರ್‌ಗೆ ಟಿಟಿ ಡಿಕಿ: ಯುವತಿ ಸಾವು

• **ದೊಡ್ಡಬಳ್ಳಾಪುರ:** ಸೋಮವಾರ ಬೆಳಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಓರ್ವ ಯುವತಿ ಸಾವನ್ನಪ್ಪಿ, ಮತ್ತೊಬ್ಬರು ತೀವ್ರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಘಟನೆ ದೊಡ್ಡಬಳ್ಳಾಪುರ ಹೊರವಲಯದಲ್ಲಿರುವ ಕೈಗಾರಿಕಾ ಪ್ರದೇಶದ, ಖಾಸಗಿ ಸ್ವೀಟ್ ತಯಾರಿಕ ಕಂಪನಿ ಬಳಿ ಸಂಭವಿಸಿದೆ. ಘಟನೆಯಲ್ಲಿ ಸ್ಕೂಟರ್ ಚಲಾಯಿಸುತ್ತಿದ್ದ ಕಂಟನಕುಂಟೆ ನಿವಾಸಿ ಅಶ್ವಿನಿ(21) ಮೃತಪಟ್ಟ ಯುವತಿ. ದೇವನಹಳ್ಳಿ ತಾಲೂಕಿನ ಅರುವನಹಳ್ಳಿ ನಿವಾಸಿ ಸಹನ ಗಂಭೀರವಾಗಿ ಗಾಯಗೊಂಡಿದ್ದಾರೆ. ಗೆಳತಿಯರಾದ ಅಶ್ವಿನಿ ಮತ್ತು ಸಹನ ಖಾಸಗಿ ಬ್ಯಾಂಕ್ ಉದ್ಯೋಗಿಗಳಾಗಿದ್ದು, ಬೆಳಗ್ಗೆ ಸ್ಕೂಟರ್‌ನಲ್ಲಿ ಕೆಲಸಕ್ಕೆ ತೆರಳುವ ವೇಳೆ ಟೆಂಪೋ ಟ್ರಾವಲರ್ ಮುಖಾಮುಖಿ ಡಿಕ್ಕಿ ಹೊಡೆದು ದುರ್ಘಟನೆ ಸಂಭವಿಸಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡ ಇಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಅಶ್ವಿನಿ ಮೃತಪಟ್ಟರೆ, ಸಹನ ಸ್ಥಿತಿ ಚಿಂತಾಜನಕವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಂಡತಿಯ ಮೇಲೆ ಕೈ ಮಾಡಿದ ಮಾವನ ಜೀವ ತೆಗೆದ ಅಳಿಯ

• **ದೊಡ್ಡಬಳ್ಳಾಪುರ:** ಮಡದಿಯ ಮೇಲೆ ಕೈ ಮಾಡಿದನೆಂದು ಕೋಪಗೊಂಡ ಅಳಿಯನೋರ್ವ ಹೆಣ್ಣು ಕೊಟ್ಟ ಮಾವನನ್ನೇ ಹತ್ಯೆ ಮಾಡಿರುವ ಘಟನೆ ತಾಲೂಕಿನ ನೇರಳೆಘಟ್ಟ ಕಾಲೋನಿಯಲ್ಲಿ ಭಾನುವಾರ ಸಂಭವಿಸಿದೆ. ನರಸಪ್ಪ (61) ಮೃತಪಟ್ಟ ಮಾವ ಎನ್ನಲಾಗಿದ್ದು, ಹತ್ಯೆ ಆರೋಪಿ ಅಳಿಯ ಲಕ್ಷ್ಮಣ (45) ಎಂದು ತಿಳಿದು ಬಂದಿದ್ದು, ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆ ಪೊಲೀಸರು ಈತನನ್ನು ಬಂಧಿಸಿದ್ದಾರೆ. ಆರೋಪಿ ಲಕ್ಷ್ಮಣ ನೇರಳೆಘಟ್ಟ ಕಾಲೋನಿಯ ನಿವಾಸಿ ಮೃತ ನರಸಪ್ಪ ಅವರ ಮೊದಲನೇ ಮಗಳನ್ನು ಮದುವೆಯಾಗಿ, ಮಾವನ ಮನೆಯಲ್ಲಿಯೇ ವಾಸವಿದ್ದ. ಘಟನೆಯಲ್ಲಿ ನರಸಪ್ಪ ಅವರ ತಲೆಗೆ ಹಾಗೂ ಕಾಲಿಗೆ ತೀವ್ರ ಗಾಯಗಳಾಗಿದ್ದು, ದೊಡ್ಡಬಳ್ಳಾಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗೆ ವೈದ್ಯರು ಬೆಂಗಳೂರಿಗೆ ರೆಫರ್ ಮಾಡಿದ್ದರಂತೆ. ಆದರೆ ಚಿಕಿತ್ಸೆ ಫಲಕಾರಿಯಾಗದೆ ನರಸಪ್ಪ ಸಾವನಪ್ಪಿದ್ದಾರೆ. ದೊಡ್ಡಬಳ್ಳಾಪುರ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಡಾ.ಎಂ.ಬಿ.ನವೀನ್ ಕುಮಾರ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ಪರಿಶೀಲನೆ ನಡೆಸಿ, ಹತ್ಯೆ ಆರೋಪಿ ಲಕ್ಷ್ಮಣನನ್ನು ವಶಕ್ಕೆ ಪಡೆದಿದ್ದಾರೆ. ಈ ಕುರಿತಂತೆ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೂ.18ರಂದು ಅಭಿನಂದನಾ ಸಮಾರಂಭ

• **ಮಂಡ್ಯ:** ಶ್ರೀಪಾದು ಹಿತೈಷಿ ಪತ್ರಕರ್ತರ ಬಳಗದಿಂದ ಹಿರಿಯ ಪತ್ರಕರ್ತ ಹಾಗೂ 'ಕೋಳಲು' ವಾರಪತ್ರಿಕೆಯ ಸಂಪಾದಕ ಡಿ.ಎನ್.ಶ್ರೀಪಾದು ಅವರ 75ನೇ ವರ್ಷದ ಅಂಗವಾಗಿ ಅಭಿನಂದನಾ ಸಮಾರಂಭವನ್ನು ಜೂ.18ರಂದು ನಗರದ ಕರ್ನಾಟಕ ಸಂಘದ ಆವರಣದಲ್ಲಿರುವ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಉಪಾಧ್ಯಕ್ಷ ಕೆ.ಸಿ.ಮಂಜುನಾಥ್ ತಿಳಿಸಿದರು. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಸುಮಾರು 45 ವರ್ಷಗಳಿಂದ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಸಕ್ರಿಯರಾಗಿರುವ ಶ್ರೀಪಾದು ಅವರು ಸಾವಿರಾರು ಲೇಖನಗಳು, ವಿಶೇಷ ವರದಿಗಳು ಹಾಗೂ ಜನಪರ ಸುದ್ದಿಗಳ ಮೂಲಕ ಸಮಾಜದ ಸಮಸ್ಯೆಗಳನ್ನು ಬೆಳಕಿಗೆ ತಂದಿದ್ದಾರೆ. ಗ್ರಾಮೀಣ ಬದುಕು, ರೈತರು, ಸಾಮಾಜಿಕ ಸಮಸ್ಯೆಗಳು ಮತ್ತು ಜನಸಾಮಾನ್ಯರ ಧ್ವನಿಯಾಗಿ ಕಾರ್ಯನಿರ್ವಹಿಸಿರುವ ಅವರ ಸೇವೆ ಪತ್ರಿಕೋದ್ಯಮ ಕ್ಷೇತ್ರಕ್ಕೆ ಮಹತ್ವದ ಕೊಡುಗೆಯಾಗಿದೆ ಎಂದು ಹೇಳಿದರು. ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಜಿಲ್ಲಾಧಿಕಾರಿ ಡಾ. ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು.

ಮುಂಗಾರು ತಾಂತ್ರಿಕ ಆಂದೋಲನ ಮತ್ತು ಕೃಷಿ ಉಳಿಸಿ ಅಭಿಯಾನಕ್ಕೆ ಶಿವಲಿಂಗಯ್ಯ ಚಾಲನೆ

ಮಣ್ಣಿನ ಸಂರಕ್ಷಣೆ ನಾಳಿನ ಅನ್ನದ ಭದ್ರತೆ

• **ದೊಡ್ಡಬಳ್ಳಾಪುರ:** ಇಂದಿನ ಮಣ್ಣಿನ ಸಂರಕ್ಷಣೆ ನಾಳಿನ ಅನ್ನದ ಭದ್ರತೆ ಎಂಬ ಸಂದೇಶದೊಂದಿಗೆ ರೈತರಲ್ಲಿ ಮುಂಗಾರು ಹಂಗಾಮಿನ ಸಿದ್ಧತೆ, ಸುಸ್ಥಿರ ಕೃಷಿ ಪದ್ಧತಿಗಳು ಹಾಗೂ ಮಣ್ಣಿನ ಫಲವತ್ತತೆಯ ಸಂರಕ್ಷಣೆ ಕುರಿತು ಅರಿವು ಮೂಡಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ ಎಂದು ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ವೈ.ಎನ್. ಡಾ.ಶಿವಲಿಂಗಯ್ಯ ಹೇಳಿದರು.

ತಾಲೂಕಿನ ಹಾಡೋನಹಳ್ಳಿಯ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಮುಂಗಾರಿಗೆ ಕೃಷಿ ಸಿದ್ಧತೆಯನ್ನು ಮಾಡಿಕೊಳ್ಳಲು ರೈತರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಕೃಷಿ ವಿಶ್ವವಿದ್ಯಾನಿಲಯ ಮತ್ತು ಕೃಷಿ ತಂತ್ರಜ್ಞಾನ ಅಳವಡಿಕೆ ಸಂಶೋಧನಾ ಸಂಸ್ಥೆ ಇವರ ಮಾರ್ಗದರ್ಶನದಲ್ಲಿ ಆಯೋಜಿಸಿದ್ದ ಮುಂಗಾರು ತಾಂತ್ರಿಕ ಮತ್ತು ಕೃಷಿ ಉಳಿಸಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಮತ್ತು ಮುಖ್ಯಸ್ಥ ಡಾ.ಬಿ.ಜಿ.ಹನುಮಂತರಾಯ ಮಾತನಾಡಿ, ಕೃಷಿ ವಿಶ್ವವಿದ್ಯಾನಿಲಯದಿಂದ ಬಿಡುಗಡೆಗೊಂಡ ನೂತನ ತಳಿಗಳು ಮತ್ತು ತಂತ್ರಜ್ಞಾನಗಳ ಬಗ್ಗೆ ರೈತರಿಗೆ ಮತ್ತು ಅಭಿವೃದ್ಧಿ ಇಲಾಖೆಗಳ ವಿಸ್ತರಣಾಧಿಕಾರಿಗಳಿಗೆ ತಾಂತ್ರಿಕ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮೂಲ ಉದ್ದೇಶವಾಗಿದೆ. ಪ್ರಸಕ್ತ ಸಾಲಿನಲ್ಲಿ ಭೂ ಮಿತ್ರ ಪರಿಕರಗಳ ಬಳಕೆಯಿಂದ ಕೃಷಿ ಭೂಮಿ ಉಳಿಸಿ ಅಭಿಯಾನವನ್ನು ದೇಶದಾದ್ಯಂತ ಜೂನ್ 1 ರಿಂದ 30 ರವರೆಗೆ ಹಮ್ಮಿಕೊಂಡು, ವಿಜ್ಞಾನಿಗಳ ತಂಡಗಳು ಪ್ರತಿ ದಿನ ಎರಡು ಗ್ರಾಮಗಳಿಗೆ ಭೇಟಿ ನೀಡಿ, ರೈತರಿಗೆ ಸಾವಯವ ಗೊಬ್ಬರಗಳ ಬಳಕೆ, ಮಣ್ಣು ಪರೀಕ್ಷೆ ಮತ್ತು ವಿಶ್ಲೇಷಣೆ, ಮಣ್ಣು ಪರೀಕ್ಷೆ ಆಧಾರಿತ ಸಮತೋಲನ ರಸಗೊಬ್ಬರಗಳ ಬಳಕೆ, ಕೀಟ ಮತ್ತು ರೋಗಗಳ ನಿರ್ವಹಣೆಗೆ ಪರಿಸರ ಸ್ನೇಹಿ ಜೈವಿಕ ನಿಯಂತ್ರಕಗಳ ಬಳಕೆ, ಸಾವಯವ ಕೃಷಿ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

> ಉತ್ತಮ ಬೀಜ ಉತ್ತಮ ಭೂಮಿಯಲ್ಲಿ ಬಿತ್ತಿದರೆ ಉತ್ತಮ ಇಳುವರಿ ದೊರೆಯುತ್ತದೆ. ರಾಗಿ ತಳಿ ಎಂ.ಎಲ್.-322 ತಡವಾದ ಮುಂಗಾರಿಗೆ ಸೂಕ್ತವಾಗಿದ್ದು, ನೆಲಕ್ಕೆ ಬೀಳದಿರುವುದರಿಂದ ಅಧಿಕ ಇಳುವರಿಯ ಜೊತೆಗೆ ಯಾಂತ್ರೀಕೃತ ಕಟಾವಿಗೆ ಸೂಕ್ತವಾಗಿದೆ.
>
> ■ ಡಾ.ಕೆ.ವಿಶ್ವನಾಥ, ಕೃ.ವಿವಿ ರಾಷ್ಟ್ರೀಯ ಬೀಜ ಪ್ರಾಯೋಜನೆ, ವಿಶೇಷ ಅಧಿಕಾರಿ

ಅಟಾರಿಯ ಪ್ರಧಾನ ವಿಜ್ಞಾನಿ ಡಾ.ಚಂದ್ರೇಗೌಡ ಮಾತನಾಡಿ, ಮಣ್ಣಿನ ಫಲವತ್ತತೆ ಕಾಪಾಡಿದರೆ ಮಾತ್ರ ಭವಿಷ್ಯದ ಕೃಷಿ ಸುಸ್ಥಿರವಾಗಲು ಸಾಧ್ಯ. ಆದ್ದರಿಂದ ಮಣ್ಣಿನ ಪರೀಕ್ಷೆ, ಸಾವಯವ ಮತ್ತು ಜೈವಿಕ ಗೊಬ್ಬರಗಳ ಬಳಕೆ, ಬೆಳೆ ಪರಿವರ್ತನೆ, ಅಂತರ ಬೆಳೆಗಳ ಬಳಕೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆ ಇಂದಿನ ಕೃಷಿಯಲ್ಲಿ ಅಗತ್ಯವಾಗಿದೆ ಎಂದು ತಿಳಿಸಿದರು.

ಅ.ಭಾ.ಸು.ಸಂ.ಪ್ರಾ.-ಕೃಷಿ ಹವಾಮಾನದ ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಡಾ. ಎಂ.ಎನ್.ತಿಮ್ಮೇಗೌಡ ಮಾತನಾಡಿ, ಪ್ರಸ್ತುತ ವರ್ಷದಲ್ಲಿ ವಾಡಿಕೆಗಿಂತ ಶೇ.30ರಷ್ಟು ಕಡಿಮೆ ಮಳೆಯಾಗುವ ಸಾಧ್ಯತೆ ಇದೆ ಎಂದರು.

ಕಾರ್ಯಕ್ರಮದಲ್ಲಿ ಕೃಷಿ ಉಪ ನಿರ್ದೇಶಕಿ ಎಚ್.ಪಂಕಜಾ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಶಶಿಕಲಾ, ಡಾ. ಸದಾಶಿವ, ಮುಖ್ಯ ಪಶುವೈದ್ಯಾಧಿಕಾರಿ ಡಾ.ಸದಾಶಿವ, ಸಹಾಯಕ ನಿರ್ದೇಶಕ ತಿಲಕ್ ಹೆಗ್ಡೆ, ಗ್ರಾಮ ಪಂ ಮಾಜಿ ಅಧ್ಯಕ್ಷ ಎಚ್.ಎ. ನಾಗರಾಜು, ಎನ್‌ಬಿಎಐಆರ್ ಪ್ರಧಾನ ವಿಜ್ಞಾನಿಗಳಾದ ಡಾ.ಗುಂಡಪ್ಪ, ಡಾ.ದಾಸ್, ಡಾ.ಮರಿಯಪ್ಪ ಎನ್, ವಿಜ್ಞಾನಿಗಳಾದ ಡಾ. ಸೋಮಶೇಖರ್, ಡಾ.ಆನಂದ್. ಎಸ್.ಆರ್, ಡಿ.ವಿ.ನಾಯಕ್, ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ನೂತನ ತಂತ್ರಜ್ಞಾನಗಳ ಬಗ್ಗೆ ಮಾಹಿತಿ

ಕಾರ್ಯಕ್ರಮದಲ್ಲಿ ಎಲ್ಲಾ ಅಭಿವೃದ್ಧಿ ಇಲಾಖೆಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ, ಮೀನುಗಾರಿಕೆ, ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಳೆ ನಿರ್ವಹಣೆ ವಿಭಾಗ, ಸಿರಿಧಾನ್ಯಗಳ ಉತ್ಕೃಷ್ಟ ಕೇಂದ್ರ, ಕೊಯ್ಲೋತ್ತರ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಭಾಗ, ಬೀಜ ಬೆಳೆಗಳು, ಮಂತರ್ಲೀಗ ಸಂಸ್ಥೆ, ಮೈತ್ರಿ ಸರ್ವ ಸೇವ ಸಂಸ್ಥೆ, ಬಿಐಆರ್‌ಡಿಎನ್ ಸಂಸ್ಥೆ, ಇಫ್ಕೋ, ಪ್ಯಾರಾದೀಪ್, ವೆಲ್ ಆಗ್ರೋ, ಬೇಯರ್, ಮಲ್ಟಿಪ್ಲೆಕ್ಸ್ ಡ್ರೋನ್, ಆಗ್ ವೈಸ್, ನೇಟಾಫಿಂ, ಫೈಲೋ, ರೆಡ್‌ವಿಂಗ್, ಯು.ಎಸ್.ಜಿ. ಆಗ್ರೋ, ಇನ್‌ಟ್ಯಾಪ್, ರಚನ್ ಲೋ ಟನಲ್ ಫಾರ್ಮಿಂಗ್, ಜೀವಾಮೃತ ಘಟಕ, ಕೃಷಿ ಹೃದಯ ಮತ್ತು ಜಿಲ್ಲೆಯ ಪ್ರಗತಿಪರ ರೈತರಾದ ನವನೀತ, ಸಂತೋಷ್, ರಾಜು, ಕೆಂಪೇಗೌಡ, ತಿಲಕ್, ಚಂದ್ರಶೇಖರ್, ಪದ್ಮ ಗೌಡ ಭಾಗವಹಿಸಿ, ವಸ್ತುಪ್ರದರ್ಶನ ಏರ್ಪಡಿಸಿ ನೂತನ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ತಿಳಿಸಿಕೊಟ್ಟರು. ರೈತ ಅಶ್ವತ್ಥ ನಾರಾಯಣ ಬಾಬುದಾರುಗಳ ದೇಸಿ ತಳಿ ಹಳ್ಳಿಕಾರ್ ಎತ್ತುಗಳನ್ನು ಪ್ರದರ್ಶಿಸಿದರು.



ತಾವರೆಕೆರೆ ನಂದಗುಡಿ ಹೋಬಳಿಯ ಮಂಚಪ್ಪನಹಳ್ಳಿ ಗ್ರಾಮದಲ್ಲಿ ಬಸವ ಜಯಂತ್ಯೋತ್ಸವ ಸಮಾರೋಪದಲ್ಲಿ ವೀರಶೈವ ಲಿಂಗಾಯತ ಹೆಣ್ಣುಮಕ್ಕಳು ದೀಪದ ಆರತಿ ಹೊತ್ತು ಎಲ್ಲರ ಗಮನ ಸೆಳೆದರು. ಜೊತೆಗೆ ಅಗ್ನಿಕುಂಡ ಪ್ರವೇಶ ನಡೆಯಿತು. ತಾವರೆಕೆರೆ ಗ್ರಾಪಂ ಮಾಜಿ ಉಪಾಧ್ಯಕ್ಷ ಎಸ್.ಸುಧಾಕರ್, ಗ್ರಾಮದ ಮುಖಂಡರು ಹಾಗೂ ಅರ್ಚಕರು ಭಾಗವಹಿಸಿದ್ದರು.

ಕಾಳಿಕಾದೇವಿಗೆ ವಿಶೇಷ ಪೂಜೆ

• **ತಾವರೆಕೆರೆ:** ಹೊಸಕೋಟೆ ತಾಲೂಕಿನ ಭಕ್ತರಹಳ್ಳಿ ಗ್ರಾಮದಲ್ಲಿ ನೆಲೆಸಿರುವ ಶ್ರೀ ತ್ರಿಶೂಲ ಪವಾಡ ಕಾಳಿಕಾದೇವಿ ಶಕ್ತಿ ಪೀಠದಲ್ಲಿ ಅಮಾವಾಸ್ಯೆ ಪ್ರಯುಕ್ತ ವಿಶೇಷ ಪೂಜೆ ಹಾಗೂ ದೇವಿಗೆ ಬಲಿದಾನ ಅಭಿಷೇಕ, ದೇವಾಲಯದ ಪೀಠಾಧಿಪತಿ ಶ್ರೀ ರವಿಕುಮಾರ್ ಸ್ವಾಮೀಜಿಗಳ ನೇತೃತ್ವದಲ್ಲಿ ಪೂಜಾ ಕೈಂಕರ್ಯಗಳು ಜರುಗಿದವು.

ಪೂಜಾ ಕಾರ್ಯಕ್ರಮ ಉದ್ದೇಶಿಸಿ ಶ್ರೀ ರವಿಕುಮಾರ್ ಸ್ವಾಮೀಜಿ ಮಾತನಾಡಿ, ಅಮಾವಾಸ್ಯೆ ದಿನವು ದೇವಿ ಆರಾಧನೆಗೆ ಅತ್ಯಂತ ಪವಿತ್ರವಾದ ದಿನವಾಗಿದ್ದು, ಈ ದಿನ ಭಕ್ತಿಯಿಂದ ತಾಯಿಯನ್ನು ಆರಾಧಿಸಿದರೆ ಜೀವನದಲ್ಲಿನ ಸಂಕಷ್ಟಗಳು ನಿವಾರಣೆಯಾಗುತ್ತವೆ ಎಂದು ಹೇಳಿದರು. ಶ್ರೀ ತ್ರಿಶೂಲ ಪವಾಡ ಕಾಳಿಕಾ ದೇವಿಯು ಭಕ್ತರ ಕಷ್ಟಗಳಿಗೆ ಸ್ಪಂದಿಸುವ ಜಾಗೃತ ದೇವತೆಯಾಗಿದ್ದು, ನಂಬಿಕೆ ಮತ್ತು ಭಕ್ತಿಯಿಂದ ಪ್ರಾರ್ಥನೆ ಸಲ್ಲಿಸುವವರಿಗೆ ತಾಯಿ ಕೃಪೆ ಸದಾ ದೊರೆಯುತ್ತದೆ. ಅಮಾವಾಸ್ಯೆ ಅಂಗವಾಗಿ ದೇವಿಗೆ ವಿಶೇಷ ಅಭಿಷೇಕ, ಅಲಂಕಾರ, ಪೂಜೆ ಹಾಗೂ ಸಂಪ್ರದಾಯಬದ್ಧವಾಗಿ ಬಲಿ ಸಮರ್ಪಣೆ ನಡೆಸಲಾಗಿದ್ದು, ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದು ಆಶೀರ್ವಾದ ಪಡೆದಿದ್ದಾರೆ ಎಂದರು.

ರಾಜ್ಯ ಹಾಗೂ ಹೊರರಾಜ್ಯಗಳಿಂದ ಆಗಮಿಸಿದ ಭಕ್ತರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇದು ದೇವಿಯ ಮಹಿಮೆಗೆ ಸಾಕ್ಷಿಯಾಗಿದೆ. ದೇವಾಲಯಕ್ಕೆ ಬರುವ ಪ್ರತಿಯೊಬ್ಬ ಭಕ್ತರಿಗೂ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದ್ದು, ಎಲ್ಲರೂ ಶಾಂತಿ, ಸೌಹಾರ್ದತೆ ಮತ್ತು ಭಕ್ತಿಭಾವದಿಂದ ಪೂಜೆಯಲ್ಲಿ ಭಾಗವಹಿಸುವುದು ಸಂತಸದ ಸಂಗತಿ ಎಂದು ಹೇಳಿದರು.

ಇದೇ ವೇಳೆ ಸಮಾಜದಲ್ಲಿ ಧರ್ಮ, ಸಂಸ್ಕೃತಿ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಇಂತಹ ಧಾರ್ಮಿಕ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ. ದೇವಿಯ ಕೃಪೆಯಿಂದ ರಾಜ್ಯದಲ್ಲಿ ಸುಖ, ಶಾಂತಿ, ಉತ್ತಮ ಮಳೆ, ಸಮೃದ್ಧ ಬೆಳೆ ಹಾಗೂ ಜನರ ಆರೋಗ್ಯ ವೃದ್ಧಿಯಾಗಲಿ ಎಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಗಿದೆ ಎಂದು ರವಿಕುಮಾರ್ ಸ್ವಾಮಿಗಳು ತಿಳಿಸಿದರು.

ಕಾರ್ಯಕ್ರಮಕ್ಕೆ ರಾಜ್ಯದ ವಿವಿಧ ಭಾಗಗಳು ಹಾಗೂ ನೆರೆಯ ರಾಜ್ಯಗಳಿಂದ ಆಗಮಿಸಿದ್ದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು.

» ಭಕ್ತರ ಸಂಖ್ಯೆ ಏರಿಕೆ

» ದೇವಿಯ ಮಹಿಮೆ ಅಪಾರ: ರವಿಕುಮಾರ್ ಸ್ವಾಮೀಜಿಗಳು

ಬೆಸ್ಕಾಂ ಖಾಸಗೀಕರಣವಾಗಲು ಬಿಡಲ್ಲ

• **ದೊಡ್ಡಬಳ್ಳಾಪುರ:** ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಬೆಸ್ಕಾಂ ಅನ್ನು ಖಾಸಗೀಕರಣದ ಹೆಸರಿನಲ್ಲಿ ಟಾಟಾ ಪವರ್ ಕಂಪನಿ ಪಡೆಯಲು ಮುಂದಾಗಿದ್ದು ಇದನ್ನು ದೊಡ್ಡಬಳ್ಳಾಪುರ ಬೆಸ್ಕಾಂ ಸಿಬ್ಬಂದಿ ವರ್ಗ ಖಂಡಿಸಿ ಪ್ರತಿಭಟನಾ ಸಭೆ ನಡೆಸುತ್ತಿರುವುದಾಗಿ ಕಾರ್ಯನಿರ್ವಾಹಕ ಇಂಜಿನಿಯರ್ ಚಂದ್ರಶೇಖರ್ ತಿಳಿಸಿದರು.

ನಗರದ ಬೆಸ್ಕಾಂ ಕಚೇರಿ ಆವರಣದಲ್ಲಿ ಖಾಸಗೀಕರಣ ವಿರೋಧಿಸಿ ನಡೆದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಬೆಸ್ಕಾಂ ಹಲವಾರು ವರ್ಷಗಳಿಂದ ಸಾರ್ವಜನಿಕರಿಗೆ ವಿದ್ಯುತ್ ಸರಬರಾಜು ಮಾಡುವ ಸೇವೆ ಮಾಡುತ್ತಿದೆ, ಆದರೆ ಇಂದು ಏಕಾಏಕಿ ಖಾಸಗಿ ಕಂಪನಿಗಳು ನಮ್ಮ ವಿದ್ಯುತ್ ಸರಬರಾಜು ಕಂಪನಿಯನ್ನು ಕಸಿದುಕೊಂಡು ಸಂಪೂರ್ಣ ಬ್ಯುಸಿನೆಸ್ ಮಾಡಲು ಹೊರಟಿದ್ದಾರೆ. ಸಾರ್ವಜನಿಕ ಸೇವೆಯಾಗಿದ್ದ ವಿದ್ಯುತ್ ಸರಬರಾಜು ಖಾಸಗಿ ಕಂಪನಿಗಳ ಪಾಲಾದರೆ ಸಂಪೂರ್ಣ ವ್ಯವಹಾರಿಕವಾಗಿ ರೈತರಿಗೆ, ಸಾರ್ವಜನಿಕರಿಗೆ ತೊಂದರೆ ಉಂಟಾಗುವುದು ಎಂದರು. ಸಾರ್ವಜನಿಕರಿಗೆ ಸದಾ ಸ್ನೇಹಿತನಾಗಿ ವಿದ್ಯುತ್ ಸರಬರಾಜು ನೀಡುತ್ತಿರುವ ಬೆಸ್ಕಾಂ ಕಂಪನಿಯು ಖಾಸಗೀಕರಣವಾದರೆ ರೈತರಿಗೆ, ಸಾರ್ವಜನಿಕರಿಗೆ ಉಂಟಾಗುವ ತೊಂದರೆಗಳ ಬಗ್ಗೆ ಅರಿವು ಮೂಡಿಸುವಂತೆ ಸಿಬ್ಬಂದಿಗೆ ಮನವಿ ಮಾಡಿದರು

ಕರುನಾಡು ರಾಷ್ಟ್ರೀಯ ಸೇನೆ ರಾಜ್ಯಾಧ್ಯಕ್ಷ ಬಿ.ಶಿವಶಂಕರ್ ಮಾತನಾಡಿ, ರಾಜಕೀಯ ನಾಯಕರು ವಿಮಾನ, ರಸ್ತೆ, ಆಸ್ಪತ್ರೆ, ಶಾಲೆಗಳು ಹೀಗೆ ಎಲ್ಲಾ ಸಾರ್ವಜನಿಕ ವಲಯಗಳನ್ನು ಖಾಸಗೀಕರಣ ಮಾಡಿ ಲೂಟಿ ಮಾಡಿದರು, ಈಗ ಸಾರ್ವಜನಿಕರಿಗೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುವ ಮೂಲಕ ಸೇವೆ ಸಲ್ಲಿಸುತ್ತಿರುವ ಬೆಸ್ಕಾಂ ಅನ್ನು ಖಾಸಗೀಕರಣ ಮಾಡಲು ಹೊರಟಿದ್ದಾರೆ.

ಜನ ಮನ್ನಣೆ ಪಡೆದಿರುವ ಇಂತಹ ವಿದ್ಯುತ್ ಸರಬರಾಜು ಕಂಪನಿಯನ್ನು ಟಾಟಾ ಪವರ್ ಎಂಬ ಕಂಪನಿಯು ಪಡೆಯಲು ಮುಂದಾಗಿದ್ದು, ಬೆಸ್ಕಾಂ ನಂತಹ ಸಾರ್ವಜನಿಕ ಸೇವೆ ಒದಗಿಸುವ ಕಂಪನಿಗಳು ಖಾಸಗಿ ಕಂಪನಿಯವರ ಸ್ವತ್ತಾದರೆ ಸದಾ ಲಾಭ ಗಳಿಸುವ ಬಗ್ಗೆ ಚಿಂತನೆ ನಡೆಸುವ ಕಂಪನಿಗಳಿಂದ ಸೇವೆ ಒದಗಿಸುವ ಮಾತೆಲ್ಲಿ, ಹಾಗಾಗಿ ಯಾವುದೇ ಕಾರಣಕ್ಕೂ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಖಾಸಗೀಕರಣವಾಗಲು ಬಿಡುವುದಿಲ್ಲ ಎಂದರು. ಪ್ರತಿಭಟನೆಯಲ್ಲಿ ಕಾರ್ಯನಿರ್ವಾಹಕ ಇಂಜಿನಿಯರ್ ಚಂದ್ರಶೇಖರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮಂಜುನಾಥ್ (ಗ್ರಾಮೀಣ), ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ವಿನಯ ಕುಮಾರ್ (ನಗರ ಉಪ ವಿಭಾಗ), ಕರುನಾಡು ರಾಷ್ಟ್ರೀಯ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಬಿ.ಶಿವಶಂಕರ್, ವಿದ್ಯುತ್ ಗುತ್ತಿಗೆದಾರ ಸಂಘದ ಅಧ್ಯಕ್ಷ ಆನಂದ್, ಸಂಘಟನಾ ಕಾರ್ಯದರ್ಶಿ ಲೋಕೇಶ್ ನಾಯಕ್, ಕೇಂದ್ರ ಕಾರ್ಯ ಸಮಿತಿ ಸದಸ್ಯ ಮುತ್ತುರಾಜ್ ಸೇರಿದಂತೆ ಹಲವು ಪ್ರಮುಖರು, ಬೆಸ್ಕಾಂ ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ಲಾಭಕ್ಕಾಗಿ ಸಾರ್ವಜನಿಕರಿಗೆ ತೊಂದರೆ

ಬೆಸ್ಕಾಂ ಸಿಬ್ಬಂದಿಗಳಾದ ನಾವು ಇಷ್ಟು ವರ್ಷ ಸಾರ್ವಜನಿಕ ಸೇವೆಯಲ್ಲಿ ಲಾಭ ನಷ್ಟಗಳನ್ನು ಲೆಕ್ಕಿಸದೆ ನಿರಂತರ ಸೇವೆ ಒದಗಿಸುತ್ತಾ ಬಂದಿದ್ದೇವೆ, ಆದರೆ ಈ ವಲಯಕ್ಕೂ ಈಗ ಖಾಸಗಿ ಕಂಪನಿಗಳು ಲಗ್ಗೆ ಇಟ್ಟಿವೆ. ಒಂದು ವೇಳೆ ನಮ್ಮ ಬೆಸ್ಕಾಂ ಖಾಸಗಿ ಕಂಪನಿಗಳ ಪಾಲಾದರೆ ಕೇವಲ ಹಣ ಗಳಿಸುವ ಉದ್ದೇಶದಿಂದ ಬರುವ ಕಂಪನಿಗಳು ಲಾಭಕ್ಕಾಗಿ ಸಾರ್ವಜನಿಕರನ್ನು ಇಲ್ಲಸಲ್ಲದ ನೆಪವೇಳಿ ತೊಂದರೆ ಕೊಡುತ್ತವೆ ಎಂಬುವುದರಲ್ಲಿ ಯಾವುದೇ ಸಂದೇಹವಿಲ್ಲ ಎಂದು ಚಂದ್ರಶೇಖರ್ ಹೇಳಿದರು.

ಕೋಚ್‌ಗಳಿಂದ ಉತ್ತಮ ತರಬೇತಿ

• **ಆನೇಕಲ್:** ಅಂತಾರಾಷ್ಟ್ರೀಯ ಗುಣಮಟ್ಟದಲ್ಲಿ ರೆಸಿಡೆನ್ಷಿಯಲ್ ಫುಟ್ಬಾಲ್ ಕ್ಲಬ್ ನಿರ್ಮಾಣ ಮಾಡಲಾಗಿದ್ದು ರಾಷ್ಟ್ರೀಯ ಮಟ್ಟದ ಕೋಚ್‌ಗಳು ಮಕ್ಕಳಿಗೆ ಫುಟ್ಬಾಲ್ ತರಬೇತಿ ನೀಡಲಿದ್ದಾರೆ ಎಂದು ಕ್ಲಬ್‌ನ ಸಂಸ್ಥಾಪಕ ಅಧ್ಯಕ್ಷ ರಾಮಕೃಷ್ಣನ್ ದೇವರಾಜ್ ತಿಳಿಸಿದರು.

ತಾಲೂಕಿನ ತಿರುಮಗೊಂಡನಹಳ್ಳಿ ಸಮೀಪ ಬೆಂಗಳೂರು ಸೂಪರ್ ಸ್ಟ್ರೈಕರ್ಸ್ ಫುಟ್ಬಾಲ್ ಕ್ಲಬ್‌ಗೆ ಭಾನುವಾರ ಅಧಿಕೃತವಾಗಿ ಚಾಲನೆ ನೀಡಿ ಮಾತನಾಡಿದ ಅವರು, ಬೆಂಗಳೂರಿಗೆ ಹೊಂದಿಕೊಂಡಿರುವ ಚಂದಾಪುರದ ತಿರುಮಗೊಂಡನಹಳ್ಳಿ ಬಳಿ ನಾಲ್ಕು ಎಕರೆ ಪ್ರದೇಶದಲ್ಲಿ ಬೆಂಗಳೂರು ಸೂಪರ್ ಸ್ಟ್ರೈಕರ್ಸ್ ಫುಟ್ಬಾಲ್ ಕ್ಲಬ್‌ನ ಮೈದಾನ ನಿರ್ಮಾಣವಾಗಿದ್ದು ಸೆಂಟರ್ ಆಫ್ ಎಕ್ಸಲೆನ್ಸ್ ಧ್ಯೇಯವಾಕ್ಯದೊಂದಿಗೆ ಮಕ್ಕಳಿಗೆ ಅಂತಾರಾಷ್ಟ್ರೀಯ ಮಟ್ಟದ ತರಬೇತಿ ನೀಡಲಾಗುವುದು. ಇನ್ನು ಇದೇ ಮೊದಲ ಬಾರಿಗೆ ಫುಟ್ ಬಾಲ್ ಕ್ರೀಡಾಪಟುಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಿ ವಿದ್ಯಾಭ್ಯಾಸದ ಜೊತೆ ಜೊತೆಗೆ ಫುಟ್ಬಾಲ್ ತರಬೇತಿ ನೀಡಲಾಗುತ್ತಿದೆ. ಪಾಂಡಿಚೇರಿ, ಚೆನ್ನೈ ಹಾಗೂ ಬೆಂಗಳೂರಿನಲ್ಲಿ ನಮ್ಮ ಕ್ಲಬ್‌ನ 500ಕ್ಕೂ ಹೆಚ್ಚು ಮಕ್ಕಳು ಫುಟ್ಬಾಲ್ ತರಬೇತಿ ಪಡೆಯುತ್ತಿದ್ದು, ಅಂತಾರಾಷ್ಟ್ರೀಯ ಮಟ್ಟದ ಕೋಚ್‌ಗಳು ಉತ್ತಮ ತರಬೇತಿ ನೀಡುತ್ತಿದ್ದಾರೆ. 2034ರ ಒಳಗಾಗಿ ಭಾರತ ತಂಡ ವಿಶ್ವಕಪ್ ಫುಟ್ಬಾಲ್ ನಲ್ಲಿ ಭಾಗವಹಿಸುವ ನಿಟ್ಟಿನಲ್ಲಿ ಮಕ್ಕಳಿಗೆ ಕಠಿಣ ತರಬೇತಿ ನೀಡಿ ಭಾರತ ವಿಶ್ವಕಪ್ ಗೆಲ್ಲಲು ಶ್ರಮ ವಹಿಸಲಾಗುವುದು ಎಂದರು.

ಶ್ರೀಕ್ಷೇತ್ರದ ವಿರುದ್ಧ ಪಿತೂರಿ: ಪ್ರಕಾಶ್ ರಾಜ್ ಸೆರೆಗೆ ಆಗ್ರಹ

• **ಮಂಡ್ಯ:** ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಧರ್ಮಸ್ಥಳ ವಿರುದ್ಧ ಷಡ್ಯಂತ್ರ ರೂಪಿಸಿ, ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಜೈಲಿಗೆ ಕಳುಹಿಸಲು ಪಿತೂರಿ ನಡೆಸಿದ್ದ ಬಹುಭಾಷಾ ನಟ ಪ್ರಕಾಶ್ ರಾಜ್ ಬಂಧನಕ್ಕೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಜಿಲ್ಲಾ ಬಿಜೆಪಿ ವಕ್ತಾರ ಸಿ.ಟಿ. ಮಂಜುನಾಥ್ ನೇತೃತ್ವದಲ್ಲಿ ಎಸ್ಪಿ ಕಚೇರಿ ಎದುರು ಜಮಾವಣೆಗೊಂಡ ಬಿಜೆಪಿ ಕಾರ್ಯಕರ್ತರು, ಪ್ರಕಾಶ್ ರಾಜ್ ಹಾಗೂ ಪ್ರೊ.ಭಗವಾನ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಧರ್ಮಸ್ಥಳದ ವಿರುದ್ಧ ಸಂಚು ರೂಪಿಸಲು ಪ್ರಕಾಶ್ ರಾಜ್‌ಗೆ ಕೇರಳ ಮೂಲದಿಂದ 200 ಕೋಟಿ ರೂ. ಹಣ ಹರಿದುಬಂದಿದೆ. 200 ಕೋಟಿ ಷಡ್ಯಂತ್ರದ ಬಗ್ಗೆ ಬುರುಡೆ ಚಿನ್ನಯ್ಯ ಬಹಿರಂಗಪಡಿಸಿದ್ದಾನೆ. ಹಿಂದುಗಳ ಭಕ್ತಿಭಾವದ ಧರ್ಮಸ್ಥಳ ಕ್ಷೇತ್ರದ ಬಗ್ಗೆ ಬುರುಡೆ ಪ್ಲ್ಯಾನ್ ಮಾಡು ಕೇಳಿ ಹಿಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಎಸ್‌ಐಟಿ ರಚಿಸಿ ತನಿಖೆ ನಡೆಸಿದರೂ ಯಾವುದೇ ಕುರುಹುಗಳು ಪತ್ತೆಯಾಗಿಲ್ಲ, ಧಾರ್ಮಿಕ ಕ್ಷೇತ್ರದ ಮೇಲೆ ಅಂತಾರಾಷ್ಟ್ರೀಯ ಷಡ್ಯಂತ್ರ ನಡೆಯುತ್ತಿದೆ. ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆ ಅವರನ್ನು ಜೈಲಿಗೆ ಕಳುಹಿಸಲು ಪಿತೂರಿ ನಡೆಯುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರ ಸಮಗ್ರ ತನಿಖೆ ಮಾಡಿ ಕಿಡಿಗೇಡಿಗಳಿಗೆ ತಕ್ಕ ಶಿಕ್ಷೆ ಕೊಡಿಸಬೇಕು. ಈ ಪ್ರಕರಣವನ್ನು ಸರ್ಕಾರ ಸಿಬಿಐ ತನಿಖೆಗೆ ವಹಿಸುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಮನವಿ ಸಲ್ಲಿಸಿದರು.

ಬಿಜೆಪಿ ನಗರಾಧ್ಯಕ್ಷ ಪ್ರಸನ್ನಕುಮಾರ್, ಜಿಲ್ಲಾ ಕಾರ್ಯದರ್ಶಿ ವಿವೇಕ್, ಮುಖಂಡರಾದ ನಿತ್ಯಾನಂದ, ಹೊಸಹಳ್ಳಿ ಶಿವು, ನಾಗಾನಂದ್, ಗಣೇಶ್, ಶಿವಲಿಂಗಯ್ಯ. ಸೇರಿದಂತೆ ಇತರರಿದ್ದರು.

ಆರ್‌ಟಿಒ ಅಧಿಕಾರಿ ನಾಗೇಶ್ ಕುಮಾರ್ ಅಭಿಮತ

ಮಕ್ಕಳ ಬೆಳವಣಿಗೆಗೆ ಶಿಕ್ಷಕರ, ಪೋಷಕರ ಹೊಣೆ

• **ದಾಬಸ್‌ಪೇಟೆ:** ಇಂದಿನ ಮಕ್ಕಳೆ ನಾಳಿನ ಪ್ರಜೆಗಳಾಗುವುದರಿಂದ ಈ ಮಕ್ಕಳ ಸರ್ವತೋಮುಖ ಬೆಳವಣಿಗೆಯನ್ನು ಅರ್ಥಪೂರ್ಣವಾಗಿ ಬೆಳೆಸುವ ಹೊಣೆಗಾರಿಕೆ ಶಿಕ್ಷಕರು ಮತ್ತು ಪೋಷಕರದ್ದಾಗಿದೆ ಎಂದು ಸಾರಿಗೆ ಇಲಾಖೆಯ ನಾಗೇಶ್ ಕುಮಾರ್ ತಿಳಿಸಿದರು.

ನೆಲಮಂಗಲ ತಾಲೂಕಿನ ಸೋಂಪುರ ಹೋಬಳಿ ಮರಳಕುಂಟೆ ಸರಕಾರಿ ಪ್ರಾಥಮಿಕ ಶಾಲೆಯ ಮಕ್ಕಳು ಸೇರಿದಂತೆ ಕ್ಲಸ್ಟರ್‌ನ 10 ಶಾಲೆಯ ಮಕ್ಕಳಿಗೆ ಟ್ರ್ಯಾಕ್ ಸೂಟ್ ಬಟ್ಟೆಗಳನ್ನು ವಿತರಿಸಿ ಮಾತನಾಡಿದರು. ಸೋಂಪುರ ರೋಟರಿ ಕ್ಲಬ್‌ನ ಅಧ್ಯಕ್ಷ ದೇವರಾಜು ಮಾತನಾಡಿ, ಮಕ್ಕಳು ಕೆಲವು ನಿಯಮಗಳಾದ ಶಿಸ್ತನ್ನೇ ಜೀವನದ ಅವಿಭಾಜ್ಯವಾಗಬೇಕು, ಪ್ರಾಮಾಣಿಕತೆ ಮತ್ತು ಶಿಸ್ತು ಪಾಲಿಸಬೇಕು, ಸಮಯದ ಮಹತ್ವ ಅರಿತುಕೊಳ್ಳಬೇಕು, ಹಿರಿಯರಿಗೆ ಗೌರವ ನೀಡಬೇಕು, ಸ್ವಚ್ಛತೆ ಕಾಪಾಡಿಕೊಳ್ಳುವುದು, ಕಠಿಣ ಪರಿಶ್ರಮ ಪಡಬೇಕು, ಸಹಾಯ ಮಾಡುವ ಗುಣವನ್ನು ಬೆಳೆಸಿಕೊಳ್ಳಬೇಕು, ಸಾಧಿಸುವ ಆತ್ಮವಿಶ್ವಾಸ ಹೊಂದಿರಬೇಕು, ಒಳ್ಳೆಯ ಸ್ನೇಹಿತರನ್ನು ಆರಿಸಿಕೊಳ್ಳಬೇಕು ಜೊತೆಗೆ ದೇಶಪ್ರೇಮ ಮತ್ತು ಸಾಮಾಜಿಕ ಜವಾಬ್ದಾರಿ ಬೆಳೆಸಿಕೊಳ್ಳಬೇಕು ಎಂದು ಮಕ್ಕಳಿಗೆ ತಿಳಿಸಿದರು. ಎಸ್‌ಡಿಎಂಸಿ ಅಧ್ಯಕ್ಷ ಶಂಕರ್ ಮಾತನಾಡಿ, ಶಾಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಿದ್ದು ಮತ್ತೊಬ್ಬ ಶಿಕ್ಷಕರನ್ನು ಶಾಲೆಗೆ ನೀಡಿ ಎಂದು ಅಧಿಕಾರಿಗಳಿಗೆ ಮನವಿ ಮಾಡಿದರು. ಎಸ್‌ಡಿಎಂಸಿ ಸದಸ್ಯ ಶ್ರೀನಾಥ್ ಮಾತನಾಡಿ, ಖಾಸಗಿ ಶಾಲೆಗಳು ಬಡ ಮತ್ತು ಮಧ್ಯಮ ವರ್ಗದ ಮಕ್ಕಳಿಗೆ ಕೈಗೆಟುಕದ ವಸ್ತುವಾಗಿದೆ. ಈಗ ಸರಕಾರಿ ಶಾಲೆಯಲ್ಲಿಯೇ ದ್ವಿಭಾಷಾ ಶಿಕ್ಷಣ ನೀಡುತ್ತಿದ್ದಾರೆ ಇದರ ಸದುಪಯೋಗ ಮಾಡಿಕೊಂಡು ಆರ್ಥಿಕ ಹೊರೆ ಕಡಿಮೆ ಮಾಡಿಕೊಳ್ಳಿ ಎಂದರು.

ಸೋಂಪುರ ರೋಟರಿ ಕ್ಲಬ್‌ನ ನಿಯೋಜಿತ ಅಧ್ಯಕ್ಷ ಶಶಿಧರ್ ಮುಂದಿನ ದಿನಗಳಲ್ಲಿ ಮರಳಕುಂಟೆ ಶಾಲೆಗೆ ಹೆಚ್ಚಿನ ಅನುಕೂಲ ಕಲ್ಪಿಸುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಮಕ್ಕಳ ಪೋಷಕರು, ಎಸ್‌ಡಿಎಂಸಿ ಸಮಿತಿ ಸದಸ್ಯರು ಗ್ರಾಮದ ಮುಖಂಡರು ಇದ್ದರು.

ಟ್ರ್ಯಾಕ್ ಸೂಟ್ ವಿತರಣೆ

ಕುಮಾರಿ ನಮ್ರತಾ ಮಕ್ಕಳಿಗೆ ಟ್ರ್ಯಾಕ್ ಸೂಟ್ ವಿತರಿಸಿದರು, ಗೋವಿಂದಪುರದ ಯುವ ಮುಖಂಡ ಪ್ರಕಾಶ್ ಮಕ್ಕಳಿಗೆ ಟೈ ಮತ್ತು ಬೆಲ್ಟ್ ವಿತರಿಸಿದರು.

ಗ್ರಾಮಸ್ಥರ ಕಣ್ಮನ ಸೆಳೆದ ನಾಟ್ಯ ಕಲಾ ಹೆಣ್ಣು ಮಕ್ಕಳ ನೃತ್ಯ

ಗ್ರಾಮಸ್ಥರ ಕಣ್ಮನ ಸೆಳೆದ ನೃತ್ಯೋತ್ಸವ

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

DIPR/BGM/RO-NO-428/KSMCA/2026-27

ಇ-ಖಾತಾ ತಿದ್ದುಪಡಿ ಉಪ ಆಯುಕ್ತರ ಹೊಣೆಗಾರಿಕೆ

ಬೆಂಗಳೂರು: ನಗರದಲ್ಲಿ ಇ-ಖಾತಾ ತಿದ್ದುಪಡಿಯ ಜವಾಬ್ದಾರಿಯನ್ನು ಪಾಲಿಕೆಗಳ ಉಪ ಆಯುಕ್ತರಿಗೆ ನೀಡಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ) ನಿರ್ಧರಿಸಿದ್ದು, ಈ ಸಂಬಂಧ ಉಪ ಆಯುಕ್ತರಿಗೆ ಜವಾಬ್ದಾರಿ ವಹಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪಾಲಿಕೆಗಳಿಗೆ ಸೂಚಿಸಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ಕಂದಾಯ ವಿಭಾಗಕ್ಕೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ವಲಯ ಜಂಟಿ ಆಯುಕ್ತರಿಗೆ ಇ-ಖಾತಾದಲ್ಲಿ ತಿದ್ದುಪಡಿ ಮಾಡುವ ಜವಾಬ್ದಾರಿಯನ್ನು ನೀಡಲಾಗಿತ್ತು. ಅವರ ಕಾರ್ಯ ವ್ಯಾಪ್ತಿ ಹೆಚ್ಚಿರುವ ಕಾರಣ, ಆ ಜವಾಬ್ದಾರಿಯನ್ನು ಆಯಾ ವಲಯದ ಉಪ ಆಯುಕ್ತರಿಗೆ ವಹಿಸಲು ಸೂಚನೆ ನೀಡಿದ್ದಾರೆ. ವಿಶೇಷ ಅಭಿಯಾನದ ರೂಪದಲ್ಲಿ ಬಾಕಿ ಇರುವ ಎಲ್ಲಾ ತಿದ್ದುಪಡಿ ಹಾಗೂ ದೂರುಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದಾರೆ.

ಇ-ಖಾತಾಗೆ ಸಂಬಂಧಿಸಿದಂತೆ ಖಾತಾ ಬದಲಾವಣೆ, ಮಾಲೀಕರ ಹೆಸರಿನ ತಿದ್ದುಪಡಿ ಹಾಗೂ ಇತರ ವಿವರಗಳ ತಿದ್ದುಪಡಿ ಕುರಿತಾಗಿ ಸಾರ್ವಜನಿಕರಿಂದ ಹೆಚ್ಚಿನ ಸಂಖ್ಯೆಯಲ್ಲಿ ದೂರುಗಳು ಬಂದಿವೆ. ಈ ಹಿನ್ನೆಲೆಯಲ್ಲಿ ತಿದ್ದುಪಡಿ ಮಾಡ್ಯೂಲ್ ಅನ್ನು ಇನ್ನಷ್ಟು ವೇಗಗೊಳಿಸಿ, ಸಂಬಂಧಿಸಿದ ಇ-ಖಾತಾಗಳನ್ನು ಶೀಘ್ರದಲ್ಲಿ ವಿತರಿಸುವುದರ ಜೊತೆಗೆ ದೂರುಗಳ ತ್ವರಿತ ನಿವಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಿಳಿಸಿದ್ದಾರೆ. ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಆಸ್ತಿ ತೆರಿಗೆ ವ್ಯಾಪ್ತಿಯಿಂದ ಹೊರಗುಳಿದಿರುವ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತರಲು ಕ್ರಮ ಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಹೊಸ ಖಾತೆಗಾಗಿ ಸಲ್ಲಿಸಿರುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿ ತೆರಿಗೆ ವ್ಯಾಪ್ತಿಗೆ ತರಬೇಕು. ಜೊತೆಗೆ ಬಿ-ಖಾತಾದಿಂದ ಎ-ಖಾತಾಗೆ ಬದಲಾವಣೆಗಾಗಿ ಬಂದಿರುವ ಅರ್ಜಿಗಳನ್ನು ಸಹ ಕಾಲಮಿತಿಯೊಳಗೆ ವಿಲೇವಾರಿ ಮಾಡಿ ಎಂದು ನಿರ್ದೇಶನ ನೀಡಿದ್ದಾರೆ.

ಸಭೆಯಲ್ಲಿ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

> **ಇ-ಖಾತಾ ವ್ಯವಸ್ಥೆಯನ್ನು ಇನ್ನಷ್ಟು ಸರಳೀಕರಿಸಲು ಹಾಗೂ ಸಾರ್ವಜನಿಕರಿಗೆ ಸುಲಭ ಸೇವೆ ಒದಗಿಸುವ ಉದ್ದೇಶದಿಂದ ಪ್ರತಿ ನಗರ ಪಾಲಿಕೆಯ ಕಾರ್ಯವೈಖರಿಯನ್ನು ಸಮಗ್ರವಾಗಿ ಪರಿಶೀಲಿಸಲಾಗಿದ್ದು, ಸಾಫ್ಟ್‌ವೇರ್‌ನಲ್ಲಿ ಅಗತ್ಯ ಬದಲಾವಣೆಗಳನ್ನು ತರಲು ಸೂಚನೆ ನೀಡಲಾಗಿದೆ.**
>
> ■ **ಮಹೇಶ್ವರ್ ರಾವ್,** ಜಿಬಿಎ ಮುಖ್ಯ ಆಯುಕ್ತ

» **ಪಾಲಿಕೆಗಳಿಗೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ**

ಆಸ್ತಿ ತೆರಿಗೆ ಸಂಗ್ರಹದಲ್ಲಿ ಸಾಧನೆ

ನಗರದಲ್ಲಿ ಇ-ಖಾತಾ ಹಾಗೂ ಆಸ್ತಿ ತೆರಿಗೆ ಸಂಗ್ರಹಣೆಗೆ ಸಂಬಂಧಿಸಿದಂತೆ ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಜೂನ್ 15 ರವರೆಗೆ 3,000 ಕೋಟಿ ರೂ. ಆಸ್ತಿ ತೆರಿಗೆ ಸಂಗ್ರಹವಾಗಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಸುಮಾರು 2,800 ಕೋಟಿ ರೂ. ಸಂಗ್ರಹಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಈ ವರ್ಷ ಆಸ್ತಿ ತೆರಿಗೆ ಸಂಗ್ರಹದಲ್ಲಿ ಗಣನೀಯ ಏರಿಕೆ ಕಂಡುಬಂದಿದೆ.ಮತ್ತಷ್ಟು ಪರಿಣಾಮಕಾರಿಯಾಗಿ ಆಸ್ತಿ ತೆರಿಗೆ ಸಂಗ್ರಹಿಸಲು ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಜಾಗೃತಿ ದಿನಾಚರಣೆ

ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸೋಮವಾರ ಬೆಂಗಳೂರು ನಗರ ಪೊಲೀಸ್ ಮತ್ತು ನೈಟಿಂಗೇಲ್ಸ್ ಮೆಡಿಕಲ್ ಟ್ರಸ್ಟ್ ವತಿಯಿಂದ ವಿಶ್ವ ಹಿರಿಯರ ಮೇಲಿನ ದೌರ್ಜನ್ಯ ಜಾಗೃತಿ ದಿನಾಚರಣೆ ಕಾರ್ಯಕ್ರಮ ನಡೆಯಿತು. ಈ ವೇಳೆ ಜಂಟಿ ಪೊಲೀಸ್ ಆಯುಕ್ತ ಬಿ. ರಮೇಶ್, ವಿಶೇಷಚೇತನ ಮತ್ತು ಹಿರಿಯ ನಾಗರೀಕರು ಸಬಲೀಕರಣ ನಿರ್ದೇಶನಾಲಯದ ಜಂಟಿ ನಿರ್ದೇಶಕ ಶ್ರೀನಿವಾಸ್ ವೈ. ಸೇರಿದಂತೆ ಇತರರಿದ್ದರು.

ಕಿರುಸುದ್ದಿ

ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಶಿಶು ಅಭಿವೃದ್ಧಿ ಬೆಂಗಳೂರು ರಾಜ್ಯ ಯೋಜನೆಯ ಅಡಿಯಲ್ಲಿ, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿರುವ ಅಂಗನವಾಡಿ ಕೇಂದ್ರಗಳ ಖಾಲಿ ಹುದ್ದೆಗಳ ಭರ್ತಿಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ. ಒಟ್ಟು 19 ಅಂಗನವಾಡಿ ಕಾರ್ಯಕರ್ತೆಯರು ಮತ್ತು 56 ಸಹಾಯಕಿಯರ ಹುದ್ದೆಗಳಿಗೆ ತಾತ್ಕಾಲಿಕವಾಗಿ ಆಯ್ಕೆಯಾಗಿರುವ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಈ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಆಕ್ಷೇಪಣೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್ ಶಾಶ್ವತ ಬಂದ್

ಬೆಂಗಳೂರು: ಎಲೇಕೆರೆ ಗ್ರಾಮದ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್ ಸಂಖ್ಯೆ 47 ಶಾಶ್ವತ ಬಂದ್ ಮಾಡಲಾಗುತ್ತದೆ ಎಂದು ನೈಋತ್ಯ ರೈಲ್ವೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಚನ್ನಪಟ್ಟಣ ರೈಲು ನಿಲ್ದಾಣದ ಸಮೀಪದ ಎಲೇಕೆರೆ ಗ್ರಾಮದಲ್ಲಿರುವ ರೈಲ್ವೆ ಲೆವೆಲ್ ಕ್ರಾಸಿಂಗ್ (ಎಲ್ಸಿ) ಗೇಟ್ ಸಂಖ್ಯೆ 47 (ಕಿ.ಮೀ. 55/200-300) ಅನ್ನು ಜೂ.18 ಸಂಜೆ 5 ಗಂಟೆಯಿಂದ ಶಾಶ್ವತವಾಗಿ ಮುಚ್ಚಲಾಗುವುದು. ಸಾರ್ವಜನಿಕರು ರಸ್ತೆ ಮೇಲ್ಸೇತುವೆಯ ಮಾರ್ಗವನ್ನು ಬಳಸುವಂತೆ ಮನವಿ ಮಾಡಿದೆ.

ಕಸದ ಲಾರಿ ಹರಿದು ಬೈಕ್ ಸವಾರ ಸಾವು

ಬೆಂಗಳೂರು: ಜಿಬಿಎ ಕಸದ ಲಾರಿ ಹರಿದು ದ್ವಿಚಕ್ರ ವಾಹನ ಸವಾರ ಮೃತಪಟ್ಟಿರುವ ಘಟನೆ ಸೋಮವಾರ ಮೈಸೂರು ರಸ್ತೆಯ ಸಿರ್ಸಿ ಸರ್ಕಲ್ ಬಳಿ ಸಂಭವಿಸಿದೆ. ಸತೀಶ್ (35) ಮೃತಪಟ್ಟ ಬೈಕ್ ಸವಾರ ಎಂದು ಗುರುತಿಸಲಾಗಿದೆ. ಸಹ ಸವಾರ ಪ್ರವೀಣ್ ಎಂಬಾತನಿಗೂ ಗಾಯಗಳಾಗಿದ್ದು, ಆತನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಮರಾಜಪೇಟೆ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಲಾರಿಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಬೆಂಗಳೂರು ಪಶ್ಚಿಮ ಸಂಚಾರ ವಿಭಾಗದ ಡಿಸಿಪಿ ಡಾ.ಅನೂಪ್ ಶೆಟ್ಟಿ ತಿಳಿಸಿದ್ದಾರೆ. ಟೆಂಟ್ ಹೌಸ್ ನಿರ್ಮಾಣ ಕೆಲಸ ಮಾಡಿಕೊಂಡಿದ್ದ ಸತೀಶ್ ಹಾಗೂ ಪ್ರವೀಣ್, ಗೋರಿಪಾಳ್ಯದಲ್ಲಿ ವಾಸವಿದ್ದರು. ಸೋಮವಾರ ಬೆಳಗ್ಗೆ 9.30ರ ಸುಮಾರಿಗೆ ಕೆಲಸಕ್ಕೆಂದು ದ್ವಿಚಕ್ರ ವಾಹನದ ಮೂಲಕ ಟೌನ್ ಹಾಲ್‌ನತ್ತ ತೆರಳುವಾಗ ಸಿರ್ಸಿ ಸರ್ಕಲ್ ಬಳಿ ಸಂಭವಿಸಿದ ಅಪಘಾತದಲ್ಲಿ ರಸ್ತೆ ಮೇಲೆ ಬಿದ್ದಿದ್ದಾರೆ. ಈ ವೇಳೆ ಸತೀಶ್ ಮೇಲೆ ಲಾರಿ ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮತ್ತೋರ್ವ ಸವಾರ ಪ್ರವೀಣ್ ಎಂಬಾತನಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮದ್ಯಪಾನ: ಸವಾರರಿಗೆ ದಂಡ

ಬೆಂಗಳೂರು: ಬೆಂಗಳೂರು ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಮದ್ಯಪಾನ ಮಾಡಿ ವಾಹನ ಚಲಾಯಿಸಿದ ಹಾಗೂ ಅತಿವೇಗವಾಗಿ ವಾಹನ ಚಲಾಯಿಸಿದ ವಾಹನ ಸವಾರರ ಮೇಲೆ ದಂಡ ವಿಧಿಸಿದ್ದಾರೆ. ಜೂ.8ರಿಂದ 14ರವರೆಗೆ ಸುಮಾರು 53 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ವಿಶೇಷ ಕಾರ್ಯಾಚರಣೆ ಕೈಗೊಂಡು, ಮದ್ಯಪಾನ ಮಾಡಿ ವಾಹನ ಚಲಾಯಿಸಿದ ಹಾಗೂ ಅತಿವೇಗವಾಗಿ ವಾಹನ ಚಲಾಯಿಸಿದ ವಾಹನ ಸವಾರರ ಮೇಲೆ ದಂಡ ವಿಧಿಸಿದ್ದಾರೆ. ಅದರಲ್ಲೂ ಅತಿವೇಗವಾಗಿ ವಾಹನ ಚಲಾಯಿಸಿದ 143 ಪ್ರಕರಣಗಳಿಂದ ಸುಮಾರು 1,44,000 ರೂ.ದಂಡ ಸಂಗ್ರಹಿಸಲಾಗಿದೆ. ಇದರೊಂದಿಗೆ 42,108 ವಾಹನ ಪರಿಶೀಲಿಸಿ ಅದರಲ್ಲಿ ಮದ್ಯಪಾನ ಮಾಡಿ ವಾಹನ ಚಲಾಯಿಸಿದಕ್ಕೆ ಸಂಬಂಧಿಸಿದಂತೆ 649 ಪ್ರಕರಣ ದಾಖಲಾಗಿದೆ.

ಲಂಕೇಶ್ ಪತ್ನಿ, ಲೇಖಕಿ ಇಂದಿರಾ ನಿಧನ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ದಿ. ಪಿ. ಲಂಕೇಶ್ ಪತ್ನಿ, ಲೇಖಕಿ ಇಂದಿರಾ ಲಂಕೇಶ್(84) ಅವರು ನಿಧನರಾಗಿದ್ದಾರೆ. ಸೋಮವಾರ ಬೆಳಗ್ಗೆ ಬೆಂಗಳೂರಿನ ರಾಜರಾಜೇಶ್ವರಿನಗರದಲ್ಲಿರುವ ತಮ್ಮ ನಿವಾಸದಲ್ಲಿ ಇಂದಿರಾ ಅವರು ಕೊನೆಯುಸಿರೆಳೆದಿದ್ದು, ಇಂದಿರಾ ಅವರು ಪುತ್ರಿ ಕವಿತಾ ಲಂಕೇಶ್(ಚಿತ್ರ ನಿರ್ದೇಶಕಿ) ಹಾಗೂ ಪುತ್ರ ಇಂದ್ರಜಿತ್ ಲಂಕೇಶ್(ನಿರ್ದೇಶಕ ಹಾಗೂ ಪತ್ರಕರ್ತ) ಸೇರಿದಂತೆ ಅಪಾರ ಬಂಧು-ಮಿತ್ರರು ಮತ್ತು ಅಭಿಮಾನಿ ಬಳಗವನ್ನು ಅಗಲಿದ್ದಾರೆ. ಇಂದಿರಾ ಲಂಕೇಶ್ ಅವರ ನಿಧನಕ್ಕೆ ಡಿಸಿಎಂ ಡಿ.ಕೆ ಶಿವಕುಮಾರ್ ಸಂತಾಪ ವ್ಯಕ್ತಪಡಿಸಿದ್ದು, ಪಿ.ಲಂಕೇಶ್ ಅವರ ಸಾಹಿತ್ಯ, ಮಾಧ್ಯಮ ಹಾಗೂ ಚಿತ್ರರಂಗದ ಸಾಧನೆಗೆ ಬೆನ್ನೆಲುಬಾಗಿದ್ದ ಅವರ ಧರ್ಮಪತ್ನಿ ಇಂದಿರಾ ಲಂಕೇಶ್ ಅವರ ನಿಧನದ ವಿಷಯ ತಿಳಿದು ಆಳವಾದ ದುಃಖವಾಗಿದೆ ಎಂದು ತಿಳಿಸಿದ್ದಾರೆ. ಮಾಜಿ ಸಿಎಂ ಸಿದ್ದರಾಮಯ್ಯ ಅವರು ಇಂದಿರಾ ಲಂಕೇಶ್ ಅವರ ಅಂತಿಮ ದರ್ಶನ ಪಡೆದು ಕುಟುಂಬಸ್ಥರಿಗೆ ಧೈರ್ಯ ತುಂಬಿದರು.



ವಿದ್ಯುತ್ ಪ್ರಸರಣ ಸಾಮರ್ಥ್ಯ ಶೇ.25ರಷ್ಟು ಹೆಚ್ಚಳಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಗೆ ಚಿಂತನೆ

ಕೆಪಿಟಿಸಿಎಲ್ ಆಧುನೀಕರಣಕ್ಕೆ ಮುನ್ನುಡಿ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ರಾಜ್ಯದ ವಿದ್ಯುತ್ ಪ್ರಸರಣ ಜಾಲದ ಆಧುನೀಕರಣದತ್ತ ಮಹತ್ವದ ಹೆಜ್ಜೆಯನ್ನಿಟ್ಟಿದೆ. ಕಡಿಮೆ ವೆಚ್ಚದಲ್ಲಿ ರಾಜ್ಯದ ವಿದ್ಯುತ್ ಪ್ರಸರಣ ಸಾಮರ್ಥ್ಯವನ್ನು ಶೇ.25ರಷ್ಟು ಹೆಚ್ಚಳ ಮಾಡುವ ನಿಟ್ಟಿನಲ್ಲಿ ಅತ್ಯಾಧುನಿಕ ತಂತ್ರಜ್ಞಾನ ಅಳವಡಿಕೆಗೆ ಮುಂದಾಗಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, ಯೋಜನೆಯ ಅನುಷ್ಠಾನಕ್ಕೆ ಕಾರ್ಯಾದೇಶ ಪತ್ರವನ್ನು ನೀಡಲಾಗಿದ್ದು, ಬೆಂಗಳೂರು ನಗರದ ಪುಟ್ಟೇನಹಳ್ಳಿ - ಸಹಕಾರ ನಗರ 220 ಕೆವಿ ವಿದ್ಯುತ್ ಪ್ರಸರಣ ಮಾರ್ಗದಲ್ಲಿ ಡೈನಾಮಿಕ್ ಲೈನ್ ರೇಟಿಂಗ್ (ಡಿಎಲ್ಆರ್) ಪ್ರಾಯೋಗಿಕ ಯೋಜನೆ ಅಳವಡಿಕೆಯನ್ನು ಆರಂಭಿಸಲಾಗಿದೆ. ಇದರಿಂದ ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿರುವ ದಕ್ಷಿಣ ಭಾರತದ ಮೊದಲ ರಾಜ್ಯ ವಿದ್ಯುತ್ ಪ್ರಸರಣ ನಿಗಮವಾಗಿ ಕೆಪಿಟಿಸಿಎಲ್ ಹೊರ ಹೊಮ್ಮಿದೆ ಎಂದರು.

ಈ ಯೋಜನೆಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಸಾಂಪ್ರದಾಯಿಕ ಸ್ಟಾಟಿಕ್ ಲೈನ್ ರೇಟಿಂಗ್ ವಿಧಾನದ ಬದಲಿಗೆ, ಐಒಟಿ ಸಂವೇದಕಗಳನ್ನು ಬಳಸಲಾಗುತ್ತಿದೆ. ಈ ಸಂವೇದಕಗಳು ತಾಪಮಾನ, ಗಾಳಿಯ ವೇಗ, ಸೌರ ವಿಕಿರಣ ಮತ್ತು ವಿದ್ಯುತ್ ತಂತಿಯ ಸ್ಥಿತಿಗತಿಯನ್ನು ನೈಜ ಸಮಯದಲ್ಲಿ ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತವೆ. ಈ ದತ್ತಾಂಶವು, ಹವಾಮಾನ ಪರಿಸ್ಥಿತಿಗನುಗುಣವಾಗಿ ವಿದ್ಯುತ್ ಹರಿವನ್ನು ಹೆಚ್ಚಿಸಲು ಗ್ರಿಡ್ ನಿರ್ವಾಹಕರಿಗೆ ಸಹಾಯ ಮಾಡುತ್ತದೆ. ರಾಜ್ಯದಲ್ಲಿನ ನಗರೀಕರಣ, ಎಲೆಕ್ಟ್ರಿಕ್ ವಾಹನಗಳ ಹೆಚ್ಚಳ, ಡೇಟಾ ಸೆಂಟರ್‌ಗಳು ಮತ್ತು ಎಐ-ಚಾಲಿತ ಕೈಗಾರಿಕೆಗಳಿಂದ ವಿದ್ಯುತ್ ಬೇಡಿಕೆ ತೀವ್ರವಾಗಿ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಈ ತಂತ್ರಜ್ಞಾನ ಅತ್ಯಂತ ಉಪಯುಕ್ತವಾಗಿದೆ ಎಂದು ತಿಳಿಸಿದರು. ಪುಟ್ಟೇನಹಳ್ಳಿ-ಸಹಕಾರನಗರ 220 ಕೆವಿ ಲೈನ್ ಅನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದ್ದು, ಇಲ್ಲಿನ ಫಲಿತಾಂಶಗಳ ಆಧಾರದ ಮೇಲೆ ಕೆಪಿಟಿಸಿಎಲ್ ರಾಜ್ಯದ ಇತರ ಹೆಚ್ಚಿನ ಬೇಡಿಕೆ ಮತ್ತು ನವೀಕರಿಸಬಹುದಾದ ಇಂಧನ ಮಾರ್ಗಗಳಿಗೆ ಈ ತಂತ್ರಜ್ಞಾನವನ್ನು ವಿಸ್ತರಿಸಲು ಯೋಜನೆ ರೂಪಿಸಿದೆ ಎಂದು ಸಚಿವ ಜಾರ್ಜ್ ತಿಳಿಸಿದ್ದಾರೆ.

> **ಕರ್ನಾಟಕವು ವಿದ್ಯುತ್ ವಲಯದಲ್ಲಿ ನವೀನ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವಲ್ಲಿ ದೇಶದಲ್ಲಿಯೇ ಮುಂಚೂಣಿಯಲ್ಲಿದೆ. ಪುಟ್ಟೇನಹಳ್ಳಿ-ಸಹಕಾರನಗರ ಕಾರಿಡಾರ್‌ನಲ್ಲಿ ಅಳವಡಿಸಲಾಗುತ್ತಿರುವ ಈ ಡೈನಾಮಿಕ್ ಲೈನ್ ರೇಟಿಂಗ್ ಯೋಜನೆಯು, ಲಭ್ಯವಿರುವ ಮೂಲಸೌಕರ್ಯಗಳನ್ನು ಸಮರ್ಥವಾಗಿ ಬಳಸಿಕೊಂಡು ವಿದ್ಯುತ್ ಜಾಲದ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಲಿದೆ.**
>
> ■ **ಕೆ.ಜೆ. ಜಾರ್ಜ್,** ಇಂಧನ ಸಚಿವ

> **ಡೈನಾಮಿಕ್ ಲೈನ್ ರೇಟಿಂಗ್ ವ್ಯವಸ್ಥೆಯಿಂದಾಗಿ, ದತ್ತಾಂಶ ಆಧಾರಿತ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ಪ್ರಸರಣ ಜಾಲದ ಕಾರ್ಯಾಚರಣೆಯ ದಕ್ಷತೆಯನ್ನು ಹೆಚ್ಚಿಸಲು ಮತ್ತು ರಾಜ್ಯದ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ನೆರವಾಗಲಿದೆ.**
>
> ■ **ಡಾ. ವಿ.ರಾಮ್ ಪ್ರಸಾತ್ ಮನೋಹರ್,** ಕೆಪಿಟಿಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ

ಏನಿದು ಲೈನ್ ರೇಟಿಂಗ್?

ಸ್ಟಾಟಿಕ್ ಲೈನ್ ರೇಟಿಂಗ್ ವಿಧಾನದಲ್ಲಿ ವಿದ್ಯುತ್ ತಂತಿಗಳು ಎಷ್ಟು ವಿದ್ಯುತ್ ಸಾಗಿಸಬಲ್ಲವು ಎಂದು ಲೆಕ್ಕ ಹಾಕುವಾಗ, ಇಂಜಿನಿಯರ್‌ಗಳು ಅತಿ ಹೆಚ್ಚು ಬಿಸಿಲು ಅಥವಾ ಗಾಳಿಯೇ ಇಲ್ಲದ ಪರಿಸ್ಥಿತಿಯನ್ನು ಮಾನದಂಡವಾಗಿಟ್ಟುಕೊಂಡಿರುತ್ತಾರೆ. ಪರಿಸ್ಥಿತಿ ಉತ್ತಮವಾಗಿದ್ದೂ, ವಿದ್ಯುತ್ ತಂತಿಗಳು ಹೆಚ್ಚಿನ ವಿದ್ಯುತ್ ಸಾಗಿಸುವ ಸಾಮರ್ಥ್ಯ ಹೊಂದಿದ್ದರೂ ಹಾಕಿಕೊಂಡಿರುವ ಮಿತಿಗಳಿಂದ ಹೆಚ್ಚಿನ ವಿದ್ಯುತ್ ಸಾಗಿಸಲು ಸಾಧ್ಯವಾಗುವುದಿಲ್ಲ. ಡೈನಾಮಿಕ್ ಲೈನ್ ರೇಟಿಂಗ್ ತಂತ್ರಜ್ಞಾನ ವಾಸ್ತವಿಕ ಪರಿಸ್ಥಿತಿಗೆ ತಕ್ಕಂತೆ ಬದಲಾಗುವ ತಂತ್ರಜ್ಞಾನ. ತಂತಿಗಳ ಮೇಲೆ ಅಳವಡಿಸುವ ಸ್ಮಾರ್ಟ್ ಸೆನ್ಸಾರ್‌ಗಳು ಗಾಳಿಯ ವೇಗ, ತಾಪಮಾನ ಮುಂತಾದವನ್ನು ಕ್ಷಣಕ್ಷಣಕ್ಕೂ ಗಮನಿಸುತ್ತವೆ. ಈ ತಂತ್ರಜ್ಞಾನ ಪರಿಸ್ಥಿತಿಯನ್ನು ಗ್ರಹಿಸಿ, ವ್ಯರ್ಥವಾಗುತ್ತಿದ್ದ ಶೇ. 25ರಷ್ಟು ಹೆಚ್ಚುವರಿ ಸಾಮರ್ಥ್ಯವನ್ನು ಸುರಕ್ಷಿತವಾಗಿ ಬಳಸಿಕೊಳ್ಳಲು ದಾರಿ ಮಾಡಿಕೊಡುತ್ತದೆ.

ಸ್ಮಾರ್ಟ್‌ಕಾರ್ಡ್ ವಿತರಣೆ

ಬೆಂಗಳೂರು: ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಶಕ್ತಿ ಯೋಜನೆಯಡಿ ಸ್ಮಾರ್ಟ್‌ಕಾರ್ಡ್ ವಿತರಣೆ ಬಗ್ಗೆ ಅಂತಿಮ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ ಎಂದು ಸಾರಿಗೆ ಸಚಿವ ಬೈರತಿ ಸುರೇಶ್ ತಿಳಿಸಿದ್ದಾರೆ.

» **ವಹಿವಾಟು ಸಲಹೆಗಾರರ ಸಮಿತಿ ನೇಮಕ: ಸಚಿವ ಬೈರತಿ ಸುರೇಶ್**

ಸೋಮವಾರ ವಿಧಾನಸೌಧದಲ್ಲಿ ಸಾರಿಗೆ ಇಲಾಖೆಯ ಉನ್ನತಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸುಮಾರು 2 ಕೋಟಿಗೂ ಅಧಿಕ ಮಹಿಳೆಯರ ಉಚಿತ ಪ್ರಯಾಣಕ್ಕೆ ಸ್ಮಾರ್ಟ್ ಕಾರ್ಡ್ ವಿತರಿಸುವ ಸಾಧ್ಯತೆಗಳಿವೆ. ಈ ಸ್ಮಾರ್ಟ್ ಕಾರ್ಡ್ ವಿತರಣೆಗೆ ಸಂಬಂಧಿಸಿದಂತೆ ವಿಶೇಷ ಉದ್ದೇಶಿತ ವಾಹನವನ್ನು ರಚನೆ ಮಾಡಿ, ಇದರಡಿಯೇ ವಿತರಣಾ ಪ್ರಕ್ರಿಯೆ ನಡೆಸಲಾಗುತ್ತದೆ ಎಂದರು. ಇದೇ ವೇಳೆ, ಸ್ಮಾರ್ಟ್‌ಕಾರ್ಡ್‌ನ ರೂಪುರೇಷೆಯನ್ನು ಅಂತಿಮಗೊಳಿಸಲು ವಹಿವಾಟು ಸಲಹೆಗಾರರ ಸಮಿತಿಯನ್ನು ನೇಮಕ ಮಾಡಲಾಗಿದೆ. ಈ ಸಮಿತಿಯು ಸ್ಮಾರ್ಟ್‌ಕಾರ್ಡ್ ಸ್ವರೂಪ, ತಾಂತ್ರಿಕ ನೆರವು, ಟೆಂಡರ್ ಪ್ರಕ್ರಿಯೆ ಮತ್ತು ವಿತರಣೆ ಪ್ರಕ್ರಿಯೆಯನ್ನು ಹೇಗೆ ನಡೆಸಬೇಕೆಂಬುದರ ಬಗ್ಗೆ ಸಾರಿಗೆ ನಿಗಮಗಳಿಗೆ ಸಲಹೆ, ಮಾರ್ಗದರ್ಶನ ನೀಡಲಿದೆ ಎಂದು ಸಚಿವ ಸುರೇಶ್ ತಿಳಿಸಿದರು. ತಿಳಿಸಿದರು.

ಸ್ಮಾರ್ಟ್‌ಕಾರ್ಡುಗಳನ್ನು ಖಾಸಗಿ-ಸರ್ಕಾರಿ ಸಹಭಾಗಿತ್ವದಲ್ಲಿ ವಿತರಣೆ ಮಾಡಲಾಗುತ್ತದೆ. ಮಹಿಳೆಯರಿಗೆ ಉಚಿತವಾಗಿ ವಿತರಿಸಲಿದ್ದು, ಇದಕ್ಕೆ ತಗಲುವ ಸಂಸ್ಕರಣ ವೆಚ್ಚವನ್ನು ಸರ್ಕಾರ ಭರಿಸಲಿದ್ದರೆ, ಪುರುಷ ಪ್ರಯಾಣಿಕರು ಹಣ ಕೊಟ್ಟು ಖರೀದಿಸಬೇಕಾಗುತ್ತದೆ. ಸ್ಮಾರ್ಟ್ ಕಾರ್ಡ್‌ಗಳ ತಾಂತ್ರಿಕ ನೆರವು ಸೇರಿದಂತೆ ಇನ್ನಿತರ ಸಹಕಾರವನ್ನು ಖಾಸಗಿ ಸಂಸ್ಥೆಯೇ ನಿರ್ವಹಣೆ ಮಾಡಲಿದೆ ಎಂದು ಸ್ಪಷ್ಟಪಡಿಸಿದರು.

ಪಿಪಿಪಿ ಮಾದರಿಯಲ್ಲಿ ಸ್ಮಾರ್ಟ್ ಕಾರ್ಡ್

ಸಮಿತಿಯು ಈ ತಿಂಗಳಾಂತ್ಯದಲ್ಲಿ ವರದಿ ನೀಡಲಿದ್ದು, ಇದರ ಆಧಾರದಲ್ಲಿ ಸ್ಮಾರ್ಟ್‌ಕಾರ್ಡ್ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಕೋಟ್ಯಂತರ ಸ್ಮಾರ್ಟ್ ಕಾರ್ಡ್ ವಿತರಣೆ ಅಗತ್ಯವಿರುವ ಹಿನ್ನೆಲೆಯಲ್ಲಿ ಟೆಂಡರ್ ಕರೆಯಲಾಗುತ್ತದೆ. ಮಹಿಳೆಯರಿಗೆ ಉಚಿತವಾಗಿ ಸ್ಮಾರ್ಟ್‌ಕಾರ್ಡ್ ದೊರೆಯಲಿದೆ. ಪುರುಷರು ಹಣದ ಆಧಾರದಲ್ಲಿ ಸ್ಮಾರ್ಟ್‌ಕಾರ್ಡ್ ಖರೀದಿಸಬೇಕಾಗುತ್ತದೆ. ಹೀಗೆ ಮಹಿಳಾ ಮತ್ತು ಪುರುಷ ಪ್ರಯಾಣಿಕರೆಲ್ಲರನ್ನು ಒಟ್ಟುಗೂಡಿಸಿದರೆ ಸುಮಾರು 2.5 ಕೋಟಿಯಿಂದ 3 ಕೋಟಿ ಕಾರ್ಡ್‌ಗಳು ಬೇಕಾಗುತ್ತವೆ ಎಂದು ಅಂದಾಜಿಸಲಾಗಿದೆ ಎಂದು ಸಚಿವ ಬೈರತಿ ಸುರೇಶ್ ತಿಳಿಸಿದರು.

3 ವರ್ಷ ಬಳಿಕ ಪ್ರಶ್ನಿಸಿದ್ದ ಅರ್ಜಿದಾರನಿಗೆ ₹25 ಸಾವಿರ ದಂಡ

ಬೆಂಗಳೂರು: ಭೂವಿವಾದಕ್ಕೆ ಸಂಬಂಧಿಸಿದಂತೆ ಲೋಕ ಅದಾಲತ್‌ನಲ್ಲಿ ಸಂಧಾನದ ನಂತರ ಮೂರು ವರ್ಷಗಳ ಬಳಿಕ ಪ್ರಶ್ನಿಸಿದ್ದ ಅರ್ಜಿದಾರರೊಬ್ಬರಿಗೆ ಹೈಕೋರ್ಟ್ ಸೋಮವಾರ 25 ಸಾವಿರ ರೂ.ದಂಡ ವಿಧಿಸಿದೆ.

ಲೋಕ ಅದಾಲತ್‌ನಲ್ಲಿ ಇತ್ಯರ್ಥವಾಗಿದೆ ಎಂದು ಸಂಧಾನ ಅರ್ಜಿಯನ್ನು ಪುರಸ್ಕರಿಸಿ ಸಿವಿಲ್ ದಾವೆ ವಜಾಗೊಳಿಸಿ 2021 ಆ.18ರಂದು ಚಿಕ್ಕಮಗಳೂರಿನ ತರೀಕೆರೆಯ ಹಿರಿಯ ಸಿವಿಲ್ ನ್ಯಾಯಾಲಯ ಮಾಡಿರುವ ಆದೇಶ ವಜಾಗೊಳಿಸುವಂತೆ ಕೋರಿ ಚೇತನ್ ಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಸಂಧಾನ ಅರ್ಜಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಕೆ ಮಾಡಿದಾಗ ಅದೇ ನ್ಯಾಯಾಲಯ ಅದನ್ನು ದಾಖಲಿಸಿಕೊಳ್ಳಬೇಕೆ ವಿನಾ ಅದನ್ನು ಲೋಕ ಅದಾಲತ್ ವರ್ಗಾಯಿಸಬಾರದು ಎಂದು ರೇಣುಕಾ ಪ್ರಕರಣದಲ್ಲಿ ಹೈಕೋರ್ಟ್ ಆದೇಶಿಸಿದೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಆದರೆ, ರೇಣುಕಾ ಪ್ರಕರಣದ ತೀರ್ಪು 2022ರಲ್ಲಿ ಬಂದಿದ್ದು, ಹಾಲಿ ಪ್ರಕರಣದ ಸಂಧಾನವು 2021ರಲ್ಲಿ ನಡೆದಿದೆ. ಹೀಗಾಗಿ, ರೇಣುಕಾ ಪ್ರಕರಣದ ತೀರ್ಪು ಇಲ್ಲಿಗೆ ಅನ್ವಯಿಸುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಸಂಧಾನದ ಪತ್ರದಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಅರ್ಜಿದಾರರಲ್ಲಿ ವಿಚಾರಿಸಲಾಗಿದೆ. ಆಗ ಅರ್ಜಿದಾರರು ವಕೀಲರ ವಿರುದ್ಧ ಯಾವುದೇ ಕ್ರಮಕೈಗೊಂಡಿಲ್ಲ, ಹೀಗಾಗಿ, ಇಲ್ಲಿ ಹಾಲಿ ಅರ್ಜಿಯು ಕಾನೂನು ಪ್ರಕ್ರಿಯೆ ದುರ್ಬಳಕೆಯಾಗಿದೆ. ಅರ್ಜಿದಾರರು ಸಂಧಾನ ಅರ್ಜಿಗೆ ಸಹಿ ಹಾಕಿದ್ದು, ಅನಂತರ ಅದರ ಫಲವನ್ನು ಪಡೆದಿದ್ದಾರೆ. ಈಗ ಮೂರು ವರ್ಷಗಳ ಬಳಿಕ ಸಂಧಾನವನ್ನು ಪ್ರಶ್ನಿಸಿದ್ದಾರೆ. ಹೀಗಾಗಿ, 25 ಸಾವಿರ ದಂಡ ವಿಧಿಸಿ ಅರ್ಜಿ ವಜಾಗೊಳಿಸಲಾಗಿದೆ. 4 ವಾರಗಳಲ್ಲಿ ರಾಜ್ಯ ಕಾನೂನು ಸೇವಾ ಪ್ರಾಧಿಕಾರಕ್ಕೆ ದಂಡದ ಮೊತ್ತ ಪಾವತಿಸಬೇಕು. ಜು.14ರೊಳಗೆ ದಂಡದ ಮೊತ್ತ ಪಾವತಿಸದಿದ್ದರೆ ಕೆಎಸ್ಎಲ್ಎಸ್ಎಯು ಭೂಕಂದಾಯ ಹಿಂಬಾಕಿ ಎಂದು ಅದನ್ನು ವಸೂಲಿ ಮಾಡಬಹುದಾಗಿದೆ ಎಂದು ನ್ಯಾಯಾಲಯ ನಿರ್ದೇಶಿಸಿದೆ.

ಭಜ ಮನ ಸಂಗೀತ ಕಾರ್ಯಾಗಾರ ಯಶಸ್ವಿ

ಬೆಂಗಳೂರು: ರಾಜಧಾನಿಯ ಕಲಾಭಿಮಾನಿಗಳಿಗೆ ಮತ್ತು ಉದಯೋನ್ಮುಖ ಗಾಯಕರಿಗೆ ಹಮ್ಮಿಕೊಳ್ಳಲಾಗಿದ್ದ ಎರಡು ದಿನಗಳ ವಿಶೇಷ ಪ್ರಿ-ಕನ್ಸರ್ಟ್ ಸಂಗೀತ ಕಾರ್ಯಾಗಾರ ಭಜ ಮನ ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ಪರಮ್ ಕಲ್ಚರ್ ಸಂಸ್ಥೆಯು ಹರಿವಂಶ ಗ್ರೂಪ್ ಸಹಯೋಗದೊಂದಿಗೆ ಜಯನಗರದ ಯುವಕ ಸಂಘದಲ್ಲಿ ಆಯೋಜಿಸಿದ್ದ ಈ ಕಾರ್ಯಾಗಾರದಲ್ಲಿ ಒಟ್ಟು 45 ಮಂದಿ ಗಾಯನ ಆಸಕ್ತರು ಭಾಗವಹಿಸಿ, ಅಪೂರ್ವ ಅವಕಾಶವನ್ನು ಸದುಪಯೋಗಪಡಿಸಿಕೊಂಡರು. ಜಾಗತಿಕ ಮಟ್ಟದಲ್ಲಿ ಭಕ್ತಿ ಸಂಗೀತದ ಮೂಲಕ ಸಂಚಲನ ಸೃಷ್ಟಿಸಿರುವ ಖ್ಯಾತ ಯುವ ಶಾಸ್ತ್ರೀಯ ಗಾಯಕಿ, ಎಂ.ಎಸ್.ಸುಬ್ಬುಲಕ್ಷ್ಮಿ ಫೆಲೋಶಿಪ್ ಪುರಸ್ಕೃತೆ ಸೂರ್ಯಗಾಯತ್ರಿ ಅವರು ಜೂ.12 ಮತ್ತು 13ರಂದು ನಡೆದ ಈ ಕಾರ್ಯಾಗಾರವನ್ನು ಮುನ್ನಡೆಸಿದರು. ಕಾರ್ಯಾಗಾರದಲ್ಲಿ ಭಾಗವಹಿಸಿದ್ದ 45 ಆಸಕ್ತರಿಗೆ ಸೂರ್ಯಗಾಯತ್ರಿ ಅವರಿಂದ ನೇರವಾಗಿ ಭಜನೆಗಳು, ದಾಸರಪದಗಳು ಮತ್ತು ಅಭಂಗ್‌ಗಳನ್ನು ಕಲಿಯುವ ಸುವರ್ಣಾವಕಾಶ ಸಿಕ್ಕಿತು. ಒಟ್ಟು 4 ಗಂಟೆಗಳ ಕಾಲ ನಡೆದ ಈ ನೇರ ಕಲಿಕಾ ಸರಣಿಯಲ್ಲಿ ಗಾಯಕಿ ಸೂರ್ಯಗಾಯತ್ರಿ ಅವರು ತಮ್ಮ ಕಲಾ ಜರ್ನಿ ಮತ್ತು ಭಕ್ತಿ ಸಂಗೀತದ ಅನುಭವಗಳನ್ನು ಹಂಚಿಕೊಂಡರು. ಈ ಕಾರ್ಯಾಗಾರವು ಕೇವಲ ಕಲಿಕೆಗೆ ಸೀಮಿತವಾಗಿರದೆ, ಶಿಬಿರಾರ್ಥಿಗಳಿಗೆ ದೊಡ್ಡ ವೇದಿಕೆಯನ್ನು ಕಲ್ಪಿಸಿಕೊಟ್ಟಿತು.

ಉಳಿದ ಕಾಮಗಾರಿಗೆ ವೇಗ ನೀಡುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ

ಶೇ.51 ವೈಟ್ ಟಾಪಿಂಗ್ ಕಾಮಗಾರಿ ಪೂರ್ಣ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ವ್ಯಾಪ್ತಿಯಲ್ಲಿ ಕೈಗೆತ್ತಿಕೊಂಡಿರುವ ವೈಟ್ ಟಾಪಿಂಗ್ ಕಾಮಗಾರಿಗಳಲ್ಲಿ ಶೇ.51ರಷ್ಟು ಕಾಮಗಾರಿ ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳಿಗೆ ವೇಗ ನೀಡುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಜಿಬಿಎ ವ್ಯಾಪ್ತಿಯಲ್ಲಿ ಬಿ-ಸ್ಮೈಲ್ ವತಿಯಿಂದ ಕೈಗೆತ್ತಿಕೊಂಡಿರುವ ವೈಟ್ ಟಾಪಿಂಗ್ ಹಾಗೂ ಸಂಚಾರಯುಕ್ತ (ಬಫರ್) ರಸ್ತೆ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಿದ ಅವರು, ನಗರದಲ್ಲಿ 1,700 ಕೋಟಿ ರೂ. ವೆಚ್ಚದಲ್ಲಿ ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಎಲ್ಲ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದ್ದಾರೆ. ಕಾಮಗಾರಿ ನಡೆಯುತ್ತಿರುವ ಸ್ಥಳಗಳಲ್ಲಿ ಎದುರಾಗಿರುವ ಸಮಸ್ಯೆಗಳನ್ನು ಪರಿಶೀಲಿಸಿ, ಅವುಗಳನ್ನು ಪರಿಹರಿಸಿಕೊಂಡು ಕಾರ್ಯ ನಿರ್ವಹಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.



ರಸ್ತೆಗಳ ಅಗಲೀಕರಣಕ್ಕೆ ಕ್ರಮವಹಿಸಿ

ನಾಗವಾರ, ಟ್ಯಾನರಿ, ದಿನ್ನೂರು ಹಾಗೂ ಹಾಲಿಡೇ ವಿಲೇಜ್ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳುವ ಮುನ್ನ : ರಸ್ತೆ ಅಗಲೀಕರಣಕ್ಕೆ ಆಯಾ ನಗರ ಪಾಲಿಕೆಗಳ ಹಿರಿಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, ಅಗಲೀಕರಣಕ್ಕೆ ಅಗತ್ಯವಿರುವ ಜಾಗಗಳಿಗೆ ಟಿಡಿಆರ್ ನೀಡುವ ಮೂಲಕ ತ್ವರಿತಗತಿಯಲ್ಲಿ ರಸ್ತೆ ಅಗಲೀಕರಣ ಕಾರ್ಯ ಪೂರ್ಣಗೊಳಿಸಿ ಬಳಿಕ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳುವಂತೆ ತಿಳಿಸಿದ್ದಾರೆ.

> **ಜಿಬಿಎ ವ್ಯಾಪ್ತಿಯಲ್ಲಿ 68 ಕಿ.ಮೀ ಉದ್ದದ 9 ಸಂಚಾರಯುಕ್ತ (ಬಫರ್) ರಸ್ತೆಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈ ಸಂಬಂಧ ನಡೆಯುತ್ತಿರುವ ಕಾಮಗಾರಿಗಳಿಗೆ ವೇಗ ನೀಡಿ, ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.**
>
> ■ **ಮಹೇಶ್ವರ್ ರಾವ್,** ಜಿಬಿಎ ಮುಖ್ಯ ಆಯುಕ್ತ

ಕಾಮಗಾರಿಗೆ 800 ಕೋಟಿ ರೂ. ವೆಚ್ಚ

800 ಕೋಟಿ ರೂ. ವೆಚ್ಚದಲ್ಲಿ 58.60 ಕಿ.ಮೀ ಉದ್ದದ ವೈಟ್ ಟಾಪಿಂಗ್ ರಸ್ತೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರಲ್ಲಿ 28.18 ಕಿ.ಮೀ ಉದ್ದದ ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದೆ. ಈವರೆಗೆ ಶೇ. 56.1 ರಷ್ಟು ಪ್ರಗತಿ ಸಾಧಿಸಲಾಗಿದೆ. ಅಲ್ಲದೆ, 900 ಕೋಟಿ ರೂ. ವೆಚ್ಚದಲ್ಲಿ 66.28 ಕಿ.ಮೀ ಉದ್ದದ ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು, ಇದರಲ್ಲಿ 26.40 ಕಿ.ಮೀ ಕಾಮಗಾರಿ ಪೂರ್ಣಗೊಂಡಿದ್ದು, ಶೇ. 46.43 ರಷ್ಟು ಪ್ರಗತಿ ಸಾಧಿಸಲಾಗಿದೆ. ಒಟ್ಟು 1700 ಕೋಟಿ ರೂ. ವೆಚ್ಚದ ಕಾಮಗಾರಿ ಪೈಕಿ ಶೇ. 51 ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದರು.

ಇಂದು ನಗರದಲ್ಲಿ...

- ಶ್ರೀ ಅಭಯಾಂಜನೇಯ ಸ್ವಾಮಿ ದೇವಾಲಯ ಅಮಾವಾಸ್ಯೆ ಪೂಜೆ
- ಸ್ಥಳ: ಶ್ರೀ ಅಭಯಾಂಜನೇಯ ದೇವಾಲಯ, ಮಹಾಲಕ್ಷ್ಮಿ ಲೇಔಟ್
- ಬೆಳಗ್ಗೆ 8

- ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿವಿ ಘಟಿಕೋತ್ಸವ
- ಸ್ಥಳ: ಜಿಕೆವಿಕೆ
- ಬೆಳಗ್ಗೆ 10 ಕ್ಕೆ

- ವಸ್ತ್ರಕಲಾ ಪ್ರದರ್ಶನ
- ಸ್ಥಳ: ಚಿತ್ರಕಲಾ ಪರಿಷತ್
- ಬೆಳಗ್ಗೆ 11

- ಸುಬ್ರಹ್ಮಣ್ಯ ಸ್ವಾಮಿ ಸೇವಾಟ್ರಸ್ಟ್; 29 ನೇ ವಾರ್ಷಿಕೋತ್ಸವ
- ಸ್ಥಳ: ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಕೆ.ಎಚ್.ಬಿ.ಕಾಲೋನಿ. ಬಸವೇಶ್ವರನಗರ
- ಮಧ್ಯಾಹ್ನ 3 ರಿಂದ

ಮಂಗಳವಾರದ ಪಂದ್ಯಗಳು

- ಇರಾನ್-ನ್ಯೂಜಿಲೆಂಡ್ (ಬೆಳಗ್ಗೆ 6:30)
- ಫ್ರಾನ್ಸ್-ಸೆನೆಗಲ್ (ಮಧ್ಯರಾತ್ರಿ 12:30)
- ಇರಾಕ್-ನಾರ್ವೆ (ಬುಧವಾರ ಬೆಳಗ್ಗೆ 3:30)
- ಅರ್ಜೆಂಟೀನಾ-ಅಲ್ಜೀರಿಯಾ (ಬುಧವಾರ ಬೆಳಗ್ಗೆ 6:30)

ಕಿರುಸುದ್ದಿ

2ನೇ ಅತಿ ವೇಗದ ಗೋಲ್ ಹೊಡೆದ ಬದಲಿ ಆಟಗಾರ

ಮೊಂಟೆರೆ (ಮೆಕ್ಸಿಕೊ): ವಿಶ್ವಕಪ್ ಇತಿಹಾಸದಲ್ಲೇ ಸ್ವೀಡನ್‌ನ ಮತ್ತಿಯಾಸ್ ಸ್ವಾನ್‌ಬರ್ಗ್ ಎರಡನೇ ಅತಿ ವೇಗದ ಗೋಲ್ ದಾಖಲಿಸಿದ ಬದಲಿ ಆಟಗಾರನೆಂಬ ದಾಖಲೆಯನ್ನು ಸೋಮವಾರ ಬರೆದಿದ್ದಾರೆ. ಟ್ಯುನೀಶಿಯಾ ವಿರುದ್ಧದ ಪಂದ್ಯದಲ್ಲಿ ಬದಲಿ ಆಟಗಾರರಾಗಿ ಮೈದಾನಕ್ಕಿಳಿದ 27 ವರ್ಷದ ಸ್ವಾನ್‌ಬರ್ಗ್ 18 ಸೆಕೆಂಡಿನಲ್ಲಿ ಗೋಲ್ ದಾಖಲಿಸಿದ್ದಾರೆ. 2002ರ ವಿಶ್ವಕಪ್‌ನಲ್ಲಿ ಬದಲಿ ಆಟಗಾರರಾಗಿ ಇಳಿದ ಉರುಗ್ವೆಯ ರಿಚರ್ಡ್ ಮೊರೇಲ್ಸ್ 16 ಸೆಕೆಂಡುಗಳಲ್ಲಿ ಗೋಲ್ ಹೊಡೆದಿದ್ದರು.

ನೇಷನ್ಸ್ ಕಪ್ ಮಹಿಳಾ ಹಾಕಿ: ಅಮೆರಿಕ ಮಣಿಸಿದ ಭಾರತ

ಆಕ್ಲೆಂಡ್: ಎಫ್‌ಐಎಚ್ ನೇಷನ್ಸ್ ಕಪ್ ಹಾಕಿ ಪಂದ್ಯಾವಳಿಯ ಎ ಗುಂಪಿನ ಪಂದ್ಯದಲ್ಲಿ ಸೋಮವಾರ ಅಮೆರಿಕ ವಿರುದ್ಧ ಭಾರತೀಯ ವನಿತೆಯರು 3-2 ಗೋಲ್‌ಗಳ ಅಂತರದಿಂದ ಜಯ ಸಾಧಿಸಿದ್ದಾರೆ. ದೀಪಿಕಾ ಭಾರತದ ರೋಚಕ ಗೆಲುವಿನ ರೂವಾರಿ ಆಗಿದ್ದರು. ಭಾರತದ ಪರ ದೀಪಿಕಾ (17, 24ನೇ ನಿಮಿಷ) ಎರಡು ಗೋಲ್, ನವನೀತ್ ಕೌರ್(28ನೇ ನಿಮಿಷ) ಸ್ಕೋರ್ ಮಾಡಿದರು. ಅಮೆರಿಕ ಪರ ಆಶ್ಲೆ ಸೆಸ್ಸಾ(4ನೇ ನಿಮಿಷ) ಮತ್ತು ಮೇಡಿಲಿನ್ ಜಮ್ಮರ್(7ನೇ ನಿಮಿಷ) ಸ್ಕೋರ್ ಮಾಡಿದ್ದರು. ನೇಷನ್ಸ್ ಕಪ್ ಗೆಲ್ಲುವ ತಂಡ ಪ್ರೊ ಲೀಗ್‌ಗೆ ಪ್ರವೇಶ ಪಡೆಯುತ್ತದೆ. 2-2 ಸಮಬಲದ ಹೋರಾಟ ಇದ್ದಾಗ ದೀಪಿಕಾ 24ನೇ ನಿಮಿಷದಲ್ಲಿ ಗೋಲ್ ದಾಖಲಿಸಿದ್ದರು.

ಕಳರಿಪಯಟ್ಟು: ಪ್ರಣಿಕಾಗೆ 2 ಸ್ವರ್ಣ, ವರುಣ್‌ಗೆ ಬೆಳ್ಳಿ

ಬೆಂಗಳೂರು: ಬೆಂಗಳೂರು ಜಿಲ್ಲಾ ಕಳರಿಪಯಟ್ಟು ಕೌನ್ಸಿಲ್ ವತಿಯಿಂದ ಸ್ಪೈಡ್ ಬ್ಯಾಡ್ಮಿಂಟನ್ ಕೋರ್ಟ್‌ನಲ್ಲಿ ಹಮ್ಮಿಕೊಳ್ಳಲಾದ ಬೆಂಗಳೂರು ಜಿಲ್ಲಾ ಕಳರಿಪಯಟ್ಟು ಚಾಂಪಿಯನ್‌ಶಿಪ್ 2026-27 ಜೂನಿಯರ್ ಇವೆಂಟ್‌ನಲ್ಲಿ ಪ್ರಣಿಕಾ ರಜನಿ ಎರಡು ಸ್ವರ್ಣ ಪದಕ ಗೆದ್ದರೆ, ವರುಣ್ ಒಂದು ಬೆಳ್ಳಿ ಪದಕ ಗೆದ್ದಿದ್ದಾರೆ. ಜೂ.13 ಮತ್ತು 14ರಂದು ನಡೆದ ಜಿಲ್ಲಾಮಟ್ಟದ ಕಳರಿಪಯಟ್ಟು ಚಾಂಪಿಯನ್‌ಶಿಪ್‌ನ ಜೂನಿಯರ್ ಇವೆಂಟ್‌ನಲ್ಲಿ ಪ್ರಣಿಕಾ ರಜನಿ ಚಪ್ಪುಟ್ಟುಪ್ರಯೋಗ, ಚುವಾಡುಗಳ್‌ನಲ್ಲಿ ಚಿನ್ನದ ಪದಕ, ವರುಣ್ ಕೈ ಮುಟ್ಟಾನಲ್ಲಿ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.

ಕೆರಳಿದ ಸೂರ್ಯವಂಶಿ!

ದಾಂಬುಲ್ಲಾ: ಶ್ರೀಲಂಕಾ ಎ ವಿರುದ್ಧ ಸೂಪರ್ ಓವರ್ ಸೋಲಿನ ಬಳಿಕ ವೈಭವ್ ಸೂರ್ಯವಂಶಿ ಹಾಗೂ ಶ್ರೀಲಂಕಾ ಆಟಗಾರರ ಮಧ್ಯೆ ಮಾತಿನ ಚಕಮಕಿ ನಡೆದಿದ್ದು, ಸೂರ್ಯವಂಶಿ ತಮ್ಮ ತಾಳ್ಮೆ ಕಳೆದುಕೊಂಡು ಲಂಕಾ ಆಟಗಾರರೊಬ್ಬರನ್ನು ತಳ್ಳಿದ್ದಾರೆ. ಶ್ರೀಲಂಕಾ ಆಟಗಾರರು ಸೂರ್ಯವಂಶಿ ಅವರನ್ನು ಹಿಂದಕ್ಕೆ ತಳ್ಳಿದ್ದಾರೆ. ಶ್ರೀಲಂಕಾ ಬೌಲರ್ ಮಹಲಿನ್ ಸಂಭ್ರಮಿಸಿದ ಶೈಲಿ ವೈಭವ್‌ರನ್ನು ಟ್ರಿಗರ್ ಮಾಡಿದೆ. ಈ ವೇಳೆ ನಿರೋಷನ್ ಡಿಕ್‌ವೆಲ್ಲಾ ಆಟಗಾರರ ಮಧ್ಯೆ ಪ್ರವೇಶಿಸಿ ಶಾಂತಗೊಳಿಸಿದ್ದಾರೆ. ಕಳೆದ ವರ್ಷ ಅ-19 ಏಷ್ಯಾ ಕಪ್ ಫೈನಲ್‌ನಲ್ಲಿ ಪಾಕಿಸ್ತಾನದ ಅಲಿ ರಾಜಾ ಮತ್ತು ವೈಭವ್ ಮಧ್ಯೆ ಮಾತಿನ ಚಕಮಕಿ ನಡೆದಿತ್ತು.

ಸ್ವೀಡನ್ ಎದುರು 1-5ರಿಂದ ಸೋತ ಟ್ಯುನೀಶಿಯಾ

ಅವಳಿ ಗೋಲ್ ಅಯಾರಿ ಸ್ವೀಡನ್ ಗೆಲುವಿನ ಯಾರಿ

ಮೊಂಟೆರೆ (ಮೆಕ್ಸಿಕೊ): ಯಾಸಿನ್ ಅಯಾರಿ ಅವಳಿ ಗೋಲ್‌ಗಳ ನೆರವಿನಿಂದ ಟ್ಯುನೀಶಿಯಾವನ್ನು 5-1 ಅಂತರದಿಂದ ಪರಾಭವಗೊಳಿಸಿದ ಸ್ವೀಡನ್ 2026ರ ವಿಶ್ವಕಪ್‌ನಲ್ಲಿ ತನ್ನ ಅಭಿಯಾನವನ್ನು ಆರಂಭಿಸಿದೆ. ಸೋಮವಾರ ಬೆಳಗ್ಗೆ ನಡೆದ ಎಫ್ ಗುಂಪಿನ ಪಂದ್ಯದಲ್ಲಿ ಟ್ಯುನೀಶಿಯಾ ಮಣಿಸಿದ ಸ್ವೀಡನ್ ಅಗ್ರಸ್ಥಾನಕ್ಕೇರಿದೆ. ಅಲೆಗ್ಸಾಂಡರ್ ಇಸಾಕ್ ಮತ್ತು ವಿಕ್ಟರ್ ಗ್ಯೋಕೆರೆಸ್ ತಲಾ ಒಂದು ಗೋಲ್ ಅಸಿಸ್ಟ್ ಮಾಡಿದ್ದು, ಮತ್ತಿಯಾಸ್ ಸ್ವಾನ್‌ಬರ್ಗ್ ಸಹ ಸ್ವೀಡನ್‌ಗಾಗಿ ಒಂದು ಗೋಲ್ ಸ್ಕೋರ್ ಮಾಡಿದ್ದರು. ಟ್ಯುನೀಶಿಯಾ ಪರ ಒಮರ್ ರೆಕಿಕ್ ಏಕೈಕ ಗೋಲ್ ದಾಖಲಿಸಿದ್ದರು.

ಅಯಾರಿ ರಾಕೆಟ್: ಪಂದ್ಯ ಆರಂಭವಾದ 7ನೇ ನಿಮಿಷದೊಳಗೆ ರಾಕೆಟ್‌ನಂತೆ ದೂರದಿಂದ ನಿಖರವಾಗಿ ಗೋಲ್ ದಾಖಲಿಸಿದ ಅಯಾರಿ, ಸಂಭ್ರಮಾಚರಣೆ ನಡೆಸದೆ ಎರಡು ಕೈಗಳನ್ನೆತ್ತಿ ತಮ್ಮ ತಂದೆಯ ಜನ್ಮಭೂಮಿ ಟ್ಯುನೀಶಿಯಾಗೆ ಗೌರವ ಸಲ್ಲಿಸಿದರು. 30ನೇ ನಿಮಿಷದಲ್ಲಿ ಅಲೆಗ್ಸಾಂಡರ್ ಇಸಾಕ್ ತಮ್ಮ 18ನೇ ಅಂತಾರಾಷ್ಟ್ರೀಯ ಗೋಲ್ ಹೊಡೆದರು. ಸ್ವೀಡನ್ ಒಂದರ ಮೇಲೊಂದು ಗೋಲ್‌ಗಳನ್ನು ದಾಖಲಿಸುತ್ತಿದ್ದರೆ, ಟ್ಯುನೀಶಿಯಾ ಗೋಲಿ ಮೌಟಜ್ ಥಾಮರ್ ಗೋಲ್ ತಡೆಯುವಲ್ಲಿ ವಿಫಲರಾಗಿ ಪರದಾಡಿದರು. 43ನೇ ನಿಮಿಷದಲ್ಲಿ ಟ್ಯುನೀಶಿಯಾ ಪರ ಒಮರ್ ರೆಕಿಕ್ ಗೋಲ್ ದಾಖಲಿಸುವ ಮೂಲಕ ಸ್ವೀಡನ್ ನಾಗಾಲೋಟವನ್ನು ತಡೆಯುವ ಪ್ರಯತ್ನ ಮಾಡಿದ್ದರು. ಆದರೆ ಇಸಾಕ್ ಮತ್ತು ಗ್ಯೋಕೆರೆಸ್ ಜತೆಗೂಡಿ ಸ್ವೀಡನ್ ಮೇಲುಗೈ ಸಾಧಿಸುವುದನ್ನು ಖಚಿತಪಡಿಸಿದರು. ಇಸಾಕ್ ಚೆಂಡನ್ನು ವಿಕ್ಟರ್ ಗ್ಯೋಕೆರೆಸ್‌ಗೆ ಪಾಸ್ ಮಾಡಿದ್ದು, ಆರ್ಸೆನಲ್ ಸ್ಟ್ರೈಕರ್ ಗ್ಯೋಕೆರೆಸ್ 59ನೇ ನಿಮಿಷದಲ್ಲಿ ತಮ್ಮ ಒಟ್ಟಾರೆ 21ನೇ ಗೋಲ್ ಹೊಡೆದಿದ್ದರು. ಇದರೊಂದಿಗೆ ಸ್ವೀಡನ್ ಪ್ರತಿನಿಧಿಸಿದ 15 ಪಂದ್ಯಗಳಲ್ಲಿ ಗ್ಯೋಕೆರೆಸ್ 16 ಗೋಲ್‌ಗಳನ್ನು ಹೊಡೆದಿದ್ದಾರೆ. 84ನೇ ನಿಮಿಷದಲ್ಲಿ ಮತ್ತಿಯಾಸ್ ಸ್ವಾನ್‌ಬರ್ಗ್ ಗೋಲ್ ಪ್ರಾಬಲ್ಯ ಹೆಚ್ಚಿಸಿತು. ವಿಡಿಯೋ ರಿವ್ಯೂ ಬಳಿಕ ಗೋಲ್ ನೀಡಲಾಗಿತ್ತು. ಪಂದ್ಯದ ಕೊನೆಯಲ್ಲಿ ಎಕ್ಸ್‌ಟ್ರಾ ಮಿನಿಟ್‌ನಲ್ಲಿ ಯಾಸಿನ್ ಅಯಾರಿ ಇನ್ನೊಂದು ಗೋಲ್ ಸ್ಕೋರ್ ಮಾಡುವ ಮೂಲಕ ಫಿನಿಶಿಂಗ್ ಟಚ್ ನೀಡಿದ್ದರು. ತಂಡದ ಐದನೇ ಗೋಲ್ ಅನ್ನು ಅಯಾರಿ ಸಂಭ್ರಮಿಸಿದರು.

ಎಂಟು ವರ್ಷಗಳ ಹಿಂದೆ ರಷ್ಯಾದಲ್ಲಿ ನಡೆದ 2022ರ ವಿಶ್ವಕಪ್‌ನಲ್ಲಿ ಕ್ವಾರ್ಟರ್ ಫೈನಲ್‌ವರೆಗೆ ತಲುಪಿದ್ದ ಸ್ವೀಡನ್, ಈ ಬಾರಿಯ ವಿಶ್ವಕಪ್‌ಗೆ 39ನೇ ರ‍್ಯಾಂಕ್‌ನಲ್ಲಿ ಪ್ರವೇಶಿಸಿದೆ. 45ನೇ ರ‍್ಯಾಂಕ್‌ನ ಟ್ಯುನೀಶಿಯಾ ಈವರೆಗೆ ವಿಶ್ವಕಪ್ ಗುಂಪಿನ ಹಂತ ದಾಟಿ ಮುಂದೆ ಹೋಗಿಲ್ಲ.

ನನ್ನ ಪುತ್ರ ಸ್ವೀಡನ್ ಪ್ರತಿನಿಧಿಸುವುದನ್ನು ಬಯಸಿದ್ದೆ. ಆ ಮೂಲಕ ತನ್ನನ್ನು ಬೆಳೆಸಿದ ದೇಶಕ್ಕೆ ಸೇವೆ ಸಲ್ಲಿಸಿದ ಭಾವ ಆತನಿಗೆ ಇರಬೇಕು.

■ ಅಯೂಬ್ ಅಯಾರಿ, ಅಯಾರಿ ತಂದೆ

ಸ್ವೀಡನ್ 5-1 ಟ್ಯುನೀಶಿಯಾ

- 7ನೇ ನಿಮಿಷ - ಯಾಸಿನ್ ಅಯಾರಿ(ಸ್ವೀಡನ್)
- 30ನೇ ನಿಮಿಷ - ಅಲೆಗ್ಸಾಂಡರ್ ಇಸಾಕ್(ಸ್ವೀಡನ್)
- 43ನೇ ನಿಮಿಷ - ಒಮರ್ ರೆಕಿಕ್(ಟ್ಯುನೀಶಿಯಾ)
- 59ನೇ ನಿಮಿಷ - ವಿಕ್ಟರ್ ಗ್ಯೋಕೆರೆಸ್(ಸ್ವೀಡನ್)
- 84ನೇ ನಿಮಿಷ - ಮತ್ತಿಯಾಸ್ ಸ್ವಾನ್‌ಬರ್ಗ್(ಸ್ವೀಡನ್)
- 90+6ನೇ ನಿಮಿಷ - ಯಾಸಿನ್ ಅಯಾರಿ(ಸ್ವೀಡನ್)

ಮೊದಲ ಗೋಲ್ ಸಂಭ್ರಮಿಸದ ಅಯಾರಿ!

ಸ್ವೀಡನ್ ಆಟಗಾರ ಯಾಸಿನ್ ಅಯಾರಿ ಅವರ ತಂದೆ ಟುನಿಸ್ ಮೂಲದವರು ಹಾಗೂ ತಾಯಿ ಮೊರೊಕ್ಕೊ ದೇಶದವರು. ತಂದೆ ಸ್ವೀಡನ್‌ನಲ್ಲಿ ಫುಟ್ಬಾಲ್ ವೃತ್ತಿಜೀವನ ಕಟ್ಟಲು ಪ್ರಯತ್ನಿಸಿ ಯಶಸ್ವಿಯಾಗಲಿಲ್ಲ, ಬಾಲ್ಯದಲ್ಲೇ ಯಾಸಿನ್ ಪ್ರತಿಭೆಯನ್ನು ಫುಟ್ಬಾಲ್ ಪ್ರತಿಭಾನ್ವೇಷಕರೊಬ್ಬರು ಗುರುತಿಸಿದ ಕಾರಣ ಕುಟುಂಬವು ಸ್ವೀಡನ್‌ನಲ್ಲೇ ಉಳಿಯಲು ನಿರ್ಧರಿಸಿತು. ಟುನೀಶಿಯಾ ವಿರುದ್ಧ ವಿಶ್ವಕಪ್ ಗೋಲು ಗಳಿಸಿದರೂ ಯಾಸಿನ್ ಸ್ವೀಡನ್ ಪರ ಸಂಭ್ರಮಾಚರಣೆ ಮಾಡದಿರುವುದು, ಟ್ಯುನೀಶಿಯಾ ಮೇಲೆ ಅವರಿಗಿರುವ ಗೌರವ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ತೋರಿಸುತ್ತದೆ. ಈ ಬಾರಿಯ ವಿಶ್ವಕಪ್‌ನಲ್ಲಿ ವಿವಿಧ ದೇಶಗಳ ಮೂಲ ಹೊಂದಿರುವ ಆಟಗಾರರ ಸಂಖ್ಯೆ ಹೆಚ್ಚಿರುವುದನ್ನೂ ಇದು ಉಲ್ಲೇಖಿಸುತ್ತದೆ. ಒಟ್ಟಾರೆ ಸ್ವೀಡನ್ ಪರ 3 ಗೋಲ್ ದಾಖಲಿಸಿದ ಅಯಾರಿ, ಎರಡು ಗೋಲ್ ಈ ವಿಶ್ವಕಪ್ ಪಂದ್ಯದಲ್ಲೇ ಹೊಡೆದಿದ್ದಾರೆ. 22 ವರ್ಷದ ಅಯಾರಿ ಸ್ವೀಡನ್‌ನ ಸೋಲ್ನಾ ನಗರದಲ್ಲಿ ಜನಿಸಿದ್ದರು. ಯೂತ್ ಮಟ್ಟದಲ್ಲಿ ಸ್ವೀಡನ್ ಪ್ರತಿನಿಧಿಸಿದ್ದ ಅಯಾರಿಗೆ 2022ರ ವಿಶ್ವಕಪ್‌ನಲ್ಲಿ ಟ್ಯುನೀಶಿಯಾ ಪ್ರತಿನಿಧಿಸಲು ಆಹ್ವಾನ ನೀಡಿದ್ದರೂ, ಅಯಾರಿ ತಿರಸ್ಕರಿಸಿದ್ದರು.

4 ಬಾರಿಯ ಚಾಂಪಿಯನ್ನರಿಗೆ 7-1 ಜಯ

ಜರ್ಮನ್ನರ ಆರ್ಭಟಕ್ಕೆ ಕುರಸಾವೊ ಕಂಗಾಲು

ಹ್ಯೂಸ್ಟನ್ (ಅಮೆರಿಕ): ಪದಾರ್ಪಣಾ ವಿಶ್ವಕಪ್ ಆಡುತ್ತಿರುವ ಕುರಸಾವೊ ವಿರುದ್ಧ ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ 7-1 ಗೋಲ್ ಅಂತರದ ಭರ್ಜರಿ ಜಯ ಸಾಧಿಸಿದೆ. ಜರ್ಮನಿ ಪರ ಕೈ ಹಾವರ್ಟ್ಜ್ ಅವಳಿ ಗೋಲ್ ದಾಖಲಿಸಿದರು. ಪಂದ್ಯದ ನಾಲ್ಕನೇ ಮತ್ತು ಎಂಟನೇ ಗೋಲ್ ಹೊಡೆದು ಹಾವರ್ಟ್ಜ್ ಮಿಂಚಿದರು.

ಭಾನುವಾರ ಮಧ್ಯರಾತ್ರಿ ಟೆಕ್ಸಾಸ್‌ನ ಹ್ಯೂಸ್ಟನ್‌ನಲ್ಲಿ ನಡೆದ ಇ ಗುಂಪಿನ ಪಂದ್ಯದಲ್ಲಿ, ಪುಟ್ಟ ಕೆರೆಬಿಯನ್ ದ್ವೀಪ ರಾಷ್ಟ್ರವು ಚೊಚ್ಚಲ ಗೋಲ್ ದಾಖಲಿಸಿ ವಿಶ್ವಕಪ್‌ನಲ್ಲಿ ಐತಿಹಾಸಿಕ ಮೈಲಿಗಲ್ಲು ಬರೆದಿದೆ. ಆದರೆ ಮುಂದಿನ ಪಂದ್ಯಗಳಲ್ಲಿ ಜರ್ಮನಿ ಪೈಪೋಟಿ ನೀಡಬಲ್ಲ ಇಕ್ವೆಡೋರ್ ಮತ್ತು ಐವರಿಕೋಸ್ಟ್ ತಂಡಗಳನ್ನು ಎದುರಿಸಲಿದೆ.

ಪಂದ್ಯದ 6ನೇ ನಿಮಿಷದಲ್ಲೇ ಫೆಲಿಕ್ಸ್ ಎನ್‌ಮೇಚ ಜರ್ಮನಿ ಪರ ಗೋಲ್ ದಾಖಲಿಸಲು ಆರಂಭಿಸಿದರು. ಎನ್‌ಮೇಚ ಗೋಲು ದಾಖಲಿಸುತ್ತಲೇ ಬ್ಲ್ಯೂ ವೇವ್ ಹೆಸರಿನ ಕುರಸಾವೊ ಅಭಿಮಾನಿಗಳಲ್ಲಿ ಆತಂಕ ಮನೆಮಾಡಿತ್ತು. ಆದರೆ ಜರ್ಮನಿ ಗೋಲ್ ಮಳೆ ಅಲ್ಲಿಗೇ ನಿಲ್ಲದೆ ಮುಂದುವರಿಯಿತು. ಹಾವರ್ಟ್ಜ್ ಅವಳಿ ಗೋಲ್ ಹೊಡೆದರೆ, ನಿಕೊ, ಜಮಾಲ್, ಬ್ರೌನ್, ಡೆನಿಸ್ ಸ್ಕೋರ್ ಮಾಡುವ ಮೂಲಕ ಕುರಸಾವೊ ಎದ್ದೇಳಲು ಅವಕಾಶ ಇರಲಿಲ್ಲ. ತಂಡದ ಪ್ರದರ್ಶನಕ್ಕೆ ಟೂರ್ನಿಯ ಅತಿ ಕಿರಿಯ ಕೋಚ್ ಜೂಲಿಯನ್ ನೆಗೆಲ್ಸ್‌ಮನ್ ಸಂಭ್ರಮಿಸಿದರು.

ಅತಿ ಹಿರಿಯ ಜರ್ಮನಿ ಗೋಲ್‌ಕೀಪರ್ 40 ವರ್ಷದ ಮ್ಯಾನುಯೆಲ್ ನ್ಯೂಯರ್ ತಮ್ಮ 5ನೇ ವಿಶ್ವಕಪ್‌ನಲ್ಲಿ ಮೈದಾನಕ್ಕಿಳಿದಿದ್ದರು. ಹಾವರ್ಟ್ಜ್ ಒಟ್ಟಾರೆ ತಮ್ಮ 24ನೇ ಗೋಲ್ ದಾಖಲಿಸಿದ್ದರು. ಬದಲಿ ಆಟಗಾರ ಉಂಡವ್ ತಮ್ಮ ಸತತ 7ನೇ ಪಂದ್ಯದಲ್ಲಿ 7ನೇ ಗೋಲ್ ಹೊಡೆದಿದ್ದರು.



ಬ್ರೆಜಿಲ್ ದಾಖಲೆ ಮುರಿದ ಜರ್ಮನಿ!

ಫಿಫಾ ವಿಶ್ವಕಪ್‌ನಲ್ಲಿ ಅತ್ಯಧಿಕ ಗೋಲ್ ದಾಖಲಿಸುವ ಮೂಲಕ ಬ್ರೆಜಿಲ್ ದಾಖಲೆಯನ್ನು ಜರ್ಮನಿ ಮುರಿದಿದೆ. ಕಡೆಯದಾಗಿ 2014ರಲ್ಲಿ ವಿಶ್ವಕಪ್ ಗೆದ್ದ ಜರ್ಮನಿ, 2022ರ ಕತಾರ್ ವಿಶ್ವಕಪ್‌ನಲ್ಲಿ ಗುಂಪಿನ ಹಂತದಲ್ಲೇ ಹೊರಬಿದ್ದಿತ್ತು. 2026ರಲ್ಲಿ ಟೂರ್ನಿಯ ಅತಿ ಕಿರಿಯ ಕೋಚ್ ಜೂಲಿಯನ್ ಸಾರಥ್ಯದಲ್ಲಿ ಜರ್ಮನಿ ಗೆಲುವಿನ ಶುಭಾರಂಭ ಮಾಡಿದೆ. 2014ರ ಸೆಮಿಫೈನಲ್‌ನಲ್ಲಿ ಬ್ರೆಜಿಲ್ ವಿರುದ್ಧ 7 ಗೋಲ್ ಹೊಡೆದಿತ್ತು.

ಜರ್ಮನಿ 7-1 ಕುರಸಾವೊ

- 6ನೇ ನಿಮಿಷ-ಫೆಲಿಕ್ಸ್ ಎನ್‌ಮೇಚ (ಜರ್ಮನಿ)
- 21ನೇ ನಿಮಿಷ-ಲಿವಾನೊ ಕೊಮೆನೆನ್ಸಿಯಾ (ಕುರಸಾವೊ)
- 38ನೇ ನಿಮಿಷ-ನಿಕೊ ಸ್ಲೋಟರ್‌ಬೆಕ್ (ಜರ್ಮನಿ)
- 45+5ನೇ ನಿಮಿಷ (ಪೆ)-ಕೈ ಹಾವರ್ಟ್ಜ್ (ಜರ್ಮನಿ)
- 47ನೇ ನಿಮಿಷ-ಜಮಾಲ್ ಮ್ಯುಸಿಯಲ (ಜರ್ಮನಿ)
- 68ನೇ ನಿಮಿಷ-ನೇಥನೀಲ್ ಬ್ರೌನ್ (ಜರ್ಮನಿ)
- 78ನೇ ನಿಮಿಷ-ಡೆನಿಸ್ ಉಂಡಾವ್ (ಜರ್ಮನಿ)
- 88ನೇ ನಿಮಿಷ-ಕೈ ಹಾವರ್ಟ್ಜ್ (ಜರ್ಮನಿ)

ವಿಶ್ವಕಪ್ ಗೋಲ್ಸ್

ಜರ್ಮನಿ	239
ಬ್ರೆಜಿಲ್	238
ಅರ್ಜೆಂಟೀನಾ	152
ಫ್ರಾನ್ಸ್	136
ಇಟಲಿ	128

ವಿಶ್ವಕಪ್‌ನಲ್ಲಿ ನಾಲ್ಕು ಬಾರಿ 7+ ಗೋಲ್ ದಾಖಲಿಸಿದ ಜರ್ಮನಿ

ಕ್ರೀಡಾ ಕೇಂದ್ರ ಕಾಮಗಾರಿ ಆರಂಭ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಕಳೆದ ಮೂರು ವರ್ಷದಿಂದ ನನೆಗುದಿಗೆ ಬಿದ್ದಿದ್ದ ಇಲ್ಲಿಯ ರಾಜನಗರದಲ್ಲಿನ ಕರ್ನಾಟಕ ಕ್ರಿಕೆಟ್ ಸಂಸ್ಥೆಯ(ಕೆಎಸ್‌ಸಿಎ) ಕ್ರೀಡಾಂಗಣದಲ್ಲಿ ನಿರ್ಮಿಸಲಾಗುತ್ತಿರುವ ಕ್ರೀಡಾ ಕೇಂದ್ರ(ಕ್ಲಬ್‌ಹೌಸ್) ಕೊನೆಗೂ ಆರಂಭವಾಗಿದೆ.

ಅಗತ್ಯ ಮೂಲಸೌಕರ್ಯ ಕಲ್ಪಿಸಿ ಉತ್ತರ ಕರ್ನಾಟಕ ಭಾಗವನ್ನು ಕ್ರಿಕೆಟ್ ಹಬ್ ಮಾಡಲಾಗುವುದು ಎಂದು ಕೆಎಸ್‌ಸಿಎಯು ಈ ಹಿಂದಿನ ಆಡಳಿತ ಮಂಡಳಿ ಹೇಳಿತ್ತು. ಮುಂಬೈನ ವಾಸ್ತುಶಿಲ್ಪಿಯನ್ನು ಕರೆಸಿ ಕ್ರೀಡಾ ಕೇಂದ್ರಕ್ಕೆ ವಿನ್ಯಾಸ ರೂಪಿಸಲಾಗಿತ್ತು.

2015-16ನೇ ಸಾಲಿನಲ್ಲಿ 35 ಕೋಟಿ ಮೊತ್ತದಲ್ಲಿ ಯೋಜನೆ ಆರಂಭವಾಗಿತ್ತು. 2022ರ ನವೆಂಬರ್‌ನಿಂದ ಕಾಮಗಾರಿ ಸ್ಥಗಿತವಾಗಿತ್ತು. 30 ಕೋಟಿ ಮೊತ್ತದ ಕಾಮಗಾರಿ ಮಾತ್ರ ನಡೆದಿತ್ತು. ಆಟಗಾರರ ಡ್ರೆಸ್ಸಿಂಗ್ ಕೊಠಡಿ, ವೀಕ್ಷಕ ವಿವರಣೆಗಾರರ ಕೊಠಡಿ, ಆಟಗಾರರು ಉಳಿದುಕೊಳ್ಳಲು 60 ಬೆಡ್‌ಗಳ ಡಾರ್ಮೆಟರಿ, ಕ್ಲಬ್ ಸದಸ್ಯರಿಗಾಗಿ 22 ಕೊಠಡಿಗಳನ್ನು ನಿರ್ಮಿಸಲಾಗಿದೆ. ರೆಸ್ಟೋರೆಂಟ್, ಡೈನಿಂಗ್, ಕಿಚನ್, ಜಿಮ್, ಒಳವಿನ್ಯಾಸ ಸೇರಿದಂತೆ ಇನ್ನೂ ಕೆಲವು ಕಾಮಗಾರಿಗಳು ಬಾಕಿ ಉಳಿದಿದ್ದು, ಕಟ್ಟಡಕ್ಕೆ ಅಂತಿಮ ಸ್ಪರ್ಶ ನೀಡಬೇಕಿದೆ. ಹಿಂದಿನ ಆಡಳಿತ ಮಂಡಳಿ ಅವಧಿಯಲ್ಲಿ ಕಾಮಗಾರಿ ಆರಂಭಿಸಲು ಆಸಕ್ತಿ ವಹಿಸಿರಲಿಲ್ಲ, ಆದರೆ, ಹೊಸ ಆಡಳಿತ ಮಂಡಳಿ ಈಗ 30-40 ಲಕ್ಷ ರೂ. ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದೆ. ಪ್ಲಂಬಿಂಗ್, ಪಿಒಪಿ, ಪೇಂಟಿಂಗ್, ಎಲೆಕ್ಟ್ರಿಕ್ ಕಾಮಗಾರಿ ನಡೆಯುತ್ತಿದೆ. ಇದೇ ತಿಂಗಳು(ಜೂ.27ರಂದು) ಆರಂಭವಾಗುವ ಮಹಾರಾಜ ಟ್ರೋಫಿ ಟೂರ್ನಿಯ ಮುಂಚೆಯೇ ಕಾಮಗಾರಿಯು ಮುಗಿಯುವ ಸಾಧ್ಯತೆ ಇದೆ ಎನ್ನುತ್ತಾರೆ ಕೆಎಸ್‌ಸಿಎ ಸಿಬ್ಬಂದಿ. ಕೆಎಸ್‌ಸಿಎಗೆ ನೂತನ ಆಡಳಿತ ಮಂಡಳಿ ಅಧಿಕಾರ ವಹಿಸಿಕೊಂಡ ಬಳಿಕ ಸದಸ್ಯರು ಹಾಗೂ ತಾಂತ್ರಿಕ ತಂಡ ಹುಬ್ಬಳ್ಳಿ ಹಾಗೂ ಬೆಳಗಾವಿ ಮೈದಾನಕ್ಕೆ ಭೇಟಿ ನೀಡಿ ಕ್ರೀಡಾ ಕೇಂದ್ರ ಆಗಬೇಕಾದ ಕೆಲಸಗಳ ಬಗ್ಗೆ ಪರಿಶೀಲಿಸಿತ್ತು. ಈ ವರದಿ ಪಡೆದು ಕಾಮಗಾರಿ ಆರಂಭಿಸುವುದಾಗಿ ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ತಿಳಿಸಿದ್ದರು. ಅದರಂತೆ ಮೊದಲ ಹಂತದಲ್ಲಿ 30-40 ಲಕ್ಷ ರೂ.ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಚಾವಣಿಗೆ ಅಳವಡಿಸಿದ್ದ ಪಿಒಪಿ ಹಾಳಾಗಿದ್ದು, ಮಳೆ ನೀರು ಸೋರಿ ಗೋಡೆಗಳು ಹಾಳಾಗಿದ್ದವು. ಸದ್ಯ ಪಿಒಪಿ ಕಾಮಗಾರಿ ಆರಂಭವಾಗಿದ್ದು, ಪೇಂಟಿಂಗ್ ಕೆಲಸ ನಡೆಯುತ್ತಿದೆ.

ಪಂದ್ಯಗಳು ನಡೆದಾಗ ಆಟಗಾರರು, ಸಿಬ್ಬಂದಿ ಉಳಿದುಕೊಳ್ಳಲು ಜಿಮ್ಖಾನ ಕ್ಲಬ್, ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಬಾಡಿಗೆ ಪಡೆಯಲಾಗುತ್ತಿದೆ. ಕ್ರೀಡಾಕೇಂದ್ರದ ಕಾಮಗಾರಿ ಪೂರ್ಣಗೊಂಡರೆ ಇಲ್ಲಿಯೇ ಆಟಗಾರರಿಗೆ ವ್ಯವಸ್ಥೆ ಕಲ್ಪಿಸಬಹುದು. ವೆಚ್ಚ ಸಹ ಉಳಿತಾಯವಾಗಲಿದೆ ಎನ್ನುತ್ತಾರೆ ಎಂದು ಕ್ರೀಡಾಪಟುಗಳು.

16.6 ಎಕರೆಯಲ್ಲಿ ಕ್ರೀಡಾಂಗಣ

ಕೆಎಸ್‌ಸಿಎ ಮೈದಾನ 16.5 ಎಕರೆ ಜಾಗ ಇದ್ದು, ಎಂಟು ಮುಖ್ಯ ಪಿಚ್, 10 ಅಭ್ಯಾಸ ಪಿಚ್ ಮತ್ತು 2 ಕಾಂಕ್ರೀಟ್ ಪಿಚ್‌ಗಳಿವೆ. ಸದ್ಯ ಎಲ್‌ಇಡಿ ಫ್ಲಡ್‌ಲೈಟ್ ಅಳವಡಿಸುವ ಕಾಮಗಾರಿ ನಡೆದಿದೆ. ಅನಿವಾರ್ಯ ಕಾರಣದಿಂದ ಇತ್ತೀಚೆಗೆ ಇಲ್ಲಿ ರಣಜಿ ಫೈನಲ್ ಪಂದ್ಯ ನಡೆದಿತ್ತು ಎನ್ನುತ್ತಾರೆ ಕ್ರೀಡಾಪಟುಗಳು.

30-40 ಲಕ್ಷ ರೂ.ಮೊತ್ತದಲ್ಲಿ ಕ್ಲಬ್ ಹೌಸ್‌ನ ವಿವಿಧ ಕಾಮಗಾರಿ ಆರಂಭವಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು.

■ ವೀರಣ್ಣ ಸವಡಿ,
ನಿಮಂತ್ರಕ ಧಾರವಾಡ ವಲಯ ಕೆಎಸ್‌ಸಿಎ

ಐವರಿಕೋಸ್ಟ್ ಗೆಲ್ಲಿಸಿದ ಡಿಯಾಲೊ

- ಗೋಲ್‌ಲೆಸ್ ಡ್ರಾ ಫಲಿತಾಂಶ ನಿರೀಕ್ಷೆಯಿದ್ದ ಪಂದ್ಯ
- ಈಕ್ವೆಡಾರ್ ವಿರುದ್ಧ ಐವರಿಕೋಸ್ಟ್‌ಗೆ 1-0 ಜಯ

ಫಿಲಡೆಲ್ಫಿಯಾ(ಅಮೆರಿಕ): ಅಮದ್ ಡಿಯಾಲೊ 90ನೇ ನಿಮಿಷದಲ್ಲಿ ಚೊಚ್ಚಲ ವಿಶ್ವಕಪ್ ಗೋಲ್ ಹೊಡೆಯುವ ಮೂಲಕ ಐವರಿಕೋಸ್ಟ್‌ನ ರೋಚಕ ಗೆಲುವಿನ ರೂವಾರಿ ಆಗಿಬಿಟ್ಟರು. ಪಂದ್ಯವು ಈ ಬಾರಿಯ ವಿಶ್ವಕಪ್‌ನ ಮೊದಲ ಗೋಲ್‌ಲೆಸ್ ಡ್ರಾ ಫಲಿತಾಂಶ ಕಾಣುತ್ತದೆ ಎಂದೇ ನಿರೀಕ್ಷಿಸಲಾಗಿತ್ತು. ಆದರೆ ಡಿಯಾಲೊ ಡ್ರಾ ಆಗಬೇಕಿದ್ದ ಪಂದ್ಯವನ್ನು ಗೆಲ್ಲಿಸಿಕೊಟ್ಟರು.

ಸೋಮವಾರ ಬೆಳಗ್ಗಿನ ಪಂದ್ಯದಲ್ಲಿ ಈಕ್ವೆಡಾರ್ ಎದುರು 1-0 ಅಂತರದಿಂದ ಐವರಿಕೋಸ್ಟ್ ಗೆಲುವು ಸಾಧಿಸಿತು. ಸುಮಾರು ಹನ್ನೆರಡು ವರ್ಷಗಳ ಬಳಿಕ ವಿಶ್ವಕಪ್ ಅರ್ಹತೆ ಸಂಪಾದಿಸಿದ ಐವರಿಕೋಸ್ಟ್ ಮೊದಲ ಪಂದ್ಯದಲ್ಲೇ ಗೆಲುವಿನ ಕೇಕೆ ಹಾಕಿದೆ. 56ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದ ಡಿಯಾಲೊ ಎಡಗಾಲಿನ ಮೂಲಕ ಅದೃಷ್ಟದ ಬಾಗಿಲು ತೆರೆದರು. ಚೆಂಡನ್ನು ಈಕ್ವೆಡಾರ್ ಗೋಲಿ ಹರ್ನಾನ್ ಗಾಲಿಂಡೆಜ್ ಅವರಿಗೆ ತಡೆಯಲು ಸಾಧ್ಯವಾಗಲಿಲ್ಲ. ವಿಲ್‌ಫ್ರೆಡ್ ಸಿಂಗೊ ಬಲದಿಂದ ಡಿಯಾಲೊಗೆ ಚೆಂಡನ್ನು ಪಾಸ್ ಮಾಡಿದ್ದರು. ವಿಶ್ವಕಪ್‌ನಲ್ಲಿ 2014ರ ಬಳಿಕ ಮೊದಲ ಬಾರಿ ಕಾಣಿಸಿಕೊಂಡರೂ ಐವರಿಕೋಸ್ಟ್‌ಗಿದು ನಾಲ್ಕನೇ ವಿಶ್ವಕಪ್. ಅಚ್ಚರಿಯ ಫಲಿತಾಂಶ ನೀಡಿದರೆ ಐವರಿಕೋಸ್ಟ್ ಇದೇ ಮೊದಲ ಬಾರಿಗೆ ನಾಕೌಟ್ ಹಂತವನ್ನು ಪ್ರವೇಶಿಸುವ ಅವಕಾಶ ಹೊಂದಿದೆ.

ನಮಗೆ ಗೆಲುವಿನ ಅವಶ್ಯಕತೆ ಇತ್ತು. ನಾವಿಲ್ಲಿ ಇತಿಹಾಸ ಬರೆಯಲು ಬಂದಿದ್ದೇವೆ. ಇದು ನಮಗೆಲ್ಲರಿಗೂ ಮೊದಲ ಪ್ರಮುಖ ಟೂರ್ನಿ. ನಾವು ಉತ್ಸಾಹದಲ್ಲಿದ್ದೇವೆ.

■ ಅಮದ್ ಡಿಯಾಲೊ, ಗೆಲುವಿನ ರೂವಾರಿ

ತಪ್ಪಿದ ಈಕ್ವೆಡಾರ್ ಅವಕಾಶ

ಐದನೇ ವಿಶ್ವಕಪ್ ಆಡುತ್ತಿರುವ ಈಕ್ವೆಡಾರ್ ಎರಡನೇ ಬಾರಿಗೆ ನಾಕೌಟ್ ಹಂತ ಪ್ರವೇಶಿಸುವ ಅವಕಾಶ ಹೊಂದಿದೆ. ಡಿಯಾಲೊ ಗೋಲ್ ಹೊಡೆಯುವ ಮುನ್ನ ಪಂದ್ಯ ಸಂಪೂರ್ಣ ಈಕ್ವೆಡಾರ್ ಕೈಯಲ್ಲಿತ್ತು. 68ನೇ ನಿಮಿಷದಲ್ಲಿ ಇಕ್ವಾಡೋರ್ ಅತ್ಯುತ್ತಮ ಅವಕಾಶ ಹೊಂದಿತ್ತು. ದುರಾದೃಷ್ಟವಶಾತ್ ಗೊನ್ಜಾಲೊ ಪ್ಲಾಟಾ 25 ಯಾರ್ಡ್ ದೂರದಿಂದ ಹೊಡೆದ ಚೆಂಡನ್ನು ಐವರಿಕೋಸ್ಟ್ ಗೋಲಿ ಯಾಹಿಯಾ ಫೊಫಾನ ತಡೆದಿದ್ದರು.

ಐವರಿಕೋಸ್ಟ್ 1-0 ಇಕ್ವಾಡೋರ್
90ನೇ ನಿಮಿಷ - ಅಮದ್ ಡಿಯಾಲೊ (ಐವರಿಕೋಸ್ಟ್)

ಭಾರತಕ್ಕೆ ಸೂಪರ್ ಓವರ್ ಸೋಲು

ಶ್ರೀಲಂಕಾಗೆ ಜಯ

ದಾಂಬುಲ್ಲಾ: ಶ್ರೀಲಂಕಾ ಎ ಹಾಗೂ ಭಾರತ ಎ ನಡುವಿನ ಏಕದಿನ ಪಂದ್ಯವು ರೋಚಕ ಟೈ ಆಗಿದ್ದು, ಸೂಪರ್ ಓವರ್‌ನಲ್ಲಿ ಶ್ರೀಲಂಕಾ ಗೆಲುವು ದಾಖಲಿಸಿದೆ. ಕೊನೆಯ ಓವರ್‌ನಲ್ಲಿ 5 ರನ್ ಹೊಡೆದು ಸುಲಭದಲ್ಲಿ ಗೆಲ್ಲುವ ಪಂದ್ಯವನ್ನು ಸೂಪರ್ ಓವರ್‌ವರೆಗೆ ಎಳೆದು ತಂದ ಶ್ರೀಲಂಕಾ ಕೊನೆಗೂ ಗೆಲುವಿನ ನಗೆ ಬೀರಿತು. ಟೈ ಫಲಿತಾಂಶ ಬಂದಿದ್ದರಿಂದ ಸೂಪರ್ ಓವರ್ ಆಡಿಸಲಾಗಿದ್ದು, ಈಗ 16 ರನ್ ಬಿಟ್ಟುಕೊಟ್ಟು ದುಬಾರಿಯಾದರು. ಅವಿಷ್ಕಾ ಫೆರ್ನಾಂಡೊ 5ನೇ ಎಸೆತವನ್ನು ಸಿಕ್ಸರ್‌ಗೆ ಅಟ್ಟಿದ್ದರು. 17 ರನ್ ಗುರಿ ಪಡೆದ ಭಾರತ ಎ ಪರ ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಕ್ರೀಸ್‌ಗಿಳಿದಿದ್ದು, ಭಾರತ ಎ ಗೆಲುವಿನ ವಿಶ್ವಾಸದಲ್ಲಿತ್ತು. ಆದರೆ ಮಹಲಿನ್ ಬೌಲಿಂಗ್ ಉತ್ತಮವಾಗಿದ್ದು, ಸೂರ್ಯವಂಶಿ ಕೇವಲ ಮೂರು ಎಸೆತಗಳಲ್ಲಿ 3 ರನ್ ಅಷ್ಟೇ ಮಾಡಿದ್ದರು. ಉಳಿದ ಮೂರು ಎಸೆತಗಳಿಂದ ಸೂರ್ಯವಂಶಿ 1 ಬೌಂಡರಿ ಸಹಿತ 6 ರನ್ ಗಳಿಸಿದರು. ಭಾರತ ಸೋಲೊಪ್ಪಿತು.

ಸಂಕ್ಷಿಪ್ತ ಸ್ಕೋರ್

ಭಾರತ ಎ 265/10(49.2): ಸೂರ್ಯಾಂಶ್ 72, ವಿಪ್ರಜ್ 51. ವಿಜಯಕಾಂತ್ 26ಕ್ಕೆ 3, ಪಿರಾಜ್ 33ಕ್ಕೆ 3.
ಶ್ರೀಲಂಕಾ ಎ 265/9(50): ಸಮರವಿಕ್ರಮ 93, ನಿರೋಷನ್ 37. ಬಡೋನಿ 45ಕ್ಕೆ 2.

ಆಪದ್ಬಾಂಧವ ಕಮಾಡ!

ಆರ್ಲಿಂಗ್ಟನ್(ಅಮೆರಿಕ): ಇನ್ನೇನು ಜಪಾನ್ 2026ರ ವಿಶ್ವಕಪ್‌ನಲ್ಲಿ ತನ್ನ ಮೊದಲ ಸೋಲುಂಡಿತು ಎನ್ನುವಷ್ಟರಲ್ಲಿ 89ನೇ ನಿಮಿಷದಲ್ಲಿ ಇಕ್ವಲೈಸರ್ ಗೋಲ್ ದಾಖಲಿಸುವ ಮೂಲಕ ನೆದರ್‌ಲೆಂಡ್ಸ್ ವಿರುದ್ಧದ ಸೋಲನ್ನು ತಪ್ಪಿಸಿದರು. ಸೋಮವಾರ ಎಫ್ ಗುಂಪಿನ ಪಂದ್ಯದಲ್ಲಿ ಜಪಾನ್ ತನಗಿಂತ ಮೇಲಿನ ರ‍್ಯಾಂಕ್‌ನ ನೆದರ್‌ಲೆಂಡ್ಸ್‌ಗೆ ಉತ್ತಮ ಹೋರಾಟ ನೀಡಿದ್ದು, ಸೋಲೊಪ್ಪಲಿಲ್ಲ. ಸಹ ಆಟಗಾರ ಕೊಕಿ ಒಗಾವಾ ನೀಡಿದ ಹೆಡ್ಡರ್ ಬಳಸಿಕೊಂಡು ಕಮಾಡ ಸ್ಕೋರ್ ಮಾಡಿದ್ದರು. ನೆದರ್‌ಲೆಂಡ್ ಗೋಲಿ ಬಾರ್ಟ್ ವರ್‌ಬ್ರುಗೆನ್ ತಡೆಯುವಲ್ಲಿ ವಿಫಲರಾದರು. ಪಂದ್ಯ ಡ್ರಾ ಫಲಿತಾಂಶ ಕಂಡಿತು.

ನೆದರ್‌ಲೆಂಡ್ಸ್ 2-2 ಜಪಾನ್

- 51ನೇ ನಿಮಿಷ - ವಾನ್ ಡಿಜೆಕ (ನೆದರ್‌ಲೆಂಡ್ಸ್)
- 57ನೇ ನಿಮಿಷ - ಕೀಟೊ ನಕಮುರ (ಜಪಾನ್)
- 64ನೇ ನಿಮಿಷ - ಕ್ರಿಸೆನ್ಸಿಯೊ ಸಮ್ಮರ್‌ವಿಲ್ಲೆ (ನೆದರ್‌ಲೆಂಡ್ಸ್)
- 89ನೇ ನಿಮಿಷ - ದೈಚಿ ಕಮಾಡ

ಪದಬಂಧ

ರಾಜಾ ಸಂಗಮೇಶ ಹಿರೇಮಠ



6016

6015 ಉತ್ತರ

ಎಡದಿಂದ ಬಲಕ್ಕೆ:
1.ಬುದ್ಧ 2.ಸಂನ್ಯಾಸ
4.ತಂಪು 6.ರಾಜದ್ರೋಹ
8.ಬಲಭಾಗ 11.ಕದನದ
13.ಪದಕರ 15.ಪೆಟ್ಟು
16.ಕವಲು 17.ಬಂಡಿ
ಮೇಲಿನಿಂದ ಕೆಳಕ್ಕೆ
: 1.ಬದಕಲು
2.ಸಂಧ್ಯಾರಾಗ 3.ಸಹಾರಾ
5.ಮುರಹರ 7.ಜನದನಿ
9.ಭಾಗ್ಯವಂತ
10.ಸಂಪನ್ನತೆ
11.ಕಲ್ಲಿದ್ದಲು
12.ದಣಿವರಿ 14.ದಟಿ

ಎಡದಿಂದ ಬಲಕ್ಕೆ
1.ನೋಡಲು ಆಕರ್ಷಕವಾಗಿರುವಂಥದ್ದು (4)
3.ಅನಿರೀಕ್ಷಿತ ಘಟನೆಯಿಂದ ಗಾಬರಿಯಾಗು (4)
6.ಪಕ್ಷಿಗಳ ಇಂಪಾದ ಶಬ್ದ (4)
7.ನಾಗರಹಾವು ಚಿತ್ರದ ಕೇಂದ್ರಪಾತ್ರ (4)
8.ಗಡಿಯನ್ನು ಕಡೆಯಲ್ಲಿಟ್ಟುಕೊಂಡ ಕುಂಬಾರನ ಚಕ್ರ (3)
10.ವಾಣಿಜ್ಯ ವ್ಯವಹಾರ ಮಾಡುವವನು (3)
12.ಒಳ್ಳೆಯ ಮಗಳು-ಸುಪುತ್ರಿ (4)
13.ಬೆಲೆಯುಳ್ಳ ಮಣಿಗಳ ಗಣಿ-ಸಮುದ್ರ (4)
16.ಎಲ್ಲೆಯನ್ನು ಸೂಚಿಸಲು ನೆಟ್ಟ ಶಿಲೆ (4)
17.ರೋಗಿಗಳಿಗೆ ಚಿಕಿತ್ಸೆ ನೀಡುವ ಮನೆ (4)
ಮೇಲಿನಿಂದ ಕೆಳಕ್ಕೆ
1.ಈಶ ಹಿರಿಯ ಸಹೋದರ (2)
2.ಚಿತ್ರದುರ್ಗದ ಪಾಳೆಗಾರರಲ್ಲಿ ಪ್ರಸಿದ್ಧ ನಾಯಕ (4)
4.ಸತ್ವ ಭಾವ ಹೊಂದಿರುವ ಸ್ತ್ರೀ (4)
5.ವಸ್ತು-ವಾಹನಗಳು ಪರಸ್ಪರ ಅಪ್ಪಳಿಸುವಿಕೆ (2)
7.ನೀಲಿ-ಕೆಂಪು ಬಣ್ಣದ ಸುಂದರ ಕಮಲ (3)
9.ಕೆಟ್ಟದ್ದನ್ನು ಕೆಲಸ ಮಾಡುವ ಸ್ಥಿತಿ ತರುವುದು (3)
11.ಹಳೆಯ ಕಾಲದ ಲೆಕ್ಕಪತ್ರ ಬರೆವ ಅಧಿಕಾರಿ (4)
12.ಕಲ್ಪನ ಕ್ಷೇತ್ರವನ್ನು ಹೀಗೂ ಹೇಳುತ್ತೇವೆ (4)
14.ಪ್ರಾಣಿಯ ದೇಹದ ಒಂದು ಭಾಗ (2)
15.ಕಾಣದಾಗುವಿಕೆ-ಮರೆಯಾಗುವಿಕೆ (2)

ಮಹಿಳೆಯರಿಂದ ರಂಗೋಲಿ ಸ್ಪರ್ಧೆ, ಬಿಜೆಪಿ, ಜೆಡಿಎಸ್ ಮುಖಂಡರಿಂದಲೂ ಮನವಿ ಪತ್ರ

ಪಕ್ಷಾತೀತವಾಗಿ ರಂಗೋಲಿ ಸ್ಪರ್ಧೆ

• **ನೆಲಮಂಗಲ:** ಕ್ಷೇತ್ರದಲ್ಲಿ ಮಹಿಳೆಯರ ಕ್ರಿಯಾಶೀಲತೆ ಹಾಗೂ ಪ್ರತಿಭೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಪಕ್ಷಾತೀತವಾಗಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿದೆ ಎಂದು ನೆಲಮಂಗಲ ಶಾಸಕ ಎನ್.ಶ್ರೀನಿವಾಸ್ ತಿಳಿಸಿದರು.

ತಾಲೂಕಿನ ಟಿ.ಬೇಗೂರು ಗ್ರಾಮ ಪಂಚಾಯಿತಿಯಲ್ಲಿ ನೆಲಮಂಗಲ ಉತ್ಸವ ಹಿನ್ನೆಲೆಯಲ್ಲಿ ಆಯೋಜಿಸಲಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ ವಿಜೇತ ಮಹಿಳೆಯರಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಕ್ಷೇತ್ರದ ಜನರು ನನಗೆ ಮತ ಹಾಕಿ ಯುವಕನನ್ನು ಶಾಸಕನನ್ನಾಗಿ ಮಾಡಿದ್ದಾರೆ. ಗ್ರಾಮಗಳಿಗೆ ಶಾಸಕ ಬರಲಿಲ್ಲ ಎಂಬ ಆರೋಪಗಳು ನನ್ನ ಮೇಲೆ ಬರಬಾರದು, ನಾನು ನೇರವಾಗಿ ಮಹಿಳೆಯರನ್ನು ಭೇಟಿ ಮಾಡಿ ಅವರ ಸಮಸ್ಯೆಗಳನ್ನು ಆಲಿಸಿ, ಅವರ ಪ್ರತಿಭೆ ಗುರುತಿಸುವ ಕೆಲಸ ಮಾಡಬೇಕು ಎಂದು ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಪ್ರತಿ ಗ್ರಾಮದಲ್ಲಿ ಸ್ವಯಂ ಪ್ರೇರಣೆಯಿಂದ ಮಹಿಳೆಯರು ರಂಗೋಲಿ ಬಿಟ್ಟು ಅವರ ಸಮಸ್ಯೆಗಳನ್ನು ಹೇಳುವಾಗ ನಾನು ಕ್ಷೇತ್ರಕ್ಕೆ ಮಾಡುವ ಸೇವೆಗಳನ್ನು ನೆನಪು ಮಾಡಿಕೊಳ್ಳುತ್ತಿರುವುದು ಮರೆಯುವಂತಿಲ್ಲ ಎಂದರು.

ಎಂಆರ್ ಗ್ರೂಪ್ ಮಾಲೀಕ ರಾದ ರಶ್ಮಿಮಂಜೇಶ್ ಮಾತನಾಡಿ, ಶಾಸಕರು ಕ್ಷೇತ್ರದಾದ್ಯಂತ ಪ್ರತಿ ಗ್ರಾಮಗಳ ಭೇಟಿಯಿಂದ ಜನರು ನೇರವಾಗಿ ಸಮಸ್ಯೆ ಹೇಳಿಕೊಳ್ಳುವಂತಾಗಿದೆ. ರಂಗೋಲಿಯ ಮೂಲಕ ಮಹಿಳೆಯರ ಪ್ರತಿಭೆ ಗುರುತಿಸುವ ಜತೆಗೆ ಗ್ರಾಮದ ಸಮಸ್ಯೆಗಳಿಗೆ ಧ್ವನಿಯಾಗಿದ್ದಾರೆ. ಸ್ಥಳೀಯ ಗ್ರಾಮ ಪಂಚಾಯಿತಿ ಸದಸ್ಯರಂತೆ ಶಾಸಕರು ಗ್ರಾಮ ಮಟ್ಟದಲ್ಲಿ ಸೇವೆ ಮಾಡುತ್ತಿರುವುದು ಶ್ಲಾಘನೀಯ ಎಂದರು.

ರಂಗೋಲಿ ಸ್ಪರ್ಧೆ: ತಾಲೂಕಿನ ಟಿ.ಬೇಗೂರು ಗ್ರಾಪಂ ವ್ಯಾಪ್ತಿಯ ಟಿ.ಬೇಗೂರು, ಮಾರೋಹಳ್ಳಿ, ಅರಳೇದಿಬ್ಬ, ಆನಂದನಗರ, ತಿರುಮಲಾಪುರ, ಗಂಗೈರಪ್ಪನಪಾಳ್ಯ, ಕೆಂಪೋಹಳ್ಳಿ, ಗೆದ್ದಲಹಳ್ಳಿ, ಆಗಲಹಳ್ಳಿ, ಭೈರನಹಳ್ಳಿ, ಕಂಬಯ್ಯನಪಾಳ್ಯದಲ್ಲಿ ನಡೆದ ರಂಗೋಲಿ ಸ್ಪರ್ಧೆಯಲ್ಲಿ 2500ಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸಿದ್ದರು. ವಿಜೇತ ಮಹಿಳೆಯರಿಗೆ ಬಹುಮಾನ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಎಸ್‌ಪಿಎ ಅಧ್ಯಕ್ಷ ಎಂ.ಕೆ.ನಾಗರಾಜು, ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಮುನಿರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್‌ಗೌಡ, ಗ್ರಾಪಂ ಮಾಜಿ ಸದಸ್ಯ ವೆಂಕಟೇಶ್, ಗಣೇಶ್, ಜಿಲ್ಲಾ ಕೆಡಿಪಿ ಸದಸ್ಯ ನಾರಾಯಣಗೌಡ, ಯುವಮುಖಂಡ ಮಂಜೇಶ್, ಮಂಜುನಾಥ್, ವೆಂಕಟೇಶ್, ಗಂಗರಾಜು, ಪ್ರಕಾಶ್, ಹನುಮಂತರಾಜು, ಹನುಮಂತಯ್ಯ, ಸಿ.ಎಂ.ಗೌಡ ಮನುಕಾಚನಹಳ್ಳಿ ಮತ್ತಿತರರಿದ್ದರು.

ಬಿಜೆಪಿ,ಜೆಡಿಎಸ್ ಮುಖಂಡರ ಮನವಿ

ಟಿ.ಬೇಗೂರು ಗ್ರಾಮದಲ್ಲಿ ಕಳೆದ 15ರಿಂದ 20 ವರ್ಷಗಳಿಂದ ಸ್ಮಶಾನ ಜಾಗದ ಸಮಸ್ಯೆಯಾಗಿದೆ. ಸರಕಾರಿ ಜಾಗ ಒತ್ತುವರಿಯಾಗಿದೆ ಅದನ್ನು ಸರಕಾರಕ್ಕೆ ಪಡೆದು ಸ್ಮಶಾನ ಜಾಗಕ್ಕೆ ಮೀಸಲಿರಿಸಬೇಕು ಎಂದು ನೆಲಮಂಗಲ ಶಾಸಕ ಎನ್.ಶ್ರೀನಿವಾಸ್‌ಗೆ ಬಿಜೆಪಿ, ಜೆಡಿಎಸ್ ಮುಖಂಡರು ಮನವಿ ಪತ್ರ ನೀಡಿ ಕೇಳಿಕೊಂಡರು. ಸ್ಪಂದನೆ ನೀಡಿದ ಶಾಸಕರು ಸ್ಥಳದಲ್ಲಿಯೇ ತಹಸೀಲ್ದಾರ್‌ಗೆ ಕರೆಮಾಡಿ ಕ್ರಮವಹಿಸುವಂತೆ ಸೂಚನೆ ನೀಡಿದರು.

ಕಾರ್ಯಕರ್ತರ ಸಮಾವೇಶದಲ್ಲಿ ಎಂ.ಕೃಷ್ಣಪ್ಪ ಅಭಿಮತ

ಗೆಲ್ಲಲು ಕಾರ್ಯಕರ್ತರೇ ಕಾರಣ

• **ಆನೇಕಲ್:** ಕಾರ್ಯಕರ್ತರ ನಿಷ್ಠೆ, ಶ್ರಮ ಮತ್ತು ಜನರ ವಿಶ್ವಾಸವೇ ನಮ್ಮ ಶಕ್ತಿಯಾಗಿದೆ. ಅಧಿಕಾರ ಸ್ವೀಕರಿಸಿದ ಪದಾಧಿಕಾರಿಗಳು ಜನಸೇವೆ ಹಾಗೂ ಸಂಘಟನೆಯ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವಂತೆ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಕರೆ ನೀಡಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬನ್ನೇರುಘಟ್ಟದಲ್ಲಿ ಗ್ರಾಮಾಂತರ ಮಂಡಲದ ಕಾರ್ಯಕರ್ತರ ಸಮಾವೇಶ ಹಾಗೂ ಜವಾಬ್ದಾರಿ ಹಂಚಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ನಾಯಕನ ಗೆಲುವಿನಲ್ಲೂ ಕಾರ್ಯಕರ್ತರ ಪಾತ್ರ ಹೆಚ್ಚಿರುತ್ತದೆ. ಅವರ ಬಲವಿದ್ದರೆ ಮಾತ್ರ ಬಿಜೆಪಿಗೆ ಸರ್ಕಾರ ರಚಿಸಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಪಕ್ಷದ ತತ್ವ, ಸಿದ್ಧಾಂತಗಳನ್ನು ಪ್ರಚಾರ ಮಾಡಲು ಕ್ರಿಯಾಶೀಲ ಚಟುವಟಿಕೆ ರೂಪಿಸಬೇಕು. ಪ್ರತಿ ಬೂತ್‌ಗಳಲ್ಲೂ ಸೇವಾ ಮತ್ತು ಸಂಪರ್ಕದ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಈ ಸಮಯದಿಂದಲೇ ಚುನಾವಣೆಗೆ ಕಾರ್ಯಕರ್ತರು ಸಜ್ಜಾಗಬೇಕು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಯುವ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ನವೀನ್ ರೆಡ್ಡಿ ಅವರಿಗೆ ಶಾಸಕ ಎಂ.ಕೃಷ್ಣಪ್ಪ ಶಾಲು ಹೊದಿಸಿ ಜವಾಬ್ದಾರಿ ವಹಿಸಿಕೊಟ್ಟರು. ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಭಾರತಿ ವೆಂಕಟೇಶ್ ಗೌಡ, ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷರಾಗಿ ರಘುರಾಮ್, ಎಸ್‌ಸಿ ಮೋರ್ಚಾ ಅಧ್ಯಕ್ಷರಾಗಿ ಜಿ.ಪಿ.ಕೃಷ್ಣಪ್ಪ, ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾಗಿ ಮನ್ಸೂರ್ ಸಾಬ್, ರೈತ ಮೋರ್ಚಾ ಅಧ್ಯಕ್ಷರಾಗಿ ಚೇತನ್ ರವರಿಗೆ ನೇಮಕಾತಿ ಪತ್ರ ವಿತರಿಸಿದರು.

ಮಂಡಲಾಧ್ಯಕ್ಷ ಹರೀಶ್ ರೆಡ್ಡಿ , ಜಿಲ್ಲಾ ಪದಾಧಿಕಾರಿಗಳಾದ ಲಕ್ಷ್ಮೀಕಾಂತ್ ರೆಡ್ಡಿ, ರಾಜಶೇಖರ್ ರೆಡ್ಡಿ , ಪ್ರಧಾನ ಕಾರ್ಯದರ್ಶಿಗಳಾದ ಶಶಿಕುಮಾರ್, ಪರಶುರಾಮ್, ಸಾಮಾಜಿಕ ಜಾಲತಾಣ ವಿಭಾಗದ ಸಂದೀಪಕುಮಾರ್ ಸೇರಿದಂತೆ ಗ್ರಾಮಾಂತರ ಭಾಗದ ಮುಖಂಡರು, ಗಣ್ಯರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಒಕ್ಕಲಿಗ ಸಮುದಾಯ ಒಗ್ಗಟ್ಟು ಪ್ರದರ್ಶಿಸಲಿ

• **ಯಲಹಂಕ:** ಒಕ್ಕಲಿಗ ಸಮುದಾಯ ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಸಬಲವಾಗಿದ್ದರೂ ಇತರ ಸಮುದಾಯಗಳಿಗೆ ಹೋಲಿಸಿದರೆ ಸಮುದಾಯಿಕವಾಗಿ ಇನ್ನಷ್ಟು ಹೆಚ್ಚಿನ ಒಗ್ಗಟ್ಟು ಪ್ರದರ್ಶಿಸಬೇಕಾದ ಅಗತ್ಯವಿದೆ ಎಂದು ಸಂಸದ ಡಾ. ಕೆ.ಸುಧಾಕರ್ ಅಭಿಪ್ರಾಯಪಟ್ಟರು.

ಜೂ.27ರಂದು ಯಲಹಂಕ ತಾಲೂಕು ಒಕ್ಕಲಿಗರ ಸಂಘದಿಂದ ಆಯೋಜಿಸಿರುವ ನಾಡಪ್ರಭು ಕೆಂಪೇಗೌಡ ಜಯಂತಿಯ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ವಿಧಾನಸೌಧದ ನಿರ್ಮಾತೃ ಕೆಂಗಲ್ ಹನುಮಂತಯ್ಯ, ದೆಹಲಿಯ ಕೆಂಪುಕೋಟೆಯ ಮೇಲೆ ಕರ್ನಾಟಕದ ಧ್ವಜ ಹಾರಿಸಿದ ಹಿರಿಯ ಮುತ್ಸದ್ದಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಒಕ್ಕಲಿಗ ಸಮುದಾಯಕ್ಕೆ ಸೇರಿದವರು ಎಂಬುದು ಹೆಮ್ಮೆಯ ಸಂಗತಿ. ಪ್ರಸ್ತುತವಾಗಿ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದಿರುವ ಡಿ.ಕೆ.ಶಿವಕುಮಾರ್ ಸಹ ಒಕ್ಕಲಿಗ ಸಮುದಾಯವರೇ ಆಗಿದ್ದಾರೆ. ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ರಂತಹ ಅಪ್ರತಿಮ ಆಡಳಿತಗಾರರನ್ನು ರಾಜ್ಯಕ್ಕೆ ನೀಡಿದ ಹಿರಿಮೆ ಒಕ್ಕಲಿಗ ಸಮುದಾಯಕ್ಕಿದೆ. ಹೀಗಿದ್ದೂ ಸಹ ಸಾಮುದಾಯಿಕ ವಾಗಿ ಒಕ್ಕಲಿಗರು ಇನ್ನಷ್ಟು ಹೆಚ್ಚಿನ ಒಗ್ಗಟ್ಟು ಪ್ರದರ್ಶಿಸ ಬೇಕಾದ ಅಗತ್ಯವಿದೆ ಎಂದರು.

ಇತ್ತೀಚೆಗೆ ಚಿಕ್ಕಪುಟ್ಟ ಸಮುದಾಯಗಳು ಸಹ ಒಗ್ಗಟ್ಟಿನ ವಿಷಯದಲ್ಲಿ ಒಕ್ಕಲಿಗ ಸಮುದಾಯಕ್ಕಿಂತಲೂ ಮುಂಚೂಣಿಯಲ್ಲಿವೆ. ಇದನ್ನು ಒಕ್ಕಲಿಗ ಸಮುದಾಯ ಅರ್ಥೈಸಿಕೊಂಡು ಇನ್ನಷ್ಟು ಹೆಚ್ಚಿನ ಒಗ್ಗಟ್ಟು ಪ್ರದರ್ಶಿಸುವ ಮೂಲಕ ಸಾಮುದಾಯಿಕ ಪ್ರಗತಿಗೆ ಇಂಬು ನೀಡಬೇಕಿದೆ. ನಾಡಪ್ರಭು ಕೆಂಪೇಗೌಡರು ಬೆಂಗಳೂರು ನಗರವನ್ನು ಅತ್ಯಂತ ಸುಸಜ್ಜಿತ ರೀತಿಯಲ್ಲಿ ಕಟ್ಟಿದ ನಿರ್ಮಾತೃ. ಅಂತಹ ಮಹಾನ್ ಪುರುಷರ ಜಯಂತಿಯನ್ನು ಜೂನ್ 27ರಂದು ಒಕ್ಕಲಿಗ ಸಮುದಾಯದ ಜನತೆ ಇತರೆ ಸಮುದಾಯಗಳನ್ನು ಒಳಗೊಂಡು ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಿದ್ದು, ರಾಜ್ಯ ಒಕ್ಕಲಿಗರ ಸಂಘ ಸಹ ಈ ಕಾರ್ಯಕ್ರಮಕ್ಕೆ ತಮ್ಮ ಅಮೂಲ್ಯ ಸಹಕಾರ ನೀಡುವ ಮೂಲಕ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಲಿದೆ ಎಂದರು.

ಶತಾವಧಾನಿ ಡಾ.ಆರ್.ಗಣೇಶ್‌ಗೆ ಅಭಿನಂದನೆ

• **ಬೆಂಗಳೂರು:** ಶತಾವಧಾನಿ ಹಾಗೂ ಶ್ರೇಷ್ಠ ಗಮಕ ವ್ಯಾಖ್ಯಾನಕಾರರೂ ಆದ ಡಾ. ಆರ್. ಗಣೇಶ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ದೊರೆತಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗಮಕ ಕಲಾ ಪರಿಷತ್ತು ವತಿಯಿಂದ ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಅಭಿನಂದನಾ ಕಾರ್ಯಕ್ರಮ ಏರ್ಪಡಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗಮಕ ಕಲಾ ಪರಿಷತ್ತಿನ ಅಧ್ಯಕ್ಷ ಡಾ. ಎ.ವಿ.ಪ್ರಸನ್ನ ಮತ್ತು ಮುಖ್ಯ ಅತಿಥಿ ಲೇಖಕ ಡಾ. ಬಾಬು ಕೃಷ್ಣಮೂರ್ತಿ ಅವರು ಪದ್ಮಭೂಷಣ ಪುರಸ್ಕೃತ ಡಾ. ಆರ್.ಗಣೇಶ್ ಅವರಿಗೆ ಸನ್ಮಾನ ಪತ್ರ ನೀಡಿ ಅಭಿನಂದಿಸಿದರು. ಡಾ. ಬಾಬು ಕೃಷ್ಣಮೂರ್ತಿ ಅವರು ಡಾ.ಆರ್. ಗಣೇಶ್ ಅವರ ಕುರಿತು ಅಭಿನಂದನಾ ಮಾತುಗಳನ್ನಾಡಿದರು.

ಸಭಾ ಕಾರ್ಯಕ್ರಮಕ್ಕೂ ಮುನ್ನ ನಿರ್ಮಲಾ ಪ್ರಸನ್ನ ಮತ್ತು ಡಾ. ಎ.ವಿ. ಪ್ರಸನ್ನ ಅವರಿಂದ ಕುಮಾರವ್ಯಾಸ ಭಾರತದ ದ್ರೌಪದಿ–ಪ್ರಾತಿಕಾಮಿಕ ಸಂವಾದ ಎಂಬ ಕಥಾಭಾಗದ ವಾಚನ–ವ್ಯಾಖ್ಯಾನ ಸಂಪನ್ನಗೊಂಡಿತು. ತರುವಾಯ ಅಭಿನಂದನಾ ಕಾರ್ಯಕ್ರಮದಲ್ಲಿ ವಿವಿಧ ವಿದ್ವಾಂಸರು ಕನ್ನಡ ಮತ್ತು ಸಂಸ್ಕೃತದಲ್ಲಿ ಡಾ. ಆರ್. ಗಣೇಶ್ ಅವರ ಕುರಿತಾಗಿ ರಚಿಸಿದ ಅಭಿನಂದನಾ ಪದ್ಯಗಳನ್ನು ಮಂಜುಳಾ ಮರಾಠೆ ಅವರು ಗಮಕ ವಾಚನದ ಮೂಲಕ ಪ್ರಸ್ತುತಪಡಿಸಿದರು.

ಸಂತೋಷ ಭಾರದ್ವಾಜ್ ಅವರು ಡಾ. ಆರ್.ಗಣೇಶ್ ಅವರ ಸಾಧನೆಗಳ ಬಗ್ಗೆ ಪರಿಚಯಿಸಿದರು. ಕೃ.ಪಾ. ಮಂಜುನಾಥ ವಂದಿಸಿದರು. ಕಾರ್ಯದರ್ಶಿಗಳಾದ ದಕ್ಷಿಣಾಮೂರ್ತಿ ಮತ್ತು ರೂಪಶ್ರೀ ಕಾರ್ಯಕ್ರಮ ನಿರ್ವಹಿಸಿದರು.

ಶಿಕ್ಷಣವಂಚಿತ ಸಮಾಜದ ಅಭಿವೃದ್ಧಿ ಕುಂಠಿತ: ಶ್ರೀ

• **ಕೆಂಗೇರಿ:** ಪೋಷಣೆ ದೊರಕದ ದೇಹವು ಸೊರಗುತ್ತದೆ ಅದರಂತೆ ಸಮಕಾಲೀನ ಅಗತ್ಯತೆ ಹಾಗೂ ನಿರೀಕ್ಷೆಗೆ ಪೂರಕವಾದ ಶಿಕ್ಷಣ ಪಡೆಯದ ಸಮಾಜ ಹಾಗೂ ದೇಶ ಅಭಿವೃದ್ಧಿಯಲ್ಲಿ ಕುಂಠಿತವಾಗುತ್ತದೆ ಎಂದು ಆದಿ ಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು. ಕೆಂಗೇರಿ – ಉತ್ತರಹಳ್ಳಿ ಮುಖ್ಯ ರಸ್ತೆಯಲ್ಲಿರುವ ಎಸ್‌ಜೆಬಿಐಟಿ ಕಾಲೇಜಿನ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ನೀಡಿ ಮಾತನಾಡಿದ ಅವರು, ಭಾರತೀಯ ಪರಂಪರೆಯಲ್ಲಿ ಜ್ಞಾನ ಹಾಗೂ ಶಿಕ್ಷಣವನ್ನು ಇಂದಿನಂತೆ ಉದ್ಯೋಗದ ರಹದಾರಿ ಹಾಗೂ ಪರವಾನಿಗೆಯಂತೆ ಬಳಕೆ ಮಾಡುವ ಪ್ರತೀತಿ ಇರಲಿಲ್ಲ, ಶಿಕ್ಷಣವು ಮಾನವ ಜನಾಂಗವನ್ನು ಅಜ್ಞಾನದಿಂದ ಸುಜ್ಞಾನದೆಡೆಗೆ ಕೊಂಡೊಯ್ದು ಮುಕ್ತಿ ನೀಡುವ ಕ್ರಮವೆಂದು ಭಾವಿಸಲಾಗುತ್ತಿತ್ತು. ಬದಲಾದ ಕಾಲ ಘಟ್ಟದಲ್ಲಿ ಶಿಕ್ಷಣಕ್ಕೆ ನೂತನ ವ್ಯಾಖ್ಯಾನ ನೀಡಿದೆ. ಈ ಸಂಕ್ರಮಣದ ನಡುವೆಯೂ ಮಾನವೀಯ ಮೌಲ್ಯ, ವ್ಯಕ್ತಿ ಧರ್ಮ ಹಾಗೂ ಸಾಮಾಜಿಕ ಕಳಕಳಿಯನ್ನು ಕಾಪಾಡಿಕೊಂಡು ಸಾಗುವ ಜವಾಬ್ದಾರಿ ಯುವ ಜನಾಂಗದ ಮೇಲಿದೆ ಎಂದು ಹೇಳಿದರು.

ಮಾರ್ನಿಂಗ್ ಶೋ

ಹೊಸ ಜೀವನ

ರಂಗಾಯಣ ರಘು ನಟನೆಯ 400ನೇ ಚಿತ್ರ

ದುನಿಯಾ ಚಿತ್ರದಲ್ಲಿ ರಂಗಾಯಣದ ಪ್ರತಿಭೆಯೊಂದು ತಲೆ ಬಾಚ್ಕೋಳಿ...ಪೌಡ್ರು ಹಾಕೊಳಿ... ಅಂತ ಹೇಳಿದ ಡೈಲಾಗ್ ಒಂದು ಕಾಲದಲ್ಲಿ ಮನೆ ಮಾತಾಗಿತ್ತು, ಆ ಡೈಲಾಗ್ ಹೇಳಿದ್ದು ಬೇರಾರೂ ಅಲ್ಲ, ಪೋಷಕ ನಟ ರಂಗಾಯಣ ರಘು. ರಂಗಾಯಣದ ಮೂಲಕ ರಂಗಭೂಮಿಯಲ್ಲಿ ನಟನೆ ಆರಂಭಿಸಿ ನಂತರ ಚಿತ್ರರಂಗದಲ್ಲಿ ಬಹುಬೇಡಿಕೆಯ ಪೋಷಕ ನಟನಾಗಿ ಬೆಳೆದ ಅವರೀಗ ತಮ್ಮ 400ನೇ ಚಿತ್ರದಲ್ಲಿ ಅಭಿನಯಿಸುತ್ತಿದ್ದಾರೆ.

ಹಿರಿಯನಟ ರಂಗಾಯಣ ರಘು ಅವರ 400ನೇ ಚಿತ್ರದ ಹೆಸರು ಹೊಸ ಜೀವನ. ಈ ಆಕರ್ಷಕ ಶೀರ್ಷಿಕೆಯ ಚಿತ್ರಕ್ಕೆ ಡಾಲಿ ಧನಂಜಯ್ ಅವರು ಸಾಥ್ ಕೊಟ್ಟಿದ್ದಾರೆ. ನಟರಾಕ್ಷಸ ಡಾಲಿ ಧನಂಜಯ್ ಅವರು ಹೊಸ ಜೀವನ ಚಿತ್ರದ ಟೈಟಲ್ ಲಾಂಚ್ ಮಾಡಿ ಚಿತ್ರತಂಡಕ್ಕೆ ಶುಭಾಶಯ ತಿಳಿಸಿದ್ದಾರೆ. ಒಂದಷ್ಟು ಕಿರುಚಿತ್ರಗಳ ನಿರ್ದೇಶನ ಮಾಡಿರುವ ಮೋಹನ್‌ಕುಮಾರ್ ಹನುಮಯ್ಯ ಅವರು ಈ ಚಿತ್ರದ ಮೂಲಕ ಪೂರ್ಣ ಪ್ರಮಾಣದ ನಿರ್ದೇಶಕರಾಗಿ ಬಡ್ತಿ ಹೊಂದಿದ್ದಾರೆ. ಇವರ ನಿರ್ದೇಶನ ಸಾರಥ್ಯದಲ್ಲಿ ಮೂಡಿಬರುತ್ತಿರುವ ಹೊಸ ಜೀವನ ಸಿನಿಮಾದ ಪ್ರಮುಖ ಪಾತ್ರದಲ್ಲಿ ರಂಗಾಯಣ ರಘು, ಪ್ರಭು ಮುಂಡ್ಕೂರ್, ಸ್ವಾತಿ ಮುಪ್ಪಾಲ, ಅಚ್ಯುತ್‌ಕುಮಾರ್, ಶಿವರಾಜ್ ಕೆ. ಆರ್. ಪೇಟೆ, ಸುಹಾಸ್ ಆತ್ರೇಯಸ್, ಅಭಿ ಸಾಮ್ರಾಟ್, ಉದಯ್‌ಆಚಾರ್ ಅಭಿನಯಿಸುತ್ತಿದ್ದಾರೆ.

ಜಿ.ಎಸ್. ಸಂಜೀವ್‌ಪ್ರಸಾದ್ ಅವರು ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನಿರ್ದೇಶನದ ಜವಾಬ್ದಾರಿಯ ಜತೆಗೆ ಮೋಹನ್ ಕುಮಾರ್ ಹನುಮಯ್ಯ ಅವರು ಈ ಚಿತ್ರ ನಿರ್ಮಾಣದಲ್ಲೂ ಸಹ ಸಾಥ್ ಕೊಟ್ಟಿದ್ದಾರೆ. ಅರ್ಜುನ್ ಪ್ರೊಡಕ್ಷನ್ ಹಾಗೂ ಚರು ಪ್ರೊಡಕ್ಷನ್ ಒಟ್ಟಿಗೆ ಸೇರಿ ಹೊಸ ಜೀವನ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಹೊಸ ಜೀವನ ಚಿತ್ರಕ್ಕೆ ಸುಮುಖರಾವ್ ಅವರು ಸಂಗೀತ ನಿರ್ದೇಶನ ಮಾಡಿದ್ದು, ಸುನಾದ್ ಗೌತಮ್ ಅವರ ಹಿನ್ನೆಲೆ ಸಂಗೀತ ಒದಗಿಸಿದ್ದಾರೆ. ಸಂಕಲನದ ಜವಾಬ್ದಾರಿಯನ್ನು ಶಶಿಧರ್‌ಗೌಡ ನಿಭಾಯಿಸಿದ್ದಾರೆ. ರಾಜ್‌ಕಾಂತ್ ಎಸ್. ಕ್ಯಾಮೆರಾ ಹಿಡಿದಿದ್ದಾರೆ, ಪ್ರಶಾಂತ್ ಎಂ.ಆರ್. ಸಂಭಾಷಣೆಗಳನ್ನು ಬರೆದಿದ್ದಾರೆ. ಹೊಸ ಜೀವನ ಸಿನಿಮಾದಲ್ಲಿ ಸ್ನೇಹ, ಪ್ರೀತಿ, ಜೀವನದ ಹೋರಾಟ ಹಾಗೂ ಜೀವನದ ಮೌಲ್ಯಗಳ ಸುತ್ತ ನಡೆಯುವ ಕಥೆಯನ್ನು ಮೋಹನ್‌ಕುಮಾರ್ ಅವರು ಹೇಳಿದ್ದಾರೆ.



ಕನಕರಾಜ

ಲಾಯರ್ ಸಿಎಂ ಆದ ಕಥೆ

ಈಗಿನ ವಿದ್ಯಾವಂತರು, ಯುವಕರು ರಾಜಕೀಯಕ್ಕೆ ಬರಬೇಕು ಅಂತ ಆಗಾಗ ನಾವೆಲ್ಲ ಹೇಳುತ್ತಿರುತ್ತೇವೆ. ಅದೇರೀತಿ ಯುವಕನೊಬ್ಬ ರಾಜಕೀಯಕ್ಕೆ ಬಂದರೆ, ಸಿಎಂ ಆದರೆ ಹೇಗಿರುತ್ತೆ ಅನ್ನೋದನ್ನು ಕನಕರಾಜ ಚಿತ್ರದ ಮೂಲಕ ನಿರ್ದೇಶಕ ರವೀಂದ್ರ ಅವರು ಹೇಳಹೊರಟಿದ್ದಾರೆ, ನಾಯಕ ವಕೀಲನಾದರೂ ರಾಜಕೀಯದಲ್ಲೂ ಸಕ್ರಿಯ. ಜೊತೆಗೆ ಮುಖ್ಯಮಂತ್ರಿಗಳ ಅಭಿಮಾನಿಯೂ ಹೌದು. ಹಾಗಾಗೇ ಈ ಚಿತ್ರಕ್ಕೆ ಫ್ಯಾನ್ ಆಫ್ ಸಿಎಂ ಎಂಬ ಅಡಿಬರಹವಿದೆ.

ಎಸ್.ಆರ್. ಸನತ್‌ಕುಮಾರ್ ಅವರ ನಿರ್ಮಾಣದ ಈ ಚಿತ್ರಕ್ಕೆ ಡಾ॥ವಿ.ನಾಗೇಂದ್ರಪ್ರಸಾದ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಸಂಗೀತ ಸಂಯೋಜನೆ ಮಾಡಿದ್ದಾರೆ. ಆರ್.ರವೀಂದ್ರ ಆಕ್ಷನ್ ಕಟ್ ಹೇಳಿದ್ದಾರೆ, ಈ ಚಿತ್ರದಲ್ಲಿ ಎಚ್.ಎಂ. ರೇವಣ್ಣ ಅವರ ಪುತ್ರ ಅನೂಪ್ ರೇವಣ್ಣ ನಾಯಕನಾಗಿ ನಟಿಸಿದ್ದಾರೆ. ಇತ್ತೀಚೆಗೆ ಕನಕರಾಜ ಚಿತ್ರದ ಮೊದಲ ಹಾಡು ಹಾಗೂ ಮೋಷನ್ ಪೋಸ್ಟರ್ ಬಿಡುಗಡೆ ಸಮಾರಂಭ ಚಲನಚಿತ್ರ ಕಲಾವಿದರ ಸಂಘದಲ್ಲಿ ನೆರವೇರಿತು.

ಹಾಡು–ಮೋಷನ್ ಪೋಸ್ಟರ್ ಬಿಡುಗಡೆ

ಡಾ॥ವಿ.ನಾಗೇಂದ್ರಪ್ರಸಾದ್ ಬರೆದು ಸಂಗೀತ ಸಂಯೋಜಿಸಿರುವ ಈ ಚಿತ್ರದ ಮೊದಲ ಹಾಡನ್ನು ಮಾಜಿ ಸಚಿವ ಎಚ್.ಎಂ. ರೇವಣ್ಣ ಅವರು ರಿಲೀಸ್ ಮಾಡಿದರು. ಮೋಷನ್ ಪೋಸ್ಟರನ್ನು ಹಿರಿಯ ನಟ ದೊಡ್ಡಣ್ಣ ಬಿಡುಗಡೆ ಮಾಡಿದರು. ರಾಜಕೀಯ ಮುಖಂಡರಾದ ವೆಂಕಟೇಶ್, ನಿರ್ಮಾಪಕರ ಸಂಘದ ಉಪಾಧ್ಯಕ್ಷರಾದ ನಂದಿಹಾಳ್, ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡ ಮುಂತಾದವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕನಕರಾಜ ಚಿತ್ರಕ್ಕೆ ಶುಭ ಕೋರಿದರು.

ನಿರ್ಮಾಪಕ ಎಸ್.ಆರ್. ಸನತ್‌ಕುಮಾರ್ ಮಾತನಾಡುತ್ತ ಇದೊಂದು ವಿಭಿನ್ನ ಕಥಾನಕ. ಈಗಿನ ಯುವಜನತೆಯ ಮನಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಿ.ನಾಗೇಂದ್ರಪ್ರಸಾದ್ ಅವರು ಕಥೆ, ಚಿತ್ರಕಥೆ ಬರೆದಿದ್ದಾರೆ. ಅನೂಪ್ ರೇವಣ್ಣ ಒಬ್ಬ ಲಾಯರ್ ಹಾಗೂ ಸಿಎಂ ಅಭಿಮಾನಿಯಾಗಿ ಕಾಣಿಸಿಕೊಂಡಿದ್ದಾರೆ, ಈ ಚಿತ್ರದ ನಾಯಕಿಯಾಗಿ ನಿಮಿಷ ಅವರು ನಟಿಸಿದ್ದಾರೆ. ಹಿರಿಯ ಕಲಾವಿದರಾದ ಶ್ರೀನಾಥ್, ರಾಮಕೃಷ್ಣ, ಪದ್ಮಾವಾಸಂತಿ, ಯಮುನಾ ಶ್ರೀನಿಧಿ ಉಳಿದ ತಾರಾಬಳಗದಲ್ಲಿದ್ದಾರೆ. ಚಿತ್ರದ ಮೊದಲ ಹಾಡನ್ನು ಬಿಡುಗಡೆ ಮಾಡಲಾಗಿದ್ದು, ಇನ್ನೂ ಮೂರು ಹಾಡುಗಳು ಚಿತ್ರದಲ್ಲಿವೆ. ಮುಂದಿನ ತಿಂಗಳು ಚಿತ್ರವನ್ನು ತೆರೆಗೆ ತರುವ ಪ್ರಯತ್ನ ನಡೆಯುತ್ತಿದೆ ಎಂದರು.

ಡಾ॥ವಿ.ನಾಗೇಂದ್ರಪ್ರಸಾದ್ ಮಾತನಾಡುತ್ತ ನಿರ್ಮಾಪಕ ಸನತ್‌ಕುಮಾರ್ ಹಾಗೂ ನಿರ್ದೇಶಕ ರವೀಂದ್ರ ಅವರು ಈ ಚಿತ್ರದ ಸಂಗೀತ ನಿರ್ದೇಶನದ ಜೊತೆಗೆ, ಕಥೆ, ಚಿತ್ರಕಥೆಯನ್ನು ನೀವೇ ಬರೆಯಬೇಕೆಂದು ಹೇಳಿದರು. ಇಂದಿನ ಯುವಪೀಳಿಗೆಗೆ ಹತ್ತಿರವಾದ ಕಥೆ. ಚಿತ್ರದಲ್ಲಿ ನಾಯಕ ಮುಖ್ಯಮಂತ್ರಿಗಳ ಅಭಿಮಾನಿ, ಆತ ಹೇಗೆ ಸಿಎಂ ಆಗ್ತಾನೆ ಅನ್ನೋದೇ ಕುತೂಹಲ ಎಂದು ಹೇಳಿದರು. ನಾಯಕ ಅನೂಪ್ ರೇವಣ್ಣ ಮಾತನಾಡಿ ಇದು ನನ್ನ 5ನೇ ಚಿತ್ರ. ಇದರಲ್ಲಿ ನಾನು ಒಬ್ಬ ವಕೀಲನ ಪಾತ್ರ ನಿರ್ವಹಿಸಿದ್ದೇನೆ. ಮುಖ್ಯಮಂತ್ರಿ ರಾಮಯ್ಯ ಅವರ ಅಭಿಮಾನಿಯೂ ಆಗಿರುತ್ತೇನೆ ಎಂದು ಹೇಳಿದರು.

ನಿರ್ದೇಶಕ ಆರ್.ರವೀಂದ್ರ ಮಾತನಾಡಿ ಕನಕರಾಜ, ನನ್ನ ಹಾಗೂ ನಿರ್ಮಾಪಕರ ಕಾಂಬಿನೇಷನ್‌ನಲ್ಲಿ ಮೂಡಿಬರುತ್ತಿರುವ ಮೂರನೇ ಚಿತ್ರ. ಸಿನಿಮಾ ಚೆನ್ನಾಗಿ ಮೂಡಿಬಂದಿದೆ ಎಂದು ಹೇಳಿದರು.

ಊರಬ್ಬದಲ್ಲಿ ಜಾತ್ರೆಯ ನೈಜದೃಶ್ಯ

ಮಾಗಡಿ ತಾಲ್ಲೂಕಿನ ಸುಪ್ರಸಿದ್ಧ ಉಜ್ಜನಿ ಚೌಡೇಶ್ವರಿ ಜಾತ್ರೆ, ಅದರ ಹಿನ್ನೆಲೆಯಲ್ಲಿ ನಡೆಯುವ ಕಥೆ ಇಟ್ಟುಕೊಂಡು ನಿರ್ದೇಶಕ ಲಕ್ಕಿ ಶಂಕರ್ ಊರಬ್ಬ ಎಂಬ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ಒನ್ಸ್‌ಮೋರ್ ಕೌರವ ಖ್ಯಾತಿಯ ನರೇಶ್‌ಗೌಡ ನಾಯಕನಾಗಿ ನಟಿಸುವ ಜತೆಗೆ ನಿರ್ಮಾಣ ಸಹ ಮಾಡಿದ್ದಾರೆ, ದೊಡ್ಡಣ್ಣ, ತನಿಷಾ ಕುಪ್ಪಂಡ, ಶಾಮಿಲ್ ಬಂಗೇರ, ಸಿದ್ದು ಮೂಲಿಮನಿ, ಮಿಮಿಕ್ರಿ ಗೋಪಿ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದ ಟ್ರೈಲರ್‌ನ್ನು ಶಾಸಕ ರಂಗನಾಥ್ ಬಿಡುಗಡೆಗೊಳಿಸಿದರು. ವಿಶೇಷವಾಗಿ ಈ ಚಿತ್ರದಲ್ಲಿ ಚೌಡೇಶ್ವರಿ ಜಾತ್ರೆಯ ನೈಜ ದೃಶ್ಯಗಳನ್ನು ಎಂ.ಡಿ.ಶ್ರೀಧರ್, ಹೆಚ್.ವಾಸು, ಎವಿ ಕೃಷ್ಣಕುಮಾರ್, ಬಾಹುಬಲಿ, ಅಕ್ಬರ್ ಹೀಗೆ ಐವರು ನಿರ್ದೇಶಕರು 8 ಕ್ಯಾಮೆರಾ ಬಳಸಿ ಸೆರೆಹಿಡಿದಿದ್ದಾರೆ.

ಈವೇಳೆ ಹೆಚ್.ವಾಸು ಮಾತನಾಡಿ ನಾವೆಲ್ಲ ನಿರ್ಮಾಪಕರ ಊರಿಗೆ ಹಬ್ಬಕ್ಕೆ ಅಂತಾನೇ ಹೋಗ್ತಿದ್ವಿ. ಅಲ್ಲಿ ಜಾತ್ರೆಯ ವೇಳೆ ನಡೆಯುವ ಒಂದಷ್ಟು ಘಟನೆಗಳನ್ನು ಇಟ್ಕೊಂಡು ಈ ಸಿನಿಮಾ ಮಾಡಿದ್ದೇವೆ. ಎಲ್ಲರೂ ಸೇರಿ ಚಿತ್ರದ ಡೈಲಾಗ್ ಬರೆದಿದ್ದೇವೆ ಎಂದರು.

ನಿರ್ದೇಶಕ ಲಕ್ಕಿ ಶಂಕರ್ ಮಾತನಾಡಿ ಇದು ನಾನು ಮಾಡಿದ್ದಲ್ಲ, ಆ ಚೌಡೇಶ್ವರಿಯೇ ಮಾಡಿಸಿದ್ದು, ಆಕೆಯ ಶಕ್ತಿಯನ್ನು ನಂಬಿ ಈ ಚಿತ್ರ ನಿರ್ದೇಶಿಸಿದ್ದೇನೆ. ನಾನು 90 ಚಿತ್ರದಿಂದ ಹಿಡಿದು ಕಂಟೆಂಟ್ ಬೇಸ್ ಸಿನಿಮಾಗಳನ್ನೇ ಮಾಡಿಕೊಂಡು ಬಂದವನು. ಏನಾದರೂ ವಿಶೇಷ ಮಾಡೋಣ ಎಂದುಕೊಂಡಾಗ ಈ ಕಾನ್ಸೆಪ್ಟ್ ಹೊಳೆಯಿತು. ಶೂಟಿಂಗ್ ಮಾಡುವಾಗ ಊರ ಜನರ ಸಹಕಾರ ತುಂಬಾ ಇತ್ತು. ಈ ಥರದ ಪ್ರಯೋಗ ಮಾಡಲು ನಿರ್ಮಾಪಕರೂ ಸಾಥ್ ನೀಡಿದರು. ಉಗಾದಿ ಹಬ್ಬವಾದ 15 ದಿನಗಳ ನಂತರ ಈ ಜಾತ್ರೆ ಪ್ರಾರಂಭವಾಗುತ್ತೆ. ಡೈಲಾಗ್ ಬರೆದಿರುವ ವಾಸು, ಶ್ರೀಧರ್ ಅವರುಗಳೇ ಇದರ ನಿಜವಾದ ನಿರ್ದೇಶಕರು, ಅವರ ಸಲಹೆ ತಗೊಂಡು ಇಡೀ ಜಾತ್ರೆಯನ್ನು ಲೈವ್ ಆಗಿ ಶೂಟ್ ಮಾಡಿದ್ದೇವೆ. ಇಂಥ ಪ್ರಯತ್ನ ಭಾರತದಲ್ಲೇ ಮೊದಲು. ಸಾವಿರಾರು ವರ್ಷಗಳ ಹಿಂದೆ ನಡೆದ ಇತಿಹಾಸವನ್ನು ತಿಳಿದುಕೊಂಡು ಸಿನಿಮಾ ಮಾಡಿದ್ದೇನೆ. ಸೆನ್ಸಾರ್ ವೇಳೆ ಸ್ವಲ್ಪ ತೊಂದರೆ ಆದರೂ, ಸರಿ ಮಾಡಿಕೊಂಡೆವು ಎಂದರು.

ನಿರ್ಮಾಪಕ ನರೇಶ್‌ಗೌಡ್ರು ಮಾತನಾಡಿ ಈ ಸಿನಿಮಾ ಆಗಲು ಮುಖ್ಯ ಕಾರಣ ಲಕ್ಕಿ ಶಂಕರ್, ನಾನು ಸಿನಿಮಾನೇ ಮಾಡಬಾರದು ಎಂದುಕೊಂಡಿದ್ದೆ. ಈ ಚಿತ್ರ ಮಾಡಿಸಿದೆ. ಈ ಜಾತ್ರೆಯಲ್ಲಿ ತುಂಬಾ ವಿಶೇಷಗಳಿವೆ. ಅದು ಜನ ದಲಿತರಿಗೆ ಜನಿವಾರ ಹಾಕಿಸಿ ಅವರಿಂದ ಅಗ್ನಿಕುಂಡ ದಾಟಿಸುತ್ತಾರೆ. ಚಿತ್ರದಲ್ಲಿ 30 ರಿಂದ 40 ಜನ ಕಲಾವಿದರು ಆಕ್ಟ್ ಮಾಡಿದ್ದಾರೆ. ನಾನೂ ಒಂದು ಪಾತ್ರ ಮಾಡಿದ್ದೇನೆ. ಚಿತ್ರಕ್ಕೆ ತುಂಬಾ ಜನ ತಂತ್ರಜ್ಞರು ಕೈಜೋಡಿಸಿದ್ದಾರೆ ಎಂದು ಹೇಳಿದರು.

ನಟ ತನಿಷಾ ಕುಪ್ಪಂಡ ಮಾತನಾಡಿ ಎಲ್ಲರ ಪರಿಶ್ರಮದಿಂದ ಈ ಸಿನಿಮಾ ಆಗಿದೆ. ಊರಬ್ಬಕ್ಕೆ ಹೋಗಿ ಅಲ್ಲಿನ ಪಾತ್ರಧಾರಿಗಳಾಗಿ ನಾವು ಕೆಲಸ ಮಾಡಿದ್ದೇವೆ ಎಂದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26